the Government is considering to take over the Institution as the Institution has violated all the Rules and Regulations of the Government since its inception?

Thirdly whether the Hon'ble Minister for Primary and Secondary Education would take drastic action against the Management of the Institution and the officers who are involved and who have colluded with the Management and they may be suspended immediately till the enquiry into the whole episode is completed?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಶಿಕ್ಷಣಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದಲ್ಲಿರುವ ಮುನೇಶ್ವರ ಸ್ವಾಮಿ ಉಪಾಧ್ಯಾಯರ ಟ್ರೈನಿಂಗ್ ಇನ್ಸಿಟ್ಯೂಟ್ನಲ್ಲಿ 30 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. 93-94ನೇ ಸಾಲಿನಲ್ಲಿ ಈ ಸಂಸ್ಥೆಯು 94 ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿದ್ದರು. ಇದನ್ನು ಅಧಿಕಾರಿ ವರ್ಗದವರು ಭೇಟಿ ಮಾಡಿದಾಗ ಇದನ್ನು ಕಂಡು ಹಿಡಿದು ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ವಶಪಡಿಸಿಕೊಂಡಿದ್ದಾರೆ. ಅಡ್ಮಿಷನ್ ರಿಜಿಸ್ಟರ್ನಲ್ಲಿ 93-94ಕ್ಕೆ 23-9-93ರವರೆಗೂ ದಾಖಲಾಗಿದೆ. 124 ಜನ ಸೇರಿಸಿದ್ದೇವೆ ಅಂತ ಒಂದೇ ಅಟೆಂಡೆನ್ಸ್ ರಿಜಿಸ್ಟರ್ನಲ್ಲಿ ಬರೆಯಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು 30 ಜನ ವಿದ್ಯಾರ್ಥಿಗಳಿಗೆ ಮಾತ್ರ ಅಡ್ಮಿಷನ್ ಕೊಡಿ, ಬೇರೆಯವರಿಗೆ ಕೊಡಬೇಡಿ ಎನ್ನುವ ಸೂಚನೆಯನ್ನು ಕೊಡಲಾಗಿದೆ. ಡೊನೇಶನ್ ವಸೂಲಿ ಮಾಡಿರುವ ಬಗ್ಗೆ ಯಾರಿಂದಲೂ ಫಿರ್ಯಾದು ಬಂದಿಲ್ಲ. 92-93ನೇ ಸಾಲಿನಲ್ಲೂ ನಿಗಧಿಯಾದುದಕ್ಕಿಂತ 40 ಜನ ಹುಡುಗರನ್ನು ಜಾಸ್ತಿ ತೆಗೆದುಕೊಂಡಿದ್ದರು. ಮಾನ್ಯ ಹೈಕೋರ್ಟ್ ಆಜ್ಞೆಯಂತೆ ಇವರನ್ನು ಪರೀಕ್ಷೆಗೆ ಕೂರಿಸಲಾಗಿದೆ. ಈ ಸಂಸ್ಥೆಗೆ ಏತಕ್ಕೆ ನಿಮ್ಮಮೇಲೆ ಕ್ರಮ ತೆಗೆದುಕೊಳ್ಳಬಾರದು ಎನ್ನುವನೋಟೀಸ್ ಸಹ ಜಾರಿ ಮಾಡಲಾಗಿದೆ. ಬೆಂಗಳೂರಿನ ಡಿಡಿಪಿಐ ರವರಿಗೆ ಆದೇಶವನ್ನು ಕಳುಹಿಸಿ ಇವರಮೇಲೆ ಕ್ರಮತೆಗೆದುಕೊಳ್ಳಿ ಎಂದು ತಿಳಿಸಲಾಗಿದೆ. ನಿಗಧಿಯಾಗಿದ್ದಕ್ಕಿಂತ ಹೆಚ್ಚು ಇರುವ ವಿದ್ಯಾರ್ಥಿಗಳನ್ನು ಅಡ್ಮೀಷನ್ಗೆ ಒಪ್ಪಿಸುವುದಕ್ಕೆ ಸಕ್ರಮಗೊಳಿಸುವುದಕ್ಕೆ ಸಾಧ್ಯ ಇಲ್ಲ. ಈ ಸಂಸ್ಥೆಗೆ ಕೊಟ್ಟಿರತಕ್ಕಂಥ ರೆಕಗ್ನಿಷನ್ ವಾಪಸ್ಸು ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಿರುವುದರಿಂದ ಈ ಸಂಸ್ಥೆಯನ್ನು ಸರ್ಕಾರದವರು ತೆಗೆದುಕೊಳ್ಳಬೇಕಾದುದು ಇಲ್ಲ. ಇಲಾಖೆಯವರು ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿರುವುದರರಿಂದ ಆ ಪ್ರಕಾರವಾಗಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಯಾವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2-00 ಗಂಟೆಗೆ ಮುಂದೂಡಿ ಮತ್ತೆ 3-00 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು 3-45ಕ್ಕೆ ಮತ್ತೆ ಪ್ರಾರಂಭವಾಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಭಾಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ವಹಿಸಿದ್ದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ

+ ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಸಭಾಧ್ಯಕ್ಷರೇ, ಹೊಸ ವರ್ಷ ರಾಜ್ಯಪಾಲರು ಮಾಡಿದಂತಹ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ

ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಈ ವಂದನಾ ನಿರ್ಣಯವನ್ನು ಮಾಡುವಾಗ ಈ 'ಬೆಗ್' ಎನ್ನುವ ಪದವನ್ನು ಉಪಯೋಗಿಸಲೇ ಬೇಕೇ ಎನ್ನುವುದು ನನ್ನ ಪ್ರಶ್ನೆ. ನಮಗೆ ಸ್ವಾತಂತ್ರ್ಯ ಬಂದು 47 ವರ್ಷವಾದ ಮೇಲೆ ರಾಜ್ಯಪಾಲರೋ ಮಹಾರಾಜರೋ ಮಂತ್ರಿಗಳೋ ನನಗೆ ಗೊತ್ತಿಲ್ಲ. ಯಾರಾದರೂ ಆಗಲೀ 'I beg to move" ಅನ್ನುವ ಪದವನ್ನು ಮುಂದಿನ ವರ್ಷದಿಂದಲಾದರೂ ನಿಲ್ಲಿಸಿ "Beg Leave to thank the Governor" ಗವರ್ನರ್ ಅನ್ನುವುದನ್ನು ಮುಂದಿನ ವರ್ಷದಿಂದಲಾದರೂ ಕೈ ಬಿಡಬೇಕು ಇದರ ಅವಶ್ಯಕತೆಯಲ್ಲವೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ರಾಜ್ಯಪಾಲರ ಭಾಷಣ 15ನೇ ಪ್ಯಾರಾದಲ್ಲಿ ನಮೂದಿಸಿರುವ ರೀತಿ ಇದರ ಉದ್ದೇಶ 2. ಒಂದನೆಯ ಉದ್ದೇಶ ಕಳೆದ ಒಂದು ವರ್ಷದ ಅವಧಿಯಲ್ಲಿ ಪ್ರಮುಖ ಸಾಧನೆಗಳ ಬಗ್ಗೆ ಮತ್ತು ಮುಂಬರುವ ವರ್ಷಗಳಲ್ಲಿ ನನ್ನ ಸರಕಾರದ ಕಾರ್ಯ ನಿಯಮಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ತಿಳಿಸಬಯಸುತ್ತೇನೆ ಎಂದು ಇದೆ. ಅಂದರೆ ಕಳೆದ ವರ್ಷ ಏನಾಯಿತು ಎನ್ನುವುದು ಒಂದು, ಮತ್ತೆ ಮುಂದಿನವರ್ಷ ಏನೇನು ಮಾಡುವುದು ಎನ್ನುವುದು ಮತ್ತೊಂದು. ಈ ಎರಡು ವಿಷಯಗಳನ್ನು ಕುರಿತು ರಾಜ್ಯಪಾಲರು ಭಾಷಣ ಮಾಡಬೇಕಾದ್ದು ಕಾರ್ಯಕ್ರಮವೆಂದು ಅವರೇ ಹೇಳಿಕೊಂಡಿದ್ದಾರೆ. ಮತ್ತೊಂದು ಪದ್ಧತಿ ಇದು ಅವಿವೇಕವೋ 'ಅಥವಾ ಏನೋ ಗೊತ್ತಿಲ್ಲ, ನನ್ನ ಪ್ರಕಾರ ಈ ರಾಜ್ಯಪಾಲರ ಭಾಷಣ ಅಂದರೆ ಒಂದು ಶ್ರಾದ್ಧ ಮಾಡಿದ ಹಾಗೆ. ಅಂದರೆ ಪ್ರತಿ ವರ್ಷ ಅದಕ್ಕೇನೂ ಪ್ರಾಮುಖ್ಯತೆ ಇರುವುದಿಲ್ಲ ಯಾವುದೋ ಒಂದು ದಿನಾಂಕವನ್ನು ನಿಗದಿ ಮಾಡಿ ಆ ದಿನಾಂಕದಲ್ಲಿ ಶ್ರಾದ್ಧ ಮಾಡಿ ಬಿಡುತ್ತಾರೆ. ಅದಕ್ಕಿಂತ ಹೆಚ್ಚಿಗೆ ಏನೂ ಪ್ರಯೋಜನ ನನ್ನ ಕಣ್ಣಿಗೆ ಕಾಣುತ್ತಿಲ್ಲ. ಇನ್ನೊಂದು ಅರ್ಥವಾಗದೆ ಇರುವ ವಿಷಯ ಯಾವುದು ಎಂದರೆ ಸರಕಾರವನ್ನು ರಾಜ್ಯಪಾಲರಿಗೆ ಯಾವಾಗ ಮಾರಾಟ ಮಾಡಿದರು, ಈ ಸರಕಾರವೆಂದು ಅವರ ಕೈಯಲ್ಲಿ ಹೇಳಿಸಿ. ಸರಕಾರವನ್ನು ರಾಜ್ಯಪಾಲರಿಗೆ ಯಾವಾಗ ಮಾರಿದಿರಿ ಎಂದು ನಾನು ಸರಕಾರದಲ್ಲಿ ವಿನಯದ ಪ್ರಾರ್ಥನೆ ಮಾಡುತ್ತೇನೆ. ಈ ಸರಕಾರವೆಂದಾದರೂ ಸಂಭೋದನೆ ಮಾಡಲಿ. ರಾಜ್ಯಪಾಲರಿಗೆ ಈ ಸರಕಾರವನ್ನು ಯಾವಾಗ ಮಾರಾಟ ಮಾಡಿದ್ದೇವೆ? ಇದನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ. ಈಗಾಗಲೇ ಹೇಳಿದ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಕಳೆದ ವರ್ಷವೇನು ಆಯಿತು ಮುಂದಿನ ವರ್ಷ ಏನೇನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ ಎನ್ನುವುದರರ ಬಗ್ಗೆ ದಾಖಲೆ ಈ ಭಾಷಣದಲ್ಲಿ ಇರಬೇಕಾಗುತ್ತದೆ. ಕಳೆದ ವರ್ಷ ಆಗಿದ್ದಂತಹ ಒಂದು ಪ್ರಮುಖ ಕಾರ್ಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. 14ನೇ ಪ್ಯಾರದಲ್ಲಿ ಹೀಗಿದೆ "ಭಾರತ ಸಂವಿಧಾನದ 73ನೆಯ ತಿದ್ದುಪಡಿಯ ಎಲ್ಲ ಪ್ರಮುಖ ಅಂಶಗಳನ್ನೊಳಗೊಂಡಂಥ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 93ಎಂಬ ಶಾಸನವನ್ನು ಜಾರಿಗೊಳಿಸುವಲ್ಲಿ ನನ್ನ ಸರಕಾರವು ದೇಶದಲ್ಲೇ ಪ್ರಪ್ರಥಮವೆಂಬುದು ಹೆಮ್ಮೆಯ ವಿಷಯ. ಇಷ್ಟನ್ನು ಹೇಳಿ ಮತ್ತೆ ಮುಂದುವರಿಸುತ್ತಾರೆ ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲ ಮೂರು ಹಂತಗಳು ಅಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳ ಒಟ್ಟು ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಶೇಕಡ 23ರ ಮೀಸಲಾತಿಯಲ್ಲದೆ, ಹಿಂದುಳಿದ ವರ್ಗಗಳಿಗೆ ಶೇಕಡ 33 ಮತ್ತು ಮಹಿಳೆಯರಿಗೆ ಶೇಕಡ 33ಕ್ಕೆ ಕಡಿಮೆಯಿಲ್ಲದಂತೆ ಮೀಸಲಾತಿಯನ್ನು ಶಾಸನಬದ್ಧಗೊಳಿಸಿರುವ ಪ್ರಥಮ ರಾಜ್ಯವಾಗಿದೆ." ಎಂದು ತಿಳಿಸಿದ್ದಾರೆ. ಪಂಚಾಯತ್ ರಾಜ್ ಪರಿಕಲ್ಪನೆ ಬಹುಶಃ ನಮಗೇನೂ ಹೊಸದಲ್ಲ, ಅರಳಿ ಕಟ್ಟೆಯ ಮೇಲೆ ಕುಳಿತು ಪಂಚಾಯತಿ ಮಾಡುತ್ತಿದ್ದ ವ್ಯವಸ್ಥೆಯಿತ್ತು. 56 ರಿಂದೀಚೆಗೆ ಈ ಪಂಚಾಯತ್ ರಾಜ್ ವ್ಯವಸ್ಥೆ ಪರಿಕಲ್ಪನೆ ಕಾನೂನಿನ ಚೌಕಟ್ಟಿನಲ್ಲಿ ಬಂದು, ಕಾಲಕಾಲಕ್ಕೆ ಅದನ್ನು ಬದಲಾವಣೆ ಮಾಡಿಕೊಂಡು ಬರುತ್ತಿದ್ದೇವೆ. ಆದರೆ ಇವರು ತಂದಿರುವುದು ಕ್ರಾಂತಿಕಾರಕವಾದ ಬದಲಾವಣೆ ಅವರ ಪ್ರಕಾರವಾಗಿ

ಯಾವುದೆಂದರೆ ಯಾರಿಗೆ ಈ ವ್ಯವಸ್ಥೆಯಲ್ಲಿ ಅಧಿಕಾರ ಸಿಕ್ಕಿಲ್ಲವೋ ಅಂಥವರಿಗೆ ಅಧಿಕಾರವನ್ನು ಕೊಡಲಿಕ್ಕೆ ಮೀಸಲಾತಿಯನ್ನು ತಂದಿದ್ದಾರೆ. ಇದು ಅತ್ಯಂತ ಶ್ಲಾಘನೀಯವಾದುದು. ಹಿಂದುಳಿದವರಿಗೆ ಪರಿಶಿಷ್ಟ ವರ್ಗದವರಿಗೆ, ಜಾತಿಯವರಿಗೆ ಯಾರಿಗೆ ಅಧಿಕಾರ ಸಿಕ್ಕಿಲ್ಲವೋ ಅಂತಹವರಿಗೆ ಮೀಸಲಾತಿಯನ್ನು ತರುವುದರ ಮುಖಾಂತರ ಕಾನೂನನ್ನು ತಂದಿರುವುದು ಬಹಳ ಉತ್ತಮವಾದ ಕೆಲಸ ಅದನ್ನು ಈ ಸರಕಾರದವರು ಕಾನೂನನ್ನು ತಂದಿರುವುದು ಬಹಳ ಉತ್ತಮವಾದ ಕೆಲಸ ಅದನ್ನು ಈ ಸರಕಾರದವರು ಮಾಡಿದ್ದಾರೆ. ಈ ಕೆಲಸ ಮಾಡುವಂತಹ ಸಂದರ್ಭದಲ್ಲಿ 72-73ನೇ ಸಂವಿಧಾನ ಸಂವಿಧಾನ ತಿದ್ದುಪಡಿಯಾಗಿದೆ. 72ರ ತಿದ್ದುಪಡಿ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಮೀಸಲಾತಿ, 73ರ ಪ್ರಕಾರ ತುಳಿತಕ್ಕೆ ಒಳಗಾಗಿರುವವರನ್ನು ಅಭಿವೃದ್ಧಿಗೊಳಿಸಲಿಕ್ಕೆ ಮೀಸಲಾತಿಯನ್ನು ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ತಮ್ಮ ಮೂಲಕ ಈ ಸರ್ಕಾರಕ್ಕೆ ಒಂದು ಪ್ರಾರ್ಥನೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರದಲ್ಲೂ ಅವರ ಸರ್ಕಾರ ಇರುವುದರಿಂದ 75ರ ತಿದ್ದುಪಡಿ ಒಂದು ತಂದು ಈ ವ್ಯವಸ್ಥೆಯನ್ನು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ವಿಸ್ತರಿಸಬೇಕು ಎಂಬುದು ನನ್ನ ಪ್ರಾರ್ಥನೆ. ಮಾನ್ಯ ಖರ್ಗೆಯವರೇ 75ನೇ ತಿದ್ದುಪಡಿಯನ್ನು ಸಂವಿಧಾನಕ್ಕೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ತಾವು ಹೇಳುವುದನ್ನು ಕೇಳುತ್ತಿದ್ದೇನೆ. ಸಂವಿಧಾನಕ್ಕೆ 75ನೇ ತಿದ್ದುಪಡಿ ತಂದು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅನ್ವಯಿಸಬೇಕು ಎಂದು ತಾವು ಹೇಳುತ್ತಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ: ಕೇಳುತ್ತಿದ್ದೀರಿ ತಾನೇ? ಅಷ್ಟೇ ಅಲ್ಲ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗುತ್ತೇನೆ. ಆಗ ಈ ರಾಜ್ಯಕ್ಕೆ ಒಬ್ಬ ಪರಿಶಿಷ್ಟ ಜಾತಿಯ ಮುಖ್ಯಮಂತ್ರಿ, ಈ ರಾಷ್ಟ್ರಕ್ಕೆ ಒಬ್ಬ ಹಿಂದುಳಿದ ವರ್ಗದ ಪ್ರಧಾನ ಕೊಡುವಂಥ ಪುಣ್ಯದ ಕೆಲಸ ಈ ಸರ್ಕಾರ ಈ ಪಕ್ಷ ಮಾಡಿದರೆ ಅವತ್ತು ಮಾತ್ರ ಬಹುಶಃ ಇವರ ಪ್ರಾಮಾಣಿಕತನವನ್ನು ಪ್ರಶ್ನೆ ಮಾಡುವ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಬಹುಶಃ ಅದನ್ನು ಮಾಡುವವರೆಗೆ ಇವರ ಪ್ರಾಮಾಣಿಕತೆ ಪ್ರಶ್ನೆ ಮಾಡಲೇಬೇಕಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ತುಳಿತಕ್ಕೆ ಒಳಗಾಗಿರುವ ಜನರ ವೋಟಿನ ಆಸೆಗಾಗಿ ಮಾಡಿರುವ ಒಂದು ಕುತಂತ್ರ ಎಂದು ಹೇಳದೇ ವಿಧಿಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಯಾವುದೇ ಒಂದು ಒಳ್ಳೆಯ ಕೆಲಸ ಮಾಡಿದರೆ ಅದು ಕುತಂತ್ರ ಎಂದು ಹೇಳಿದರೆ ಹೇಗೆ? ಏಕೆಂದರೆ ನೀವು ನಾವು ಎಲ್ಲರೂ ಹಾಗೆ ಹೇಳುತ್ತೇವೆ. 1983ರಲ್ಲಿ ಮೆಜಾರಿಟಿ ನಿಮ್ಮ ಪಾರ್ಟಿಗೆ ಬಂದಿತ್ತು ಯಾರಿಗೆ ಮುಖ್ಯಮಂತ್ರಿ ಮಾಡಿದಿರಿ? ಪರಿಶಿಷ್ಟ ಜಾತಿಯವರನ್ನು ಅನುಭವ ಇದ್ದವರು ಮಾಡಲಿಕ್ಕೆ ಇರಲಿಲ್ಲವೇ? ಇವು ಬರೇ ಶಾಸ್ತ್ರ ಹೇಳುವುದಕ್ಕೆ ಬದನೆಕಾಯಿ ಉಣ್ಣಲಿಕ್ಕೆ ಎನ್ನುವುದು ಬೇಡ. ಎಲ್ಲರೂ ಹಾಗೆ.

ಶ್ರೀಮತಿ ಮೋಟಮ್ಮ: ಕಾಮಾಲೆ ಕಣ್ಣಿಗೆ ಎಲ್ಲಾ ಹಳದಿಯಾಗಿ ಕಾಣುತ್ತದೆ ಎನ್ನುವ ರೀತಿ.

ಶ್ರೀ ವೈ.ಕೆ. ರಾಮಯ್ಯ: ಸನ್ಮಾನ್ಯ ಅಧ್ಯಕ್ಷರೇ, ತರ್ಕ ಯಾವಾಗಲೂ ತರ್ಕಕ್ಕೆ ಆಗಬಾರದು. ತರ್ಕದಿಂದ ಸತ್ಯದ ಶೋಧನೆ ಆಗಬೇಕು ಎಂದು ನಾನು ನಂಬಿಕೊಂಡಿರುವವನು. ನಾನೇನೂ ಕೇಳಿದರೆ ಅವರೇನೋ ಹೇಳಿದರೆ ನಾನೇನು ಮಾಡಲಿ? 1984ರಲ್ಲಿ ತಂದಂತಹ ಗ್ರಾಮ ಪಂಚಾಯತಿಯ ಶಾಸನದಲ್ಲಿ ಇಂತಹ ಒಂದು ಮೀಸಲಾತಿಯನ್ನು ನಾವೂ ತಂದಿದ್ದರೆ ಈ ಪ್ರಶ್ನೆ ಆಗ ಮಾತ್ರ ರೆಲೆವೆಂಟ್

ಆಗುತ್ತಿತ್ತು. ನನ್ನ ಪ್ರಾರ್ಥನೆ ಇಷ್ಟೇನೇ. ಯಾವ ಪ್ರಯೋಗವನ್ನು ನೀವು ಹಳ್ಳಿಗಳಲ್ಲಿ ಮಾಡುವುದಕ್ಕೆ ಹೊರಟಿದ್ದೀರೋ, ಯಾವ ಪ್ರಯೋಗವನ್ನು ಕೇವಲ ಒಂದೇ ಒಂದು ಲಕ್ಷ ರೂಪಾಯಿಗಳು ಆಯವ್ಯಯ ಇರುವ ಕಡೆ ಮಾರುವುದಕ್ಕೆ ಹೊರಟಿದ್ದೀರೋ, ಸಾವಿರಾರು ಕೋಟಿ ರೂಪಾಯಿಗಳನ್ನು ಹಂಚುವಂತಹ ಅಧಿಕಾರವನ್ನು ಆ ಕೆಳದರ್ಜೆಯ ಜನರಿಗೆ ಕೊಡುವಂತಹ ಪ್ರಯತ್ನವನ್ನು ಮಾಡಿ ಎಂದು ನಾನು ಕೇಳುತ್ತಿದ್ದೇನೆ. 1983ರಲ್ಲಿ ಆಯಿತು. ಅದಕ್ಕೂ ಇದಕ್ಕೂ ಹೋಲಿಸಬೇಡಿ. ಆ ಪ್ರಶ್ನೆಗೆ ಆಮೇಲೆ ಬರೋಣ. ನನ್ನ ಪ್ರಶ್ನೆ ಇಷ್ಟೇನೆ. ಈ ಒಂದು ವ್ಯವಸ್ಥೆ ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಲ್ಪ ವಿಸ್ತಾರ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದರ ಅವಶ್ಯಕತೆ ಏನು ಇತ್ತು ಎಂಬುದು ನನಗೆ ಗೊತ್ತಿಲ್ಲ. ಪ್ಯಾರಾ 21ರಲ್ಲಿ ಪ್ರಧಾನ ಮಂತ್ರಿಗಳಾದ ಪಿವಿ ನರಸಿಂಹರಾವ್ರವರು ಆರಂಭಿಸಿರುವ ಹೊಸ ಉದಾರ, ಆರ್ಥಿಕ ನೀತಿಗಳು ವಿಭಿನ್ನ ಕ್ಷೇತ್ರಗಳಲ್ಲಿರುವ ಖಾಸಗಿ ಉದ್ದಿಮೆಗಳು, ಸ್ವತಂತ್ರ ಉದ್ಯೋಗ ಮುಂತಾದವುಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ." ಹೊಸ ಉದಾರ ಆರ್ಥಿಕ ನೀತಿ ! ಒಬ್ಬರು ಪ್ರಧಾನ ಮಂತ್ರಿಗಳು ಇನ್ನೊಬ್ಬರು ಅತ್ಯಂತ ಪ್ರಾಜ್ಞರು, ಅತ್ಯಂತ ಬುದ್ಧಿವಂತರಾದಂತಹ ಆರ್ಥಿಕ ಮಂತ್ರಿಗಳು. ಇವರಿಬ್ಬರೂ ತಂದಿರುವ ಈ ಉದಾರ ಆರ್ಥಿಕ ನೀತಿಯಿಂದ ಈ ರಾಷ್ಟ್ರದ ಸಾಮಾನ್ಯ ಪ್ರಜೆಗೆ ಕಿಂಚಿತ್ತೂ ಅನುಕೂಲ ಆಗಿಲ್ಲ. ಕಾರುಕೊಂಡುಕೊಳ್ಳುವವನಿಗೆ ಆಗಿದೆ. ಫ್ರಿಡ್ಜ್ ಕೊಂಡುಕೊಳ್ಳುವವನಿಗೆ ಆಗಿದೆ.

DR. N.B.NANJAPPA : It is too early to tell that. It is a liberalisation policy.

ಅದು ಇದ್ದರೆ ದೀರ್ಘವಾಗಿ ಅದರ ಮೇಲೆ ಮಾತನಾಡಿ. ಬರೀ ಕಾಮೆಂಟ್ಗೋಸ್ಕರ ಮಾತನಾಡಿದರೆ ಪ್ರಯೋಜನ ಆಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ: ಈ ರಾಷ್ಟ್ರದ ಜನಸಾಮಾನ್ಯರಿಗೆ ಇಂತಹದೇ ಒಂದು ಅನುಕೂಲ ಆಗಿದೆ ಎಂದು ನನ್ನ ಗಮನಕ್ಕೆ ತಂದರೆ ಆಗ ಮಾತ್ರ ನಾನು ಮಾಡಿರತಕ್ಕ ಟೀಕೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಹೌದು ಅನುಕೂಲ ಆಗಿದೆ, ದೊಡ್ಡ ಮನುಷ್ಯರಿಗೆ ಅನುಕೂಲ ಆಗಿದೆ. ಈ ಆರ್ಥಿಕ ನೀತಿ ಎಂಟು ಸಾವಿರ ಕೋಟಿ ಅಪವ್ಯಯನಡೆಯುವಂತಹ ಪರಿಸ್ಥಿತಿಯನ್ನು ಈ ರಾಷ್ಟ್ರದಲ್ಲಿ ಕಾಣುವಂತಹ ಉದಾರ ನೀತಿಯೆಂದು ನಾನು ಅಂದುಕೊಂಡಿರಲಿಲ್ಲ. ಡಾ॥ ಮನ್ಮೋಹನ್ಸಿಂಗ್ ಅವರು ಇಂತಹದಕ್ಕೆಲ್ಲಾ ನಾನು ನಿದ್ದೆಗೆಡಲಾರೆ. I can not afford to close my sleep for such a small thing.

ಎಂಟು ಸಾವಿರ ಕೋಟಿ ರೂಪಾಯಿಗಳ ಅಪವ್ಯವಹಾರ ಈ ರಾಷ್ಟ್ರದಲ್ಲಿ ನಡೆದಾಗಲೂ ಕೂಡ ನಿದ್ದೆಗೆಡದಿರುವ ಆರ್ಥಿಕ ಮಂತ್ರಿ ತಂದಿರುವಂತಹ ಈ ಆರ್ಥಿಕ ನೀತಿಯಿಂದ ಈ ರಾಷ್ಟ್ರದ ಜನಸಾಮಾನ್ಯರಿಗೆ ಯಾವುದೇ ಕಿಂಚಿತ್ ಅನುಕೂಲ ಆಗಿಲ್ಲ; ದೊಡ್ಡವರಿಗೆ ಆಗಿದೆ. ಅದನ್ನು ಏಕೆ ಇಲ್ಲಿ ಪ್ರಸ್ತಾಪ ಮಾಡಿದರು ಎಂಬುದು ನನಗೆ ಗೊತ್ತಿಲ್ಲ. 24ನೇ ಪ್ಯಾರಾದಲ್ಲಿ ನಿವೇಶನಗಳನ್ನು ಹಂಚುವುದು ಮತ್ತು ಬಡವರಿಗೆ ಮನೆ ಕಟ್ಟುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಡವರಿಗೆ ಮನೆ ಕಟ್ಟುವಂತಹ ಒಂದು ಕಾರ್ಯಕ್ರಮ ಎಷ್ಟೊಂದು ಯಶಸ್ವಿಯಾಗಿದೆ ಎಂದು ನೋಡಬೇಕಾದರೆ ದಯಮಾಡಿ ತುಮಕೂರಿನಲ್ಲಿ ಬೆಳ್ಳಾವಿ ಕ್ಷೇತ್ರಕ್ಕೆ ಹೋಗಿ ಬನ್ನಿ.

ಅದು ಕಾಂಗ್ರೆಸ್ ಸದಸ್ಯರಾಗಿರುವ ಆರ್. ನಾರಾಯಣರವರ ಕ್ಷೇತ್ರ. ಅಲ್ಲಿ 120 ಮನೆಗಳನ್ನು ಅರ್ಧಂಬರ್ಧ ಕಟ್ಟಿ ನಿಲ್ಲಿಸಲಾಗಿದೆ. ಅದಕ್ಕೆ ದಾತರೂ ಇಲ್ಲ, ಫಿಯರ್ಾದೂ ಇಲ್ಲ. ಹೆಂಚು, ಕಿಟಕಿ, ಬಾಗಿಲುಗಳನ್ನು ಯಾವಾಗ ಹಾಕುತ್ತಾರೆಂದು ಯಾರೂ

ಹೇಳುವವರಿಲ್ಲ. ನನ್ನ ಕ್ಷೇತ್ರವಾದ ಕುಣಿಗಲ್ನಲ್ಲೂ ಕೂಡ ಹಾಗೆ ಅರ್ಧಂಬರ್ಧ ಕಟ್ಟಿ ನಿಲ್ಲಿಸಲಾದ 400 ಮನೆಗಳಿವೆ. ಈ ಕುರಿತು ಹೌಸಿಂಗ್ ಬೋರ್ಡ್ನವರನ್ನು ಕೇಳಿದರೆ ಅದು ನಮಗೆ ಸಂಬಂಧಪಡುವುದಿಲ್ಲ, ನಮಗೆ ದುಡ್ಡು ಬಂದಿಲ್ಲವಾದ್ದರಿಂದ ಕಂಟ್ರಾಕ್ಟರ್ ಕೋರ್ಟಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮಗೆ ಸಂಬಂಧಿಸಿದ್ದಲ್ಲ, ಇದು ಹೌಸಿಂಗ್ ಬೋರ್ಡಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಆದುದರಿಂದ, ಈ ರಾಜ್ಯದಲ್ಲಿ ಸೂರು ಇಲ್ಲದವರಿಗೆ ನಿವೇಶನಗಳನ್ನು ಹಂಚಿ ಮನೆಗಳನ್ನು ಕಟ್ಟಿಕೊಟ್ಟು ಸೂರನ್ನು ಕಲ್ಪಿಸಿಕೊಟ್ಟಿದ್ದೇವೆಂದು ಹೇಳಿಕೊಳ್ಳುವಂಥ ಸರ್ಕಾರ ಅರ್ಧಂಬರ್ಧ ಕಟ್ಟಿರುವ ಮನೆಗಳನ್ನು ಸಂಪೂರ್ಣ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿ ತನ್ನ ಮಾರ್ಯಾದೆ ಉಳಿಸಿಕೊಳ್ಳಲೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಬಹುಶಃ ನಿಮ್ಮ ಕ್ಷೇತ್ರದಲ್ಲೂ ಇದೇ ರೀತಿ ಆಗಿದೆಯೆಂದು ಕಾಣುತ್ತದೆ. ಆಶ್ರಯ ಯೋಜನೆಯಡಿ ಹೌಸಿಂಗ್ ಬೋರ್ಡಿನಿಂದ ಹಿಂದೆ ಆದಂಥ ಕರ್ಮಕಾಂಡ ಇದೆಯೆಲ್ಲಾ, ನಿಮ್ಮದೇನೇ ಕರ್ಮಕಾಂಡವಿರಲಿ, ಎಲ್ಲೆಲ್ಲಿ ಅರ್ಧಂಬರ್ಧ ಕಟ್ಟಿರುವ ಮನೆಗಳಿವೆ, ಅವುಗಳನ್ನು ಪೂರ್ತಿಗೊಳಿಸಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಣದ ಕುರಿತು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ಭಾಷಣ ಮಾಡುವುದಕ್ಕೆ ನನಗೆ ಅವಶ್ಯಕತೆಯಿಲ್ಲ. ನನ್ನ ಒಂದೇ ತಾಲ್ಲೂಕಿಗೆ ಸಂಬಂಧಿಸಿದಂತೆ ಒಟ್ಟು 250 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಬ್ಬರು ಕ್ಯಾಬಿನೆಟ್ ದರ್ಜೆ ಸಚಿವರೂ ಕೂಡ ಇದ್ದಾರೆ. ಅವರೇ ಅತ್ಯಂತ, ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು. ಅಲ್ಲಿ 250 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆ ಖಾಲಿ ಇದೆ, ಮತ್ತೆ ಯಾವುದಕ್ಕೆ ನಿಮ್ಮ ಆದ್ಯತೆ? ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ರೀಸರ್ಚ್ಗೆ ನೀವು 5 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. I am not worried and I don't object. ಈ ರಾಜ್ಯದ ಜನತೆಗೆ ನೀವು ಯಾವುದೂ ಕೊಡುವುದೂ ಬೇಡ. ಪಾಠ ಹೇಳುವುದಕ್ಕೆ ಒಬ್ಬ ಉಪಾಧ್ಯಾಯರನ್ನು ಕೊಡದಿರುವಂಥ ಪರಿಸ್ಥಿತಿ ಇಟ್ಟುಕೊಂಡು, ರಾಜ್ಯದಲ್ಲಿ ಸುಮಾರು 10-15 ಸಾವಿರ ಶಾಲಾ ಉಪಾಧ್ಯಾಯರ ಕೊರತೆ ಇದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಈ ರೀತಿ ಖಾಲಿಯಿರುವ ಶಾಲಾ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡದೆ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ನೀವು ಮಾಡುವ ಯಾವುದೆ ಒಂದು ಕೆಲಸ ಸಾರ್ಥಕವಾಗಲಾರದೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ. ಈ ರಾಜ್ಯದ, ರಾಷ್ಟ್ರದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ನಿಮಗೇನಾದರೂ ಕಿಂಚಿತ್ ಅಭಿಲಾಷೆ, ಆಸೆ-ಆಕಾಂಕ್ಷೆಗಳಿದ್ದರೆ ಮೊದಲು ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳನ್ನು ಎಲ್ಲಾ ಊರುಗಳಲ್ಲೂ ನೇಮಿಸುವಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಾಜ್ಯಪಾಲರು ತಮ್ಮ ಭಾಷಣದ 30ನೇ ಪ್ಯಾರಾದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಸಾಕ್ಷರತಾ ಆಂಧೋಲನ ಯಾರ ಚಿಂತನೆಯ ಕೂಸು ಎಂದು ನನಗಂತೂ ಗೊತ್ತಿಲ್ಲ. ಆದರೆ, ಈ ಕಾರ್ಯಕ್ರಮ ಹಮ್ಮಿಕ್ಕೊಂಡು ಅಧಿಕಾರಿಗಳು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲೂ ಸುಮಾರು 3 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆ ಜಿಲ್ಲೆಯನ್ನು 'ಸಾಕ್ಷರತಾ ಜಿಲ್ಲೆ' ಎಂದೂ ಸಾರಿದ್ದಾರೆ. ತುಮಕೂರು ಜಿಲ್ಲೆಯ ಮಂತ್ರಿಗಳು ಸದನದಲ್ಲಿದ್ದಾರೋ? ಇಲ್ಲವೋ ಗೊತ್ತಿಲ್ಲ. ಸಂಪೂರ್ಣ ಸಾಕ್ಷರತಾ ಜಿಲ್ಲೆ ಎಂದು ಘೋಷಿಸಿರುವಂಥ ಜಿಲ್ಲೆಯಲ್ಲಿ ಮಂಡಲ ಪಂಚಾಯತಿಗೆ ಹೆಬ್ಬೆಟ್ಟು ಹಾಕಲ್ಪಟ್ಟ ಎಷ್ಟು ಅರ್ಜಿಗಳು ಬಂದಿದ್ದವು ಎಂಬ ಬಗ್ಗೆ ದಯಮಾಡಿ ನಮಗೆ ಮಾಹಿತಿ ಒದಗಿಸಿಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜನರನ್ನು ಸಾಕ್ಷರರೆಂದು ಘೋಷಿಸಬೇಕಾದರೆ ಅದಕ್ಕೊಂದು ವಯಸ್ಸಿನ ಮಿತಿ ಇದೆ. 35 ವರ್ಷದೊಳಗೆ ಇರತಕ್ಕಂಥವರಿಗೆ ಮಾತ್ರ ಇದು ಅನ್ವಯಿಸುತ್ತದೆ. ನೀವು ಹೇಳುತ್ತಿರುವಂತೆ 60-70 ವರ್ಷ ವಯಸ್ಸಾಗಿರುವವರು ಇರಬಹುದು. ಇದಕ್ಕೆ ವಯಸ್ಸಿನ ಮಿತಿಯನ್ನು ನಿಗದಿಪಡಿಸಿದ್ದೇವೆ, ಆ ಮಿತಿಯೊಳಗಿರತಕ್ಕಂಥವರು ಸಾಕ್ಷರರಾದರೆ ಅಂದರೆ ಕನಿಷ್ಠ ಪಕ್ಷ ಅವರಿಗೆ ತಮ್ಮ ಸಹಿಯನ್ನಾದರೂ ಮಾಡುವುದಕ್ಕೆ ಬರಬೇಕು. ಒಬ್ಬರು 50 ವರ್ಷದವರಿರಬಹುದು, ಅವರಿಗೆ ಬರೆಯುವುದಕ್ಕೆ ಸಾಧ್ಯವಾಗದಿರಬಹುದು, ಅ ೇ ರೀತಿ 60-70 ವರ್ಷದವರೂ ಇರಬಹುದು. ಅದಕ್ಕೋಸ್ಕರ ವಯಸ್ಸಿನ ಮಿತಿಯನ್ನು ೀ ಸಾಕ್ಷರತಾ ಆಂಧೋಲನದಲ್ಲಿ ನಿಗದಿಪಡಿಸಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ : ನಾನು ಅರ್ಥಮಾಡಿಕೊಂಡಿರುವಂತೆ 'ಸಾಕ್ಷರತಾ ಆಂಧೋಲನ' ಎಂದರೆ ಶಾಲೆಗೆ ಹೋಗುವಂಥ ಮಕ್ಕಳ ವಯಸ್ಸಿಗೆ ಮೀರಿದಂಥ ಉಳಿದಂಥವರಿಗೆ ಅಕ್ಷರವನ್ನು ಕಲಿಸುವ ಆಂಧೋಲನಕ್ಕೆ 'ಸಾಕ್ಷರತಾ ಆಂಧೋಲನ' ವೆಂದು ನಾನು ತಿಳಿದುಕೊಂಡಿದ್ದೇನೆ. ಅದು ಸರಿಯೇ ತಪ್ಪೇ ಎಂಬುದನ್ನು ಅವರೇ ಹೇಳಲಿ. ಯಾವ ಮಕ್ಕಳು ಶಾಲೆಗೆ ಹೋಗುವಂಥ ವಯಸ್ಸಿನಲ್ಲಿರುತ್ತಾರೋ, ಅವರನ್ನು ಹೊರತುಪಡಿಸಿ ಉಳಿದಂಥವರಿಗೆ ವಿದ್ಯೆ ಕಲಿಸುವುದಕ್ಕೆ 'ಸಾಕ್ಷರತಾ ಆಂಧೋಲನ' ವೆಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ, ಶಾಲೆಗೆ ಹೋಗುವವರಂತೂ ಬರೆಯುವುದನ್ನು ಕಲಿತಿರುತ್ತಾರೆ, ಹುಡುಗರಿಗೆಲ್ಲಾ ಸಾಕ್ಷರತಾ ಆಂಧೋಲನ ಮಾಡಿದನಂತರ ಅವರು ಕಲಿತಿರಲೇಬೇಕು. ಶಾಲೆಗೆ ಹೋಗುವವರು ಸಾಕ್ಷರರಾಗಿದ್ದಲ್ಲಿ ಹೆಬ್ಬೆಟ್ಟು ಒತ್ತಿದ ಒಂದು ಅರ್ಜಿಯೂ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾಧ್ಯವಿರುತ್ತದೆ. ಆದರೆ, ನಿಗದಿಪಡಿಸಿದ ವಯಸ್ಸಿಗಿಂತ ಮೇಲ್ಪಟ್ಟ ಅನೇಕ ಜನರಿರುತ್ತಾರೆ. ಅವರುಗಳಿಂದ ಹೆಬ್ಬೆಟ್ಟು ಒತ್ತಿದ ಅರ್ಜಿಗಳು ಬಂದರೂ ಬರಬಹುದು, ಬರದಿದ್ದರೆ ಇಲ್ಲ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಇನ್ನು ಸಾರ್ವಜನಿಕ ವಿತರಣಾ ಪದ್ಧತಿ ಬಗ್ಗೆ ಆಯವ್ಯಯ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಅವರು ಏನೇನೊ ಸ್ವಲ್ಪ ಚುರುಕಾಗಿ ಕೆಲಸವನ್ನು ಮಾಡುತ್ತಿದ್ದರು. ಅಂಗಡಿಗಳನ್ನು ರೇಡ್ ಮಾಡುತ್ತಿದ್ದರು. ಲೈಸೆನಸ್ಸು ಕ್ಯಾನ್ಸಲ್ ಮಾಡುತ್ತಿದ್ದುದು ಆಗಾಗ್ಗೆ ಪತ್ರಿಕೆಯಲ್ಲಿ ಬರುತ್ತಿತ್ತು. ಇದ್ಯಾವುದೋ ಚಟುವಟಿಕೆ ಎಂತದ್ದೊ ಶುರುವಾದ ಮೇಲೆ ಅವರು ನಿಷ್ಕ್ರಿಯರಾದರು. ಈಗ ಅವರ ಚಟುವಟಿಕೆಗಳೇ ನಮ್ಮ ಗಮನಕ್ಕೆ ಬರುತ್ತಿಲ್ಲ. ಸ್ವಲ್ಪ ಚುರುಕಾಗಿ ಕೆಲಸವನ್ನು ಮಾಡುತ್ತಿದ್ದರು ಅವರು. ಅದರಿಂದ ನಾವ್ಯಾರು ಕೂಡ ಅವರನ್ನು ಅಪ್ರೋಚ್ ಮಾಡುವಂಥ ಅವಶ್ಯಕತೆಯೇ ಬಂದಿರಲಿಲ್ಲ. ಸ್ವಲ್ಪ ನಿಯಮವನ್ನು ನ್ಯಾಯಬೆಲೆ ಅಂಗಡಿಗಳಿಗೆಲ್ಲ ಕೂಡ ತಂದಿದ್ದರು ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸರ್ಕಾರದಲ್ಲಿ ಕೋರಿಕೆ ಮಾಡಿಕೊಳ್ಳುತ್ತೇನೆ. ಕೆಲವರಿಗೆ ಹಸಿರು ಕಾರ್ಡುಗಳನ್ನು ಹಂಚುವಂಥ ಕೆಲಸವನ್ನು ನೀವು ಮಾಡಿದ್ದೀರಿ. ತುಮಕೂರು ಜಿಲ್ಲೆಯಲ್ಲಿ ಇಪ್ಪತ್ತು ಸಾವಿರ ಕಾರ್ಡುಗಳನ್ನು ಹಂಚಿದ್ದೀರಿ. ಕಾರ್ಡನ್ನು ಹಂಚಿ ಆರು ತಿಂಗಳಾಯಿತು. ನಾವು ಹಳ್ಳಿಗೆಹೋದರೆ ಸ್ವಾಮಿ ಕಾರ್ಡ್ ಕೊಟ್ಟರಲ್ಲಾ, ಅಕ್ಕಿ ಕೊಡಿಸಿ, ಸಕ್ಕರೆ ಕೊಡಿಸಿ ಎಂದು ಕೇಳುತ್ತಾರೆ. ಅದನ್ನು ಕೊಟ್ಟಿಲ್ಲ, ಹೌದಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌದು, ಎಲ್ಲಾ ಕಡೆಯೂ ಇದೆ. ತಮಗೂ ಕೂಡ ಗೊತ್ತಿದೆ. ಅಡಿಷನಲ್ ಕಾರ್ಡುಗಳನ್ನು ನಿಮ್ಮಲ್ಲಿ ಒಬ್ಬರಿಗೇ ಕೊಟ್ಟಿಲ್ಲ. ಇಡೀ ರಾಜ್ಯದಲ್ಲೇ ಕೊಟ್ಟರು. ಆದರೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಕೋಟಾ ಅದು ಮಾತ್ರ ಎನ್ಹಾನ್ಸ್ ಆಗಲಿಲ್ಲ. ಉದಾ:ಗೆ ನಿಮ್ಮಲ್ಲಿ ಐವತ್ತು ಸಾವಿರ ಅರವತ್ತು

ಸಾವಿರವ್ವೋ ಕ್ವಿಂಟಾಲ್ ಬರುತ್ತಿತ್ತು ಎಂದರೆ ಈಗಲೂ ಅಷ್ಟೆ ಬರುತ್ತಿದೆ. ಅಂದು ಕಾರ್ಡುಗಳು ಜಾಸ್ತಿಯಾದವು, ಕ್ವಾಂಟಿಟಿ ಅಷ್ಟೇ ಆಯಿತು.

ಶ್ರೀ ವೈ.ಕೆ. ರಾಮಯ್ಯ: ಸನ್ಮಾನ್ಯ ಸಚಿವರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಕೇಂದ್ರ ಸರ್ಕಾರದಿಂದ ಬರುವಂಥ ಕೋಟಾಕ್ಕೆ ಇವರು ಹಣವನ್ನು ಕಟ್ಟಿದ್ದಾರಾ? ಅವರು ನಮ್ಮಲ್ಲಿ ಅಕ್ಕಿ, ಗೋಧಿ, ಸಕ್ಕರೆ ಇಲ್ಲ ಎಂದು ಬರೆದು ಕಳುಹಿಸಿದ್ದಾರಾ? ಇದಾವುದೂ ಇಲ್ಲ. ನಾನು ಬರುತ್ತೇನೆ, ಮೂಲಕ್ಕೆ ಬಂದರೆ ಇದೆಲ್ಲಾ ಮುಗಿದುಹೋಗುತ್ತದೆ. ಇವರು ಎಲ್ಲಾ ರೋಗಕ್ಕೂ ಒಂದೇ ಒಂದು ಮೂಲ ಇರುವುದು ಹಣ. ಹಣ ಇಲ್ಲ. ಹಣ ಇಲ್ಲದೇ ಇದ್ದ ಮೇಲೆ ಇವರಿಗೆ ನೀವು ಕಾರ್ಡುಗಳನ್ನು ಹಂಚಬಾರದಾಗಿತ್ತು. ಹಂಚಿದ ಮೇಲೆ ಈ ರೀತಿ ಮಾಡಬಾರದಾಗಿತ್ತು. ಆ ರೀತಿ ಮಾಡಿರುವುದರಿಂದ ನಮಗೆಲ್ಲರಿಗೂ ಕೂಡ ತಲೆನೋವು ಬಂದಿದೆ. ಕಾರ್ಡು ಕೊಟ್ಟ ಮೇಲೆ ಅದಕ್ಕೆ ತಕ್ಕಂಥ ಪಡಿತರ ವ್ಯವಸ್ಥೆಯನ್ನು ಇವತ್ತಿನವರೆಗೂ ಮಾಡಿಲ್ಲ. ದಯಮಾಡಿ ಅದನ್ನು ಮಾಡಿ ಎಂದು ಸರ್ಕಾರಕ್ಕೆ ಕೋರಿಕೆ ಮಾಡಿಕೊಳ್ಳುತ್ತೇನೆ. ನೀವು ದುಡ್ಡು ಕಟ್ಟಿ, ಅದನ್ನು ವಿತಕ್ಕೆ ಕೊಡುವುದಿಲ್ಲ, ಕೇಂದ್ರ ಸರ್ಕಾರದವರನ್ನು ನಾವು ಕೇಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕೇಂದ್ರ ಸರ್ಕಾರದವರು ಕೊಡುತ್ತಿಲ್ಲ.

ಶ್ರೀ ವೈ.ಕೆ. ರಾಮಯ್ಯ: ಹಾಗೆಂದು ನಿಮ್ಮ ಮಂತ್ರಿಗಳ ಕೈಯಲ್ಲಿ ಹೇಳಿಸಿ. I will take a challenge. ದುಡ್ಡು ಕಟ್ಟಿದ್ದೇವೆ, ಅವರು ಕೊಡುತ್ತಿಲ್ಲ ಎಂದು ಹೇಳಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೇ ಸದನದಲ್ಲಿ ತಾವು ಇದ್ದಿರಿ ಅಧ್ಯಕ್ಷರೇ, ಮಾನ್ಯ ಶಫಿ ಅಹಮದ್ರವರ ಪ್ರಶ್ನೆ ಇತ್ತು. ಬಹುಶಃ ಆ ದಿವಸವೂ ಆಹಾರ ಮಂತ್ರಿಗಳು ಇರಲಿಲ್ಲ. ಉತ್ತರವನ್ನು ನಾನೇ ಹೇಳಿದೆ. ಕೆರೂಸಿನ್ ಕೋಟಾ ಮತ್ತು ಫುಡ್ ಲೈನ್ಸ್ ಕೋಟಾ ಇವರೆಡೂ ಎನ್ಹಾನ್ಸ್ ಮಾಡಿ ಎಂದು ಹೇಳಿ ಫುಡ್ ಮಿನಿಸ್ಟರ್ ಕಾನ್ಫರೆನ್ಸ್ನಲ್ಲಿ ನಮ್ಮ ಸರ್ಕಾರದ ವತಿಯಿಂದ ಪ್ರತಿಪಾದನೆ ಮಾಡಿದ್ದಾರೆ ಮತ್ತು ಹೆಚ್ಚಿನ ಕೋಟಾ ಕೊಡಿ ಎಂತಲೂ ಹೇಳಿದ್ದಾರೆ. ಇನ್ನೂ ಬಂದಿಲ್ಲ, ಮಂಜೂರಾತಿ ಆಗಿಲ್ಲ. ಆದರೆ ಬೇಕಾದರೆ ಕೊಡಬಹುದು. ದುಡ್ಡು ಕೊಟ್ಟೇ ಕೊಡುತ್ತಾರೆ.

ಶ್ರೀ ವೈ.ಕೆ. ರಾಮಯ್ಯ: ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಶಿವನಂಜಪ್ಪನವರು ಹೇಳಿದ ರೀತಿಯಲ್ಲಿ ಈ ಭಾಷಣದಲ್ಲಿರುವುದೆಲ್ಲವನ್ನೂ ಸರ್ಕಾರ ಕಾರ್ಯರೂಪಕ್ಕೆ ತಂದರೆ ಸ್ವರ್ಗವನ್ನು ಭೂಮಿಗೆ ಇಳಿಸಬಹುದು. ಎಲ್ಲವೂ ಇದೆ ಇದರೊಳಗೆ. ಆದರೆ ಯಾವುದು ಬೇಕೋ ಅದಿಲ್ಲ. ಎಲ್ಲಾ ಇದೆ. ಯಾವುದು ಇಲ್ಲ ಎಂದರೆ ಪಡಿತರ ಕಾರ್ಡುಗಳನ್ನು ಹಂಚದೇ ಇರಲಿಕ್ಕೆ ಅರ್ಧಂಬರ್ಧ ಕಟ್ಟಿರುವ ಮನೆಗಳನ್ನು ಸಂಪೂರ್ಣ ಮಾಡದೇ ಇರಲಿಕ್ಕೆ ಒಂದು ವರ್ಷವಾಯಿತು. ನನ್ನ ಕ್ಷೇತ್ರದಲ್ಲಿ 24 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಮಂತ್ರಿಗಳೇ. 24 ಲಕ್ಷ ಅಲ್ಲ, 24 ಕೋಟಿಯೂ ಅಲ್ಲ. 88ನೇ ಇಸವಿಯಿಂದ ಒಂದು ಕೆರೆ ಕೆಲಸ ನಿಂತುಹೋಗಿದೆ. ಕಾರಣ ಏನು ಎಂದರೆ ಆ ಜಮೀನು ಸ್ವಾಧೀನಪಡಿಸಿಕೊಂಡಿರುವವರಿಗೆ 24 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು. 24 ಸಾವಿರ ರೂಪಾಯಿಗಳನ್ನು ಕೊಡದೆಯೇ ಕೆಲಸ ನಿಂತುಹೋಗಿದೆ. ಅದನ್ನು ಡಿಸ್ಟ್ರಿಕ್ಟ್ ಟ್ರೆಜರಿಗೆ ತೆಗೆದುಕೊಂಡು ಹೋದರೆ ಅವನು ನಮ್ಮ ಡೈರೆಕ್ಟರ್ ಕೈಯಲ್ಲಿ ಫೋನ್ ಮಾಡಿಸಿ ಎಂದು ಹೇಳುತ್ತಾನೆ, 24 ಸಾವಿರ ರೂಪಾಯಿ. ಇದನ್ನು ನಿಮಗೆ ಕೊಟ್ಟುಬಿಡುತ್ತೇನೆ, ಈ ವಾರವೇ ದುಡ್ಡು ಕೊಡಿಸಿದರೆ ನಾನು ನಿಮಗೆ ಕೃತಜ್ಞನಾಗಿರುತ್ತೇನೆ. ನಿಮ್ಮ ಕೈಯಲ್ಲಿಯೇ ಅದನ್ನು ಕೊಟ್ಟು ಬಿಡುತ್ತೇನೆ. ಏಕೆಂದು ನಾನು ಹೇಳಿದರೆ ಬೊಕ್ಕಸ ತುಂಬಿ ತುಳುಕುತ್ತಿದೆ. ಯಾರು ಹೇಳಿದರು ನಿಮಗೆ? ತುಳುಕಿ ಹೋಗುತ್ತಿದೆ ಎನ್ನುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ರಾಮಯ್ಯನವರೇ, ನಿಮ್ಮ ಕ್ಷೇತ್ರದಲ್ಲಿ 93-94ರ ಬಜೆಟ್ನಲ್ಲಿ ಎಷ್ಟು ಕೆಲಸವಾಗಿದೆ? ಎಷ್ಟು ಕೋಟಿ ಅದು. 24 ಸಾವಿರ ರೂಪಾಯಿದೂ ಇರಬಹುದು. ಕುಣಿಗಲ್ದು ಟೋಟಲ್ ಕೆಲಸವಾಗಿದ್ದು ಎಷ್ಟು ಎಂದು ಹೇಳಿದೆ. ತಾಲ್ಲೂಕಿನಲ್ಲಿ ಅಥವಾ ನಿಮ್ಮ ಕ್ಷೇತ್ರದಲ್ಲಿ ಎರಡೂ ಇವೆ.

ಶ್ರೀ ವೈ.ಕೆ. ರಾಮಯ್ಯ: ಅಂಕಿ ಅಂಶಗಳನ್ನು ಕೊಡೋಣ. ಈ ಕೆಲಸವಾಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ. ಸ್ವಾಮಿ, ಇದು ಟ್ರೆಜರಿ ಬಿಲ್. 24 ಸಾವಿರ ರೂಪಾಯಿ. ಈ 24 ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಯೋಗ್ಯತೆ ಇಲ್ಲ ಎಂದು ನಾನು ಹೇಳುತ್ತಿಲ್ಲ. ಸಾಧ್ಯವಾಗಿಲ್ಲ. ಬಹುಶಃ ಈ ಪತ್ರ ಈ ಸರ್ಕಾರದ ಆರ್ಥಿಕ ದಿವಾಳಿತನಕ್ಕೆ ಹಿಡಿದಂಥ ಒಂದು ಕೈಗನ್ನಡಿ. ಇಪ್ಪತ್ತು ಸಾವಿರ ಮಾಡುತ್ತೇನೆ ಎಂದು ಹೇಳಿದರು. ನಮ್ಮ ಡೈರೆಕ್ಟರ್ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ಗೆ ಫೋನ್ ಮಾಡಿಸಿ ಸ್ವಾಮಿ ಉದ್ವೇಗಕ್ಕೆ ಒಳಗಾಗಿ ಬುದ್ಧಿಯನ್ನು ನಾನು ಕೋಪದ ಕೈಯಲ್ಲಿ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಕ್ಷೇತ್ರದಲ್ಲಿ ಎಷ್ಟು ಕೆಲಸವಾಗಿತ್ತು ಎನ್ನುವುದರ ಬಗ್ಗೆ ನಾನು ಪಟ್ಟಿಯನ್ನು ಕೊಡುತ್ತೇನೆ. ಯಾವುದಾದರೂ ಈ ರಾಜ್ಯಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಯಾವುದಾದರೂ ಕಾಲದಲ್ಲಿ ಡಿಸ್ಟ್ರಿಕ್ಟ್ ಟ್ರೆಜರಿಯೊಳಗೆ ಎರಡು ಕೋಟಿ ರೂಪಾಯಿಗಳ ಬಿಲ್ಲು ಪೆಂಡಿಂಗ್ ಇದ್ದಂಥ ಒಂದು ನಿದರ್ಶನವನ್ನು ತೋರುವುದಾದರೆ ನಾನು ಸಾರ್ವಜನಿಕ ಜೀವನದಿಂದ ನಿವೃತ್ತಿ ಹೊಂದುತ್ತೇನೆ. ಏನಪ್ಪಾ ಎಷ್ಟು ಇದೆ ಸುಮಾರು 10 ಲಕ್ಷ ಇರಬಹುದಾ? 20 ಲಕ್ಷ, 1 ಕೋಟಿ ಅಥವಾ 1 ಮೂಕ್ಕಾಲು ಕೋಟಿ ಇರಬಹುದಾ ಎಂದು ಕೇಳಿದರೆ ಸುಮಾರು 2 ಕೋಟಿ ರೂಪಾಯಿಗಳು ಇದೆ ಎನ್ನುತ್ತಾರೆ. ನಾವು, ನಮ್ಮ ಪಕ್ಷ ಸರ್ವಜ್ಞರು ಎಂದು ಹೇಳುವುದಿಲ್ಲ. ಸರ್ವಗುಣ ಸಂಪನ್ನರು, ಸರ್ವಗುಣ ಸಂಜೀವಿನಿಗಳು ಎಂದು ಹೇಳುವುದಿಲ್ಲ. ಆದರೆ ಒಂದು ಜಿಲ್ಲಾ ಖಜಾನೆಯಲ್ಲಿ ಎರಡು ಕೋಟಿ ರೂಪಾಯಿಗಳು ಬಿಲ್ ಪೆಂಡಿಂಗ್ ಇದ್ದಂತಹ ನಿದರ್ಶನ ಯಾವತ್ತಾದರೂ ಇದೆ ಎಂಬುದನ್ನು ತೋರಿಸುವುದಾದರೆ ಅದು ನಮ್ಮ ಸರ್ಕಾರವೊ, ಮತ್ತೊಂದು ಸರ್ಕಾರವೊ ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಎಲ್ಲವೂ ಇದೆ. ಆದರೆ, ಈ ರಾಜ್ಯಕ್ಕೆ ಬಂದಿರುವಂತಹ ಆರ್ಥಿಕ ದುಸ್ಥಿತಿ, ಆರ್ಥಿಕ ಅಶಿಸ್ತು ಆರ್ಥಿಕ ದಿವಾಳಿತನ ಇಂತಹ ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡದೇ ಇರುವುದು ಅತ್ಯಂತ ದೊಡ್ಡ ಕೊರತೆ. ಯಾವುದೋ ವಿಷಯಗಳ ಬಗ್ಗೆ ಸಾಕ್ಷರತೆ, ವಿದ್ಯಾಭ್ಯಾಸ, ಇವುಗಳ ಬಗ್ಗೆ ಹೇಳಿದ್ದಾರೆ. ನನ್ನ ಪ್ರಕಾರ ಅತ್ಯಂತ ಕೆಟ್ಟು ಹೋಗಿರುವಂತಹ, ದುಃಸ್ಥಿತಿ ಬಂದಿರುವಂತಹ, ದಿವಾಳಿತನಕ್ಕೆ ಬಂದಿರುವಂತಹ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಂದೇ ಒಂದು ಮಾತನ್ನು ಆಡದೇ ಇರುವುದು ಈ ಭಾಷಣದ ಒಂದು ದೊಡ್ಡ ಕೊರತೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ಪರಿಸ್ಥಿತಿ ಇದ್ದರೂ ಕೂಡ ಈ ಯೋಜನಾ ಗಾತ್ರದಲ್ಲಿ ನಾವು ಕಡಿತ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆರ್ಥಿಕ ಶಿಸ್ತಿಗೆ ಕ್ರಮ ಪ್ರಸಕ್ತ 1993-94ರ ಆರ್ಥಿಕ ಯೋಜನಾ ವೆಚ್ಚದಲ್ಲಿ ಕಡಿತ ಮಾಡಲಾಗಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ವಿಶೇಷವಾಗಿ ನೀರಾವರಿ ಇಲಾಖೆಯ ಯೋಜನಾ ವೆಚ್ಚದಲ್ಲಿ ಶೇ.33ರಷ್ಟು ಕಡಿತ ಮಾಡಲಾಗಿದೆ ಎಂಬ ಸುದ್ದಿಯ ಬಗ್ಗೆ ಸುದ್ದಿಗಾರರು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಾಗ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿದಾಗ ಅವರು ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿರುವುದು ನಿಜ ಎಂದಿದ್ದಾರೆ. ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿದ್ದಾರಾ? ವೇತನ ವೆಚ್ಚಕ್ಕೆ ಕಡಿವಾಣ ಹಾಕಿದ್ದಾರಾ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿರುವುದು ನಿಜ, ಅದರ ಅರ್ಥ

ಯೋಜನಾ ವೆಚ್ಚದಲ್ಲಿ ಕಡಿತಗೊಳಿಸಲಾಗಿದೆ ಎಂಬುದಲ್ಲ ಅವರು ಅಷ್ಟಕ್ಕೆ ನಿಲ್ಲದೆ ಮುಂದುವರೆದು ಯೋಜನಾ ವೆಚ್ಚದಲ್ಲೂ ಸಹ ಅನಗತ್ಯವಾಗಿ ಖರ್ಚಾಗುತ್ತಿರುವುದು ಗಮನಕ್ಕೆ ಬಂದಾಗ ಅದನ್ನು ನಿಯಂತ್ರಿಸಲು ಸರ್ಕಾರ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಆರ್ಥಿಕ ಶಿಸ್ತಿಗೆ ನೀಡಿದ ಸೂಚನೆ ಎಂದು ಪರಿಗಣಿಸಬೇಕೇ ಹೊರತು ಯೋಜನಾ ವೆಚ್ಚದಲ್ಲಿ ಆಗಿರುವಂತಹ ಕಡಿತವೆಂದು ತಿಳಿಯಬಾರದು. ಸರ್ಕಾರ ಯಾವುದೇ ರೀತಿಯ ಆರ್ಥಿಕ ಅಸ್ಥಿರತೆಯಿಂದ ಬಳುತ್ತಿಲ್ಲ. 24 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ದುಡ್ಡು ಇಲ್ಲ. ಸರ್ಕಾರ ಅಸ್ಥರತೆಯಿಂದ ಬಳಲುತ್ತಿಲ್ಲ, ಯೋಜನಾ ವೆಚ್ಚವನ್ನು ಕಡಿಮೆ ಮಾಡುವಂತಹ ಅಗತ್ಯವಿಲ್ಲವೆಂದು ಹೇಳಿದ್ದಾರೆ. ರಾಜ್ಯದಲ್ಲಿ ಸಂಪನ್ಮೂಲಗಳ ಕ್ರೋಢಿಕರಣವನ್ನು ಎಂದಿನಂತೆ ಬಿರುಸಿನಿಂದ ಸಾಗುತ್ತಿದೆ. 1994-95ರ ಆರ್ಥಿಕ ವರ್ಷದ ಯೋಜನಾ ಗಾತ್ರವನ್ನು ನಾವು ಕಡಿಮೆ ಮಾಡುವುದಿಲ್ಲ ಎಂದು ಎರಡು ಸಾರಿ ಹೇಳಿದ್ದಾರೆ. ಯೋಜನಾ ಗಾತ್ರವನ್ನು ಕಡಿಮೆ ಮಾಡುವ ಪ್ರಶ್ನೆ ಇಲ್ಲ, ಸಂಪತ್ತು ಕ್ರೋಢಿಕರಣಕ್ಕೆ ಎರಡು ಬಾರಿ ಅಧಿಕಾರಿಗಳೊಡನೆ ಚರ್ಚೆ ಮಾಡಿದಾಗ ಅದು ತೃಪ್ತಿಕರವಾಗಿದೆ ಎಂದಿದ್ದಾರೆ. ಇದು ಸರಿಯೇ? ಇದು ಒಂದು ಸಾರಿಯಲ್ಲ, ಅದನ್ನು ದಿನ ಬೆಳಗಾದರೆ ಅದನ್ನೇ ಹೇಳುತ್ತಾರೆ. ಯೋಜನಾ ಗಾತ್ರವನ್ನು ಇಷ್ಟ ಪಡಿ, ಬಿಡಿ, Whether you want it or not, whether you like it or not, it is inevitable. It is not in your hands. It is not within your limits. ಯೋಜನಾ ಗಾತ್ರವನ್ನು ಕಡಿತ ಮಾಡುವುದು ಸರ್ಕಾರಕ್ಕೆ ಅನಿವಾರ್ಯ. They have no other go. ಕಾರಣ ಕೊಡುತ್ತೇನೆ. ಏಕೆಂದು ಮಾನ್ಯ ವೀರಪ್ಪಮೊಯಿಲಿಯವರು ಹೋದ ಕಡೆಗಳಲ್ಲಿ ಯೋಜನಾ ಗಾತ್ರವನ್ನು ಕಡಿಮೆ ಮಾಡುವುದಿಲ್ಲವೆಂದು ಹೇಳಿಕೊಂಡು ಬಂದಿದ್ದಾರೆ.

ಅದು ಮತ್ತೊಂದು ಸುಳ್ಳು ಆಗುತ್ತದೆಯೋ ಹೊರತು ಸತ್ಯಕ್ಕೆ ಹತ್ತಿರವಾದಂತಹ ಮಾತು ಕೂಡ ಆಗಲಾರದು. ಏಕೆಂದರೆ ಯೋಜನಾ ಗಾತ್ರವನ್ನು ಇವರು ನಿರ್ಧಾರ ಮಾಡುವಾಗಲೇ ನಮಗೆ ಮೋಸ ಮಾಡಿದ್ದಾರೆ. ನಮಗೆಲ್ಲರಿಗೂ ಆಡಳಿತ ಮಾಡುವಂತಹವರಿಗೆ ಒಂದು ಹುಚ್ಚು ಇದೆ. ನನಗಂತೂ ಇದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದು ಏನೆಂದರೆ ನಾವು ಎಲ್ಲರಿಗಿಂತಲೂ ಜಾಸ್ತಿ ಮಾಡಿದ್ದೆವು, ನಾವು ಎಲ್ಲರಿಗಿಂತಲೂ ಜಾಸ್ತಿ ಹಣ ಖರ್ಚು ಮಾಡಿದ್ದೆವು. ನಾವು ಎಲ್ಲರಿಗಿಂತಲೂ ದೊಡ್ಡ ಸಾಧನೆ ಮಾಡಿದ್ದೆವು ಎಂದು ಅಂಕಿ ಅಂಶಗಳ ಮೂಲಕ ಜನರಿಗೆ ಮಣ್ಣೆರುಚುವಂತಹ ಪ್ರವೃತ್ತಿ ಎಲ್ಲಾ ರಾಜಕಾರಣಿಗಳಿಗೆ ಇದೆ. ನಿಮ್ಮ ಯೋಜನಾ ಮಂತ್ರಿಗಳು ಈಗ ಇಲ್ಲಿ ಇಲ್ಲ. 1993-94ಕ್ಕೆ ಯೋಜನಾಗಾತ್ರವನ್ನು ನಿರ್ಧಾರ ಮಾಡುವಂತಹ ಸಂದರ್ಭದಲ್ಲಿ ಈ ರಾಜ್ಯದ ಜನತೆಗೆ ಈ ಸರ್ಕಾರದವರು ಮೋಸವನ್ನು ಮಾಡಿದ್ದಾರೆ. 8ನೇ ಪಂಚವಾರ್ಷಿಕ ಯೋಜನಾ ಗಾತ್ರ 12300 ಕೋಟಿ ರೂಪಾಯಿ. ಈ 12300 ಕೋಟಿ ರೂಪಾಯಿ 5 ವರ್ಷಕ್ಕೆ ನಿಗದಿ ಮಾಡಿದಂತಹ ಗಾತ್ರ. ಪರಿಮಾಣ ಅಲ್ಲದೆ ಇದ್ದರೂ ಕೂಡ ಇದು ಒಂದು ಗಾತ್ರ. ಮೊದಲನೇ ವರ್ಷ ನಿಗದಿ ಮಾಡಿದಂತಹ ಹಣ 1915ಕೋಟಿ ರೂಪಾಯಿ. 2ನೇ ವರ್ಷಕ್ಕೆ ಇವರು ನಿಗದಿ ಮಾಡಿದಂತಹ ಹಣ ಎಂದರೆ ಈ ವರ್ಷದ ನಿಗದಿ ಮಾಡಿದಂತಹ ಗಾತ್ರ 3025ಕೋಟಿ ರೂಪಾಯಿ. ಮುಂದಿನ ವರ್ಷಕ್ಕೆ ಇವರು ಲೆಕ್ಕ ಹಾಕಿಕೊಂಡಿರುವಂತಹ ಗಾತ್ರ 3275ಕೋಟಿ ರೂಪಾಯಿ. ಎಂದರೆ ಈ ಮೂರು ವರ್ಷಕ್ಕೆ 8ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ಮೂರು ವರ್ಷಕ್ಕೆ ಇವರು ನಿಗದಿ ಮಾಡಿರುವಂತಹ ಹಣ 8215 ಕೋಟಿ ರೂಪಾಯಿ. ಇನ್ನು ಎರಡು ವರ್ಷಗಳಿಗೆ 12,300 ಕೋಟಿ ರೂಪಾಯಿಯಲ್ಲಿ 8215 ಕೋಟಿ ರೂಪಾಯಿ ಕಳೆದರೆ ಇವರಿಗೆ

ಉಳಿದುಕೊಳ್ಳುವಂತಹ ಹಣ 4075 ಕೋಟಿ ರೂಪಾಯಿ. ಸ್ವಲ್ಪ ನಿಮ್ಮ ಅಧಿಕಾರಿಗಳನ್ನು ಕೇಳಿ ಹೇಳಿ. ಹೇಗೆ ಇದನ್ನು ನೀವು ನಿಭಾಯಿಸಿಕೊಳ್ಳುತ್ತೀರಿ? 8ನೇ ಪಂಚವಾರ್ಷಿಕ ಯೋಜನೆಗೆ ನಿಮಗೆ ನಿಗದಿ ಆಗಿರುವುದು 12,300 ಕೋಟಿ ರೂಪಾಯಿ. ಅದರಲ್ಲಿ ಮೂರು ವರ್ಷಕ್ಕೆ ನೀವು ನಿಗದಿ ಮಾಡಿರುವಂತಾದ್ದು 8215 ಕೋಟಿ ರೂಪಾಯಿ. ಇನ್ನು 2,4 ಮತ್ತು 5 ವರ್ಷಗಳಿಗೆ ಉಳಿಯುವಂತಾದ್ದು ಕೇವಲ 4085 ಕೋಟಿ ರೂಪಾಯಿ. ಈ 4085 ಕೋಟಿ ರೂಪಾಯಿಯನ್ನು 2 ವರ್ಷಕ್ಕೆ ಹಂಚಿದರೆ 2042 ಕೋಟಿ ರೂಪಾಯಿ ಆಗುತ್ತದೆ. ನಾನು ಈ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ನಾಲ್ಕು ಮತ್ತು ಐದು ವರ್ಷದಲ್ಲಿ ನಿಮ್ಮ ಯೋಜನಾ ವೆಚ್ಚದ ಗಾತ್ರವನ್ನು ಕಡಿಮೆ ಮಾಡುತ್ತೀರಾ? ಈ ಸರ್ಕಾರಕ್ಕೆ ಉತ್ತರ ಕೊಡಬೇಕು ಎನ್ನುವಂತಹ ಪ್ರಾಮಾಣಿಕವಾದಂತಹ, ಆಸಕ್ತಿ ಇದ್ದರೆ ಉತ್ತರ ಕೊಡಲಿ, ಅಷ್ಟು ಮಾತ್ರ ಹೇಳಿದರೆ ಸಾಕು. ಈ ರಾಜ್ಯದ ಆರ್ಥಿಕ ದುಸ್ಥಿತಿಗೆ ಇದಕ್ಕಿಂತ ಮಿಗಿಲಾದ, ಉತ್ತಮವಾದಂತಹ, ಪ್ರಾಮಾಣಿಕವಾದಂತಹ ಅಂಕಿಅಂಶಗಳನ್ನು ನನ್ನ ಕೈಯಲ್ಲಿ ಒದಗಿಸುವುದಕ್ಕೆ ಸಾಧ್ಯವಿಲ್ಲ. ಇವರಿಗೆ ಇನ್ನು 2 ವರ್ಷಗಳಿಗೆ ಉಳಿದಿರುವಂಥಾದ್ದು 4000 ಕೋಟಿ ರೂಪಾಯಿ. ಈ ವರ್ಷಕ್ಕೆ 3025 ಕೋಟಿ ರೂಪಾಯಿ ಇದ್ದಿದ್ದು. ಮುಂದಿನ ವರ್ಷಕ್ಕೆ 2 ಸಾವಿರ ಕೋಟಿ ಇವರು ಮಾಡುವುದಕ್ಕೆ ಆಗುವುದಿಲ್ಲ. It should be always upward. ಡೌನವರ್ಡ್ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾನು ಹೇಳಿದ್ದು ಏಕೆ ಹೀಗೆ ಆಯಿತು? ಎಲ್ಲಿ ತಪ್ಪಿದ್ದೇ ನಾವು. ಏನೂ ಇಲ್ಲ, ನನಗೆ ತಿಳಿದ ಮಟ್ಟಿಗೆ ನಾನು ಮನಮೋಹನ್ ಸಿಂಗ್ ಅವರಷ್ಟು ತಜ್ಞನೂ ಮತ್ತು ನಿಮ್ಮ ಮುಖ್ಯಮಂತ್ರಿಗಳಷ್ಟು ಆರ್ಥಿಕ ಕ್ಷೇತ್ರದಲ್ಲಿ ಅನುಭವಸ್ಥನೂ ಅಲ್ಲ. ನನಗೆ ಕೇಳಿಬಂದಿರುವಂಥ ಒಂದೇ ಒಂದು ಸುದ್ದಿ ಇದೆ. ಆ ಸುದ್ದಿ ಎಂದರೆ ಎಲ್ಲಾ ರಾಜ್ಯಸರ್ಕಾರಗಳು ಹೋಗಿ, ಯೋಜನಾ ಆಯೋಗದ ಕೈಕಾಲು ಕಟ್ಟಿ ಈ ಯೋಜನಾ ಗಾತ್ರವನ್ನು ದೊಡ್ಡದು ಮಾಡಿಸಿಕೊಳ್ಳುವುದು. ಅದಕ್ಕೆ ನನಗೆ ತಿಳಿದವರು ಒಬ್ಬರು ಹೇಳಿದರು, ಅದು ಕನ್ನಡಿಯೊಳಗಿನ ಗಂಟು ಎಂದು. ಗಂಟನ್ನು ತೋರಿಸಬಹುದು. ನೋಡಯ್ಯ ಮರಿ ಇಲ್ಲಿ ಇದೆ ತೆಗೆದುಕೋ ನಿನ್ನ ಪುಸ್ತಕ, ಸ್ಲೇಟು, ಬಳಪ, ಪೆನ್ಸಿಲ್, ಚಾಕೋಲೇಟ್, ಮಿಠಾಯಿ ಎಲ್ಲಾ ತಂದುಕೊಡುತ್ತೇನೆಂದು ಆ ಗಂಟನ್ನು ತೋರಬಹುದು. ಆದರೆ ಈ ಕನ್ನಡಿಯೊಳಗಿನ ಆ ಗಂಟು ಖರ್ಚುಮಾಡುವುದಕ್ಕೆ ಸಿಗುವುದಿಲ್ಲ. ಇದು ಮೊದಲನೇ ಕಾರಣ. ವಿವೇಚನೆ ಇಲ್ಲದೆ ದೊಡ್ಡದು ಮಾಡುತ್ತೇವೆ, ಎನ್ನುವಂತಹ ಹುಂಬತನ ತೋರಿ ಯೋಜನಾ ಗಾತ್ರವನ್ನು ನಿರ್ಧಾರ ಮಾಡುವಲ್ಲಿ ಎಡವಿದ ಪರಿಣಾಮ, ವಿಧಿ ಇಲ್ಲದೆ ಈ ರಾಜ್ಯಸರ್ಕಾರ ಯೋಜನಾ ಗಾತ್ರವನ್ನು ಕಡತ ಮಾಡಲೇಬೇಕಾಗುತ್ತದೆ.

4.15 ಪಿ.ಎಂ.

ಇನ್ನು ಎರಡನೆಯ ಕಾರಣ ಈ ರಾಜ್ಯದ ಯೋಜನೆಗಳು,.....

ಡಾ॥ ಎನ್.ಬಿ. ನಂಜಪ್ಪ : ಮಾನ್ಯ ರಾಮಯ್ಯನವರು ಯೋಜನಾ ಗಾತ್ರದ ಬಗ್ಗೆ ಬಹಳ ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಆ ರೀತಿ ವಿವರಣೆಯನ್ನು ಕೊಡತಕ್ಕ ಕಾಲದಲ್ಲಿ ಇದು ಬಹಳ ಡಿಫೆಕ್ಟೀವ್ ಆಗಿದೆ, ಇದು ಕನ್ನಡಿಯೊಳಗಿನ ಗಂಟಿನ ತರಹ ಇದೆ ಎಂದು ಹೇಳಿದರು. ಇದನ್ನು ಹೇಗೆ ಸರಿಮಾಡಬೇಕು ಎನ್ನುವ ಬಗ್ಗೆ ಈ ಹೌಸ್ಗೆ ಒಂದು ಸಜೆಷನ್ ಕೊಟ್ಟರೆ ಒಳ್ಳೆಯದು. ಇದು ಸರಿಯಲ್ಲ, ಇದು ಹೀಗೆ ಮಾಡಿ ಎಂದು ನಿಗದಿತವಾಗಿ ಒಂದು ಸಲಹೆಯನ್ನು ಕೊಟ್ಟರೆ ಬಹಳ ಚೆನ್ನಾಗಿ ಇರುತ್ತದೆ, ನಾವು ಸಹ ಆ ದಾರಿಯಲ್ಲಿ ಯೋಚನೆ ಮಾಡಬಹುದು.

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೇ, ಸರ್ಕಾರ ನನ್ನನ್ನು ಆರ್ಥಿಕ ತಜ್ಞನನ್ನಾಗಿ ನೇಮಿಸಿ ಕೊಂಡರೆ ಒಳ್ಳೆಯದು. ನನಗೂ ಆರ್ಥಿಕ ತೊಂದರೆ ಇದೆ.

ಡಾ|| ಎನ್.ಬಿ. ನಂಜಪ್ಪ: ಜನಗಳ ಉಪಯೋಗಕ್ಕೆ ಮತ್ತು ನಮ್ಮ ಉಪಯೋಗಕ್ಕೆ ಒಂದು ಗೈಡ್ಲೈನ್ ನಿಮ್ಮದ್ರೇ ಆದಂಥ ಒಂದು ಸಜೆಷನ್ ಕೊಟ್ಟು ಬಿಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೇ, ನನಗೆ ಗೊತ್ತಿದ್ದ ಹಾಗೆ ಓಟಿಗಾಗಿ ಕಾರ್ಯಕ್ರಮಗಳನ್ನು ನಿರೂಪಿಸಿಕೊಳ್ಳುವಂಥ ಪ್ರವೃತ್ತಿ ಕಡಿಮೆಯಾಗಬೇಕು. ಎಲ್ಲಾ ಪಕ್ಷದಲ್ಲೂ ಇದು ಕಡಿಮೆಯಾಗಬೇಕು.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆಗಲೇ ಸಹಜತೆಯಿಂದ ಕೂಡಿದಂಥ ಒಂದು ರಿಯಲಿಸ್ಟಿಕ್ ಬಡ್ಜೆಟ್ಟನ್ನು ಮಾಡಿದರೆ, ಒಂದು ಅಂದಾಜನ್ನು ಮಾಡಿದರೆ ಈ ಪರಿಸ್ಥಿತಿ ಒದಗಿ ಬರುವುದಿಲ್ಲ ಎಂಬುದು ನನ್ನ ಭಾವನೆ. ಇನ್ನು ಯೋಜನಾ ಗಾತ್ರವನ್ನು ಕಡಿಮೆ ಮಾಡಲೇಬೇಕು ಈ ಸರ್ಕಾರ ವಿಧಿ ಇಲ್ಲ ಎನ್ನುವುದಕ್ಕೆ ಎರಡನೇ ಕಾರಣ ಎಂದರೆ, ಕರ್ನಾಟಕ ರಾಜ್ಯದ ಯೋಜನೆಯ ಇತಿಹಾಸವನ್ನು ನಾವು ನೋಡಿದಾಗ ಇದರಲ್ಲಿ ಎಷ್ಟರಮಟ್ಟಿಗೆ ಯಾವಾಗ ಹೆಚ್ಚಳವಾಗಿ ಬಂದಿದೆ ಎನ್ನುವುದನ್ನು ನಾವು ಗಮನಿಸಿದಾಗ ಈ ವರ್ಷದ ಹೆಚ್ಚಳ ಯೋಜನಾ ಗಾತ್ರದ ಹೆಚ್ಚಳ 57 ಭಾಗ, ಅಂದರೆ 57 ಪರ್ಸೆಂಟ್ 1986-87 17 ಪರ್ಸೆಂಟ್ 88-89 ಕೇವಲ ಪಾಯಿಂಟ್ 3 ಪರ್ಸೆಂಟ್, 90-91 10 ಪರ್ಸೆಂಟ್, 91-92 36 ಪರ್ಸೆಂಟ್, 92-93 38 ಪರ್ಸೆಂಟ್, ಈ ವರ್ಷ 58 ಪರ್ಸೆಂಟ್. ಬಹುಶಃ ನನಗೆ ತಿಳಿದ ಮಟ್ಟಿಗೆ ಈ ರಾಷ್ಟ್ರದ ಯಾವುದೇ ರಾಜ್ಯ ಕರ್ನಾಟಕ ಅಷ್ಟೇ ಅಲ್ಲ, ಒಂದೇ ಒಂದು ವರ್ಷ ಶೇಕಡ 58 ರಷ್ಟು ಯೋಜನಾ ವೆಚ್ಚವನ್ನು ಹೆಚ್ಚು ಮಾಡಿದಂಥ ದಡ್ಡತನವನ್ನು ಯಾವುದೇ ಸರ್ಕಾರ ಮಾಡಿಲ್ಲ, ಇದಕ್ಕೆ ದಡ್ಡತನ ಎಂದು ಕರೆಯಬೇಕೋ, ಅವಿವೇಕತನ ಎಂದು ಕರೆಯಬೇಕೋ, ಹುನ್ನಾರ ಎಂದು ಕರೆಯಬೇಕೋ ನನಗೆ ಅರ್ಥವಾಗುವುದಿಲ್ಲ. 58% increase in the State Plan is unprecedented according to me. If there is any precedent let them comeforward with such precedent.

ಒಂದೇ ಒಂದು ವರ್ಷ ಶೇಕಡ 58 ರಷ್ಟು ಯೋಜನಾ ವೆಚ್ಚದ ಗಾತ್ರವನ್ನು ದೊಡ್ಡದು ಮಾಡಿದಂಥ ನಿದರ್ಶನ ಕೇವಲ ರಾಜ್ಯಸರ್ಕಾರಕ್ಕೆ ಅಲ್ಲ, ಈ ರಾಷ್ಟ್ರದ ಸರ್ಕಾರದ ಆಯವ್ಯಯದಲ್ಲಿ ನಾವು ಯಾವತ್ತು ಕಂಡರಿಯದಂಥ ಒಂದು ಸಂಗತಿ. ಇದಕ್ಕೆ ಕಾರಣವೂ ಅಷ್ಟೇ, ಏನೋ ನಾನು ದೊಡ್ಡ ಸಾಧನೆ ಮಾಡುತ್ತೇನೆಂದು ಹೇಳತಕ್ಕಂಥ ಹುಚ್ಚುತನದಲ್ಲಿ ಸರ್ಕಾರ, ಶೇಕಡ 57ಭಾಗ ಹೆಚ್ಚಳವನ್ನು ಮಾಡಿರುವುದರಿಂದ, ಅಷ್ಟನ್ನು ಖರ್ಚು ಮಾಡಲಿಕ್ಕೆ ಇವರಲ್ಲಿ ಹಣ ಇಲ್ಲ. ಇದು ಎರಡನೆಯ ಕಾರಣಕ್ಕಾಗಿ ಯೋಜನಾ ಗಾತ್ರವನ್ನು ಕಡಿತ ಮಾಡಲೇಬೇಕಾಗುತ್ತದೆ. ನಮ್ಮ ಮುಖ್ಯ ಮಂತ್ರಿಗಳು ಸರ್ಕಾರದ ವತಿಯಿಂದ, ಇಲ್ಲ ನಾವು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಅವರು ಅದನ್ನು ಹೇಳುವುದು ಇನ್ನೂ ಬಿಟ್ಟೇ ಇಲ್ಲ, ಅವರು ಈಗ ಬಂದರೂ ಈಗಲೂ ಅದನ್ನೇ ಹೇಳುತ್ತಾರೆ. ಆದರೆ ಇವರು ಎಲ್ಲಿ ತಂದು ಖರ್ಚು ಮಾಡುತ್ತಾರೆ. ಎಲ್ಲಿ ತಂದು ಖರ್ಚು ಮಾಡಲಿಕ್ಕೆ ಸಾಧ್ಯ ಎಲ್ಲಿದೆ. ಖರ್ಚು ಮಾಡಲಿಕ್ಕೆ, ನಮ್ಮ ಹಳ್ಳಿಯ ಗಾದೆಯ ಪ್ರಕಾರ ಹೇಳುವುದಾದರೆ, ಎಷ್ಟು ಜನ ನೆಂಟರು ಬಂದರೂ ಅವಳು ಒಳಗೆ ಇದ್ದರೆ ತಂದು ಇಟ್ಟು ಬಿಡುತ್ತಾಳೆ. ಒಳಗೆ ಇಲ್ಲದೆ ಇದ್ದರೆ, ಅವಳು ಎಲ್ಲಿ ದೊಗದು ಇಕ್ಕುತ್ತಾಳೆಯೇ? ಎಲ್ಲಿಂದ ತಂದು ಇಡಲಿಕ್ಕೆ ಆಗುತ್ತದೆ. ಅವರ ಪ್ರಕಾರವೇ ಹೇಳುತ್ತೇನೆ, ಅವರ ಕೈಯಲ್ಲಿ ಆಗುವುದಿಲ್ಲ ಎಂದು. ಅಭಿವೃದ್ಧಿ ಯೋಜನೆಗಳ ಗುರಿ ಮೀರಿದ ಸಾಧನೆ.

ಗುರಿ ಅಷ್ಟೇ ಅಲ್ಲವಂತೆ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಆಪಾದಿಸುತ್ತಿರುವ ವಿರೋಧಪಕ್ಷದ ಹಾಗೂ ಭಿನ್ನಮತೀಯರಿಗೆ ಉತ್ತರ ನೀಡುವ ರೀತಿಯಲ್ಲಿ ಮುಖ್ಯ ಮಂತ್ರಿಯವರು ಅಭಿವೃದ್ಧಿ ಯೋಜನೆಗಳಲ್ಲಿ ಗುರಿಮೀರಿದ ಸಾಧನೆಯಾಗಿದೆ ಎಂದು ಅಂಕಿಅಂಶಗಳನ್ನು ಪ್ರತಿಪಾದಿಸಿದರು ಎಂದು ಬಂದಿದೆ. ಸರ್ಕಾರ 93ರ ಏಪ್ರಿಲ್ನಿಂದ ನವೆಂಬರ್‌ವರೆಗೆ ವಾಣಿಜ್ಯ ತೆರಿಗೆಯಲ್ಲಿ 1581, ಅಬ್ಕಾರಿಯಲ್ಲಿ 386, ವಾಹನ ತೆರಿಗೆಯಲ್ಲಿ 135 ಕೋಟಿ, ಸ್ಟ್ಯಾಂಪ್ ಮತ್ತು ನೊಂದಾಣಿಕೆಯಲ್ಲಿ 156 ಕೋಟಿ, ಇವೆಲ್ಲ ಸೇರಿ ಏಪ್ರಿಲ್ನಿಂದ ನವೆಂಬರ್‌ವರೆಗೆ ಸಂಗ್ರಹವಾಗಿರುವಂಥ ಹಣ ಇವರ ಪ್ರಕಾರ ಕಳೆದ ವರ್ಷ 1910 ಕೋಟಿ, ಈ ವರ್ಷ 2259 ಕೋಟಿ ಅಂದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು ನಮ್ಮನ್ನೆಲ್ಲಾ ಪ್ರಾಥಮಿಕ ಶಾಲೆಯ ಮಕ್ಕಳೆಂದು ತಿಳಿದುಕೊಂಡರೆ ಅಥವಾ ಇಲ್ಲಿ ಕುಳಿತಿರತಕ್ಕ 224 ಜನರೂ ಗಾಂಪರೆಂದು ತಿಳಿದುಕೊಂಡರೇ? ಅವಿವೇಕಿಗಳೆಂದು ತಿಳಿದುಕೊಂಡರೇ? ಅವರು ಏನು ಹೇಳುತ್ತಿದ್ದಾರೆಂದರೆ, ಕಳೆದ ಸಾರಿ 1910 ಕೋಟಿ ಕಲೆಕ್ಟ್ ಆಗಿತ್ತು. ನಾವು ಈ ಸಾರಿ 2259 ಕೋಟಿ ರೂ.ಗಳನ್ನು ಕ್ರೋಢೀಕರಣ ಮಾಡಿದ್ದೇವೆ ಅಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಕ್ರೋಢೀಕರಣವನ್ನು ಮಾಡಿದ್ದೇವೆ ಎನ್ನತಕ್ಕ ಪ್ರತಿಪಾದನೆಯನ್ನು ತಮ್ಮ ಮುಂದೆ ಮತ್ತು ಈ ರಾಜ್ಯದ ಜನತೆಯ ಮುಂದಿಟ್ಟಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಮರ್ಥನೀಯ? ಎಷ್ಟು ಮಟ್ಟಿಗೆ ನಾವು ಇದನ್ನು ನಂಬಿಕೊಳ್ಳಬೇಕು? ಎಷ್ಟು ಮಟ್ಟಿಗೆ ನಾವು ಇದನ್ನು ವಿಶ್ಲೇಷಣೆ ಮಾಡಿ ಇದರ ಒಳ ಅರ್ಥವನ್ನು ತಿಳಿದುಕೊಳ್ಳಬೇಕು? ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ಇದ್ದಂಥ ಯೋಜನೆಯ ಗಾತ್ರ 1915 ಕೋಟಿ ರೂ; ಇಷ್ಟು ಗಾತ್ರದ ಯೋಜನಾ ವೆಚ್ಚವನ್ನು ನಿಭಾಯಿಸುವುದಕ್ಕಾಗಿ ಅವತ್ತು ಸಂಗ್ರಹವಾದುದು 1910 ಕೋಟಿ ರೂ; 1915 ಕೋಟಿ ಇದ್ದಾಗ ನೀವು 1910 ಕೋಟಿ ರೂ.ಗಳನ್ನು ಸಂಪಾದನೆ ಮಾಡಿದ್ದಾರೆ. ಈ ವರ್ಷದ ಯೋಜನಾ ಗಾತ್ರ 3025 ಕೋಟಿ. ನಿಮ್ಮ ಆರ್ಥಿಕ ಇಲಾಖೆಯವರನ್ನು ಕರೆಯಿಸಿಕೊಂಡು ಕೇಳಿ, ಅವರು ಏನು ಹೇಳುತ್ತಾರೆ ನೋಡಿ. 1915 ಕೋಟಿ ಯೋಜನಾ ಗಾತ್ರ ಇದ್ದಾಗ ಸಂಗ್ರಹವಾದುದು 1910 ಕೋಟಿ ರೂ. ಈ ಸಾರಿ ನಮ್ಮ ಯೋಜನಾಗಾತ್ರ ಇರತಕ್ಕದ್ದು 3025 ಕೋಟಿ. ಅಂದರೆ 349 ಕೋಟಿ ರೂ. ಮಾತ್ರ ಇವರು ಜಾಸ್ತಿ ಮಾಡಿದ್ದಾರೆ. ಆದರೆ ಇವರು ಈ ವರ್ಷದ ಯೋಜನಾ ಗಾತ್ರವನ್ನು ಗಮನದಲ್ಲಿ ಇಟ್ಟುಕೊಂಡು ಆಲೋಚನೆ ಮಾಡಿದಾಗ ಇದು ಎಷ್ಟು ಆಗಬೇಕಾಗಿತ್ತು ಎಂದರೆ ಶೇಕಡ 58 ರಷ್ಟು ಯೋಜನಾ ಗಾತ್ರ ಹೇಗೆ ದೊಡ್ಡದಾಯಿತೋ ಅದೇ ರೀತಿ ಸಂಪತ್ತಿನ ಕ್ರೋಢೀಕರಣ ಕೂಡ ಶೇಕಡ 58 ಆಗಬೇಕಾಗಿತ್ತು. ಕಳೆದ ಸಾರಿ 100 ಕೋಟಿ ಆಯಿತು, ಈ ಸಾರಿ 110 ಕೋಟಿ ಮಾಡಿದ್ದೇವೆ, ಎಂದು ಇಲ್ಲಿ ದೊಡ್ಡ ಪಟ್ಟಿಯನ್ನೇ ಕೊಟ್ಟು ಬಿಟ್ಟಿದ್ದೀರಿ. ಕಳೆದ ಸಾರಿ ಅಬ್ಕಾರಿಯಲ್ಲಿ 200 ಕೋಟಿ ಆಗಿತ್ತು ಈ ಸಾರಿ 210 ಕೋಟಿ ಮಾಡಿದ್ದೇವೆ, ಕಳೆದ ಸಾರಿ ವಾಣಿಜ್ಯ ತೆರಿಗೆಯಿಂದ 300 ಕೋಟಿ ಆಗಿದ್ದರೆ ಈ ಸಾರಿ 350 ಕೋಟಿ ಮಾಡಿದ್ದೇವೆಂದು ನೀವು ಹೇಳುವುದರ ಬಗ್ಗೆ ನನಗೆ ಆಸಕ್ತಿ ಇಲ್ಲ. I am not interested in this. What was the size of the State plan last year and proportionate to the augmentation of those taxes, what is the size of this?

SRI M. MALLIKARJUNA KHARGE : It is our target.

ಶ್ರೀ ವೈ.ಕೆ. ರಾಮಯ್ಯ : ಅಂದರೆ ಈ ವರ್ಷ ಯೋಜನಾ ಗಾತ್ರವನ್ನು ಶೇಕಡ 58ಕ್ಕೆ ಏರಿಸಿದಿರಿ. ಇಷ್ಟು ಸಂಪನ್ಮೂಲದ ಕ್ರೋಢೀಕರಣ ಆಗಿದೆಯೆ? ಇದು

ಆಗಿದೆ ಎಂದು ತಾವು ಹೇಳುವುದಾದರೆ ನಾನು ಇವತ್ತೇ ನನ್ನ ರಾಜೀನಾಮೆಯನ್ನು ತಮಗೆ ಬರೆದು ಕಳುಹಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಆದ್ದರಿಂದ ನೀವು ಹೇಳುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನಮ್ಮ ಗುರಿ ಇದೆ. ನೋಡಿವವರಿಲ್ಲ.

ಶ್ರೀ ವೈ.ಕೆ. ರಾಮಯ್ಯ : ನನ್ನ ಕಂಠ ಶೋಷಣೆಯ ಪ್ರಯತ್ನ ಇಷ್ಟೆ. ಈ ವರ್ಷದ ಯೋಜನಾಗಾತ್ರವನ್ನು ಇವರು ಸರಿದೂಗಿಸಿಕೊಳ್ಳಬೇಕಾದರೆ ಇವರ ಸಂಪನ್ಮೂಲದ ಕ್ರೋಢೀಕರಣ ಕಳೆದ ವರ್ಷಕ್ಕಿಂತ ಶೇಕಡ 58 ಜಾಸ್ತಿ ಆಗಬೇಕು. ಅದು ಎಷ್ಟಾಗಿದೆ ಎಂಬುದನ್ನೇ ಮಾನ್ಯ ಮುಖ್ಯ ಮಂತ್ರಿಗಳ ಬಾಯಿಂದ ಹೇಳಿಸಬೇಕಾಗಿರುವುದು. ಅದನ್ನು ನಾನು ಹೇಳುವುದಿಲ್ಲ. "ಸಣ್ಣ ಉಳಿತಾಯ ಮಾರುಕಟ್ಟೆ ಕೇಂದ್ರದ ಯೋಜನೆಗಳ ಸಾಮಾನ್ಯ ಸಹಾಯ ಹೊರಗಿನ ಅನುದಾನಿತ ಇತರೆ ಕಾರ್ಯಕ್ರಮಗಳ 7 ತಿಂಗಳಲ್ಲಿ 1316 ಕೋಟಿ ರೂ. ಸಂಗ್ರಹವಾಗಿದ್ದು ಕಳೆದ ಸಾಲಿಗಿಂತ ಈ ವರ್ಷ ಶೇಕಡ 20.96 ರಷ್ಟು ಹೆಚ್ಚಾಗಿದೆ ಎಂದು ವಿವರಿಸಿದರು ಎಂದು ಬಂದಿದೆ. ಅದಕ್ಕೆ ಹೇಳಿದ್ದು; ಈ ಮುಖ್ಯಮಂತ್ರಿಗಳು ನಮ್ಮನ್ನು ಪ್ರೈಮರಿ ಶಾಲೆಯ ಹುಡುಗರು ಎಂದು ತಿಳಿದುಕೊಂಡಿದ್ದಾರೆಯೇ ಎಂದು. ಯಾವ ಯೋಜನಾ ವೆಚ್ಚದ ಗಾತ್ರವನ್ನು ಸರಿದೂಗಿಸುವುದಕ್ಕೆ ಶೇಕಡಾ 58ರಷ್ಟು ಸಂಪನ್ಮೂಲದ ಕ್ರೋಢೀಕರಣ ಆಗಬೇಕಾಗಿತ್ತೋ ಅಂತಹ ಕಡೆಗೆ ಆಗಿರತಕ್ಕ ಕ್ರೋಢೀಕರಣ 25.96 ಶೇಕಡ. ಎಂದರೆ, ನಾವು ಯೋಜನಾ ಗಾತ್ರ ಕಡಿತ ಮಾಡುವುದಿಲ್ಲ, ನಾವು ಯೋಜನಾ ಗಾತ್ರದ ಕಡಿತ ಮಾಡುವುದಿಲ್ಲ ಎಂದು ಊರ ಸುತ್ತ ಟಾಮ್ ಹೊಡೆಯುತ್ತಾ ಹೋದರೆ, ಈ ರಾಜ್ಯದ ಜನತೆ ಇದನ್ನು ನಂಬಬೇಕೇ? ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, 57 ಭಾಗದಷ್ಟು ಯೋಜನಾ ವೆಚ್ಚದ ಗಾತ್ರವನ್ನು ದೊಡ್ಡದು ಮಾಡಿದ ಅಪರಾಧಕ್ಕಾಗಿ ಈ ರಾಜ್ಯದ ಜನತೆಗೆ ಅವರು ಅತ್ಯಂತ ದ್ರೋಹವನ್ನು ಬಗೆದಿದ್ದಾರೆ. ಮೋಸವನ್ನು ಬಗೆದಿದ್ದಾರೆ. ಅದಕ್ಕಾಗಿ ಅವರು ಯೋಜನಾ ಗಾತ್ರದ ಕಡತವನ್ನು ಅವರು ಮಾಡಲೇಬೇಕಾಯಿತು. ಇದು ಎರಡನೇ ಕಾರಣ. ಮಾನ್ಯ ಅಧ್ಯಕ್ಷಿಣಿಯವರೇ, ಈ ಸಂಪನ್ಮೂಲದ ಕ್ರೋಢೀಕರಣ 57-58ಕ್ಕೆ ಬದಲಾಗಿ 20 ಎಂದು ಮಾನ್ಯ ಮುಖ್ಯಮಂತ್ರಿಯವರೇ ಒಪ್ಪಿಕೊಂಡಿದ್ದಾರೆ. ಇವರ ಪಕ್ಷದ ಅಥವಾ ಆಡಳಿತದ ಆಂತರಿಕ ವಿಷಯದಲ್ಲಿ ಮೂಗು ಹಾಕಲಿಕ್ಕೆ ನನಗೆ ಕಿಂಚಿತ್ತೂ ಆಸೆ ಇಲ್ಲ. ಆದರೆ ಅದರಿಂದ ನನಗೆ ಯಾವ ಲಾಭವೂ ದೊರೆಯುವುದಿಲ್ಲ. ಎಲ್ಲಾ ಪಕ್ಷಗಳೂ ಹಾಗೇ ಆಗಿರುವುದರಿಂದ ಈ ಪಕ್ಷ ಹೀಗೆ ಎಂದು ತೋರುವಾಗ ಒಂದು ಬೆರಳು ನಮ್ಮ ಕಡೆಗೂ ಇರುತ್ತದೆ. ಹಾಗೆ ಒಂದು ಸತ್ಯವನ್ನು ಮರೆಮಾಚದೇ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ಆಡಳಿತದಲ್ಲಿ ಬಿಗಿ ಇರುವುದಿಲ್ಲವೋ, ಯಾವ ಆಡಳಿತದಲ್ಲಿ ಸ್ಥಿರತೆ ಇರುವುದಿಲ್ಲವೋ, ಯಾವ ಆಡಳಿತದಲ್ಲಿ ಶಿಸ್ತು ಇರುವುದಿಲ್ಲವೋ ಅಂತಹ ಆಡಳಿತದಲ್ಲಿ ಸಾಮಾನ್ಯವಾಗಿ ಸಂಪನ್ಮೂಲದ ಕ್ರೋಢೀಕರಣದ ವಿಫಲತೆ ಆಗೇ ಆಗುತ್ತದೆ. It is again inevitable when there is lose administration; when there is mal-administration; when there is no control over the administration-you are bound to lose tax, you are bound to lose any tax to the exchequer......

ನಾನು ಮುಗುಮ್ಮಾಗ್ಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ಸುಮಾರು ಒಂದು ವರ್ಷದಿಂದ ಶ್ರೀ ವೀರಪ್ಪಮೊಯಿಲಿಯವರು ಅಧಿಕಾರಕ್ಕೆ ಬಂದ ಒಂದೆರಡು ತಿಂಗಳು ಬಿಟ್ಟರೆ ಇನ್ನು ಉಳಿದ ಎಲ್ಲಾ ಕಾಲದಲ್ಲೂ ಕೂಡಾ ಈ ರಾಜ್ಯದ ಆಡಳಿತ ಪಕ್ಷ ಅದರ ಚಟುವಟಿಕೆಗಳಲ್ಲಿ ನನಗೆ ಆಸಕ್ತಿ ಇಲ್ಲದೇ ಇದ್ದರೂ ಕೂಡಾ, ಆ ಆಡಳಿತ ಪಕ್ಷದ ಚಟುವಟಿಕೆಯಿಂದ ಈ ರಾಜ್ಯದ ಆಡಳಿತದ ಮೇಲೆ ಪ್ರಭಾವ ಆದಾಗ ಅದನ್ನು ವಿಧಿ ಇಲ್ಲದೇ ನೋವಿನಿಂದ ಪ್ರಸ್ತಾಪ ಮಾಡಬೇಕಾಗುತ್ತದೆ. ನಿಮ್ಮ

ಒಳಜಗಳದಲ್ಲಿ ನನಗೆ ಆಸಕ್ತಿ ಇಲ್ಲ. ಆದರೆ ಈ ಒಳಜಗಳದಿಂದ ಆ ಕಿತ್ತಾಟದಿಂದ, ಈ ರಾಜ್ಯದ ಜನರ ಅಭ್ಯುದಯದ ಕಾರ್ಯಕ್ರಮದ ಮೇಲೆ ಪ್ರಭಾವ ಬೀರುವ ಸಂದರ್ಭ ಬಂದಾಗ ನಮಗೆ ಬೇರೆ ಅಲ್ಟರ್ನೇಟಿವ್ ಇಲ್ಲ. ನಾವು ಹೇಳಲೇಬೇಕಾಗುತ್ತದೆ. ಅದಕ್ಕೇ ಹೇಳುತ್ತಿದ್ದೇನೆ, ಈ ಸಂಪನ್ಮೂಲದ ಕ್ರೋಢೀಕರಣದ ಹಿನ್ನೆಲೆ ಅಥವಾ ಹಿನ್ನೋಟಕ್ಕೆ, ಹಿಂದೆ ಬೀಳಲಿಕ್ಕೆ ಟು ಲ್ಯಾಗ್ ಬಿಹೈಂಡ್ ಅತ್ಯಂತ ಪ್ರಮುಖವಾದ ಕಾರಣ ಇದು. ಆಡಳಿತದಲ್ಲಿ ಬಿಗಿ ತಪ್ಪಿದ್ದು, ಆಡಳಿತದಲ್ಲಿ ಅಸ್ಥಿರತೆ ಬಂದಿದ್ದು, ಆಡಳಿತದಲ್ಲಿ ಶಿಸ್ತು ಇಲ್ಲದೇ ಇದ್ದದ್ದು ಸಂಪತ್ತನ್ನು ಕ್ರೋಢೀಕರಣ ಮಾಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಯೋಜನಾ ವೆಚ್ಚಗಳ ಸರಿದೂಗಿಸಿಕೊಂಡು ಹೋಗುವುದಕ್ಕೆ ಒಂದು ಮನೆಯನ್ನೇ ನಾವು ತೆಗೆದುಕೊಳ್ಳೋಣ. ನಮಗೆ ಬರುವ ಆದಾಯ ಕಡಿಮೆಯಾದಾಗ, ನಮ್ಮಲ್ಲಿರುವ ಒಂದು ಕುಟುಂಬದ ಆಯವ್ಯಯ ಏನಾದರೂ ಹೆಚ್ಚು ಕಡಿಮೆ ಆದಾಗ. ಆ ಸ್ಥಾನದಲ್ಲಿ ಕುಳಿತಿರುವ ತಮಗೆ ಗೊತ್ತಿದೆ ಹೇಗೆ ಸರಿದೂಗಿಸಬೇಕೆಂದು. ಯಾವುದಕ್ಕೆ ಖರ್ಚು ಮಾಡಬೇಕು, ಅಥವಾ ಖರ್ಚು ಮಾಡಬಾರದು ಎನ್ನುವುದನ್ನು ನಿಮ್ಮ ಮನೆಯವರು, ನಿಮ್ಮ ಮಕ್ಕಳು ಯಜಮಾನರೆಲ್ಲಾ ಕುಳಿತುಕೊಂಡು ಯೋಚನೆ ಮಾಡುತ್ತೀರಿ. ಈ ವರ್ಷ ಜಮೀನು ತೆಗೆದುಕೊಳ್ಳುವುದು ಬೇಡ, ಮಗಳನ್ನು ಮದುವೆ ಮಾಡೋಣವೆಂದೋ ಅಥವಾ ಈ ವರ್ಷ ಎರಡೂ ಬೇಡ ಆದಾಯ ಕಡಿಮೆ ಇರುವುದರಿಂದ ಎಷ್ಟು ಇದೆ ಅಷ್ಟರಲ್ಲಿ ಸರಿದೂಗಿಸಿಕೊಳ್ಳೋಣ ಎಂದು ಹೊಂದಾಣಿಕೆ ಮಾಡಿಕೊಂಡು ಮಾತನಾಡಿಕೊಂಡು ಹೋಗುವ ಪರಿಸ್ಥಿತಿ ಇರುತ್ತವೆ. ಆದ್ಯತೆಯನ್ನು ಗುರ್ತಿಸಿ ಆದ್ಯತಾ ವಲಯಕ್ಕೆ ಹಣವನ್ನು ಖರ್ಚು ಮಾಡುವುದರಲ್ಲಿಯೂ ಈ ಸರ್ಕಾರ ವಿಫಲವಾಗಿದೆ. ಅದಕ್ಕೆ ಕಾರಣ, ಮತ್ತೆ ನಿಮ್ಮ ಕಿತ್ತಾಟ. ಇವರ ನೀರಾವರಿ ಮಂತ್ರಿಗಳು ಎಷ್ಟು ಸಂಪುಟದ ಸಭೆಗಳಿಗೆ ಹಾಜರಾಗಿದ್ದಾರೆ, ಮಾನ್ಯ ಅಧ್ಯಕ್ಷಿಣಿಯವರೇ? ಆದ್ಯತಾ ವಲಯವಾದ ನೀರಾವರಿಗೆ ಹಣವನ್ನು ಪಡೆಯಲಿಕ್ಕಾಗಿ ಈಗಿರತಕ್ಕ ಆರ್ಥಿಕ ದುಸ್ಥಿತಿಯಲ್ಲೂ ಕೂಡಾ ಅನುಪಯುಕ್ತ ವೆಚ್ಚಗಳನ್ನು ಕಡಿತ ಮಾಡಿ, ಅನವಶ್ಯಕ ವೆಚ್ಚಗಳನ್ನು ಕಡಿತ ಮಾಡಿ, ಆದ್ಯತಾ ವಲಯಕ್ಕೆ ಹಣವನ್ನು ತರುವಂತಹ ಪವಿತ್ರ ಕೆಲಸ ಮಾಡುವುದರಲ್ಲಿ ನಿಮ್ಮ ನೀರಾವರಿ ಮಂತ್ರಿಗಳು ಎಷ್ಟು ಕೆಲಸವನ್ನು ಮಾಡಿದ್ದಾರೆ? ಒಂದು ಉದಾಹರಣೆ ಕೊಡಲೇ? ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಿಕ್ಕೆ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆಯುತ್ತಾರೆ. ನಿಮ್ಮ ನೀರಾವರಿ ಮಂತ್ರಿಗಳು ಅದಕ್ಕೆ ಹಾಜರಾಗುವುದಿಲ್ಲ. ವಿದ್ಯುತ್ ಶಕ್ತಿಗಾಗಿ ಹೊರದೇಶದಿಂದ ನಮಗೆ ಬರುತ್ತಿದ್ದಂತಹ ಆರ್ಥಿಕ ಸಹಾಯ ನಿಂತುಹೋದುದ್ದಕ್ಕೆ ಕಾರಣವನ್ನು ಹುಡುಕುವುದಕ್ಕೆ ಚರ್ಚೆ ಮಾಡಲಿಕ್ಕೆ ವಿರೋಧಪಕ್ಷದ ನಾಯಕರುಗಳ ಸಭೆ ಕರೆಯುತ್ತಾರೆ. ನಮ್ಮ ಮುಖ್ಯಮಂತ್ರಿಗಳು. ಆದರೆ ಇವರ ವಿದ್ಯುಚ್ಛಕ್ತಿ ಮಂತ್ರಿಗಳು ಅದಕ್ಕೆ ಹಾಜರು ಇಲ್ಲ. ತುಮಕೂರು ಜಿಲ್ಲೆಯ 4 ಲಕ್ಷ ಎಕರೆಗೆ ನೀರೆರೆಸುವಂತಹ ಯೋಜನೆಯನ್ನು ಅನುಷ್ಠಾನ ಮಾಡುವ ಸ್ಥಳಕ್ಕೆ ಮುಖ್ಯಮಂತ್ರಿಗಳು ಭೇಟಿ ಕೊಡುತ್ತಾರೆ. ಅವತ್ತು ಮಾರನೇ ದಿವಸ ಇವರ ನೀರಾವರಿ ಮಂತ್ರಿಗಳು ಹೇಳಿಕೆ ಕೊಡುತ್ತಾರೆ, ಅವರು ನನಗೆ ಏನು ಹೇಳಿ ಹೋಗಿಲ್ಲ ಎಂದು. ಏಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ,.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಸರಿ ಹೋಗಿದ್ದರೂ ಸಹ ನೀವು ಇನ್ನೂ ನಮಗೆ ಬಿಡುವುದಿಲ್ಲ ಏಕೆ?

ಶ್ರೀ ವೈ. ಕೆ. ರಾಮಯ್ಯ : ನನಗೆ ಅದರ ಬಗ್ಗೆ ಆಸಕ್ತಿ ಇಲ್ಲ ಖರ್ಗೆಯವರೇ. ನಾನು ಆಗಲೇ ಹೇಳಿದ್ದೇನೆ. ನಿಮ್ಮ ಆಂತರಿಕ ವಿಷಯದ ಬಗ್ಗೆ ನನಗೆ ಆಸಕ್ತಿ ಇಲ್ಲ. ನಿಮ್ಮ ಆಂತರಿಕ ಕಚ್ಚಾಟದಿಂದ ಅಭಿವೃದ್ಧಿ ಕೆಲಸಗಳ ಮೇಲೆ ಪ್ರಭಾವ ಬೀರುವುದಾದರೆ ಖಂಡಿತಾ ವಿಧಿ ಇಲ್ಲದೇ ಹೇಳಲೇಬೇಕಾಗುತ್ತದೆಂದು ಹೇಳುತ್ತಿದ್ದೇನೆ. ಹಣದ ಕೊರತೆ ಬಂದಾಗ, ಬಿಕ್ಕಟ್ಟು ಬಂದಾಗ ಆದ್ಯತೆಗಳನ್ನು ಗುರ್ತಿಸಿ, ಆದ್ಯತೆ ವಲಯಗಳಿಗೆ ಹಣವನ್ನು ಖರ್ಚು ಮಾಡುವ ವ್ಯವಸ್ಥೆ ಮಾಡಬೇಕಾದರೆ ಅದು

ನಿಮ್ಮಲ್ಲಿ ಹೊಂದಾಣಿಕೆ ಇದ್ದಾಗ ಮಾತ್ರ ಸಾಧ್ಯ. ನಿಮ್ಮಲ್ಲಿ ಹೊಂದಾಣಿಕೆ ಇಲ್ಲದ ಪರಿಸ್ಥಿತಿಯಿಂದಾಗಿ ಆದ್ಯತಾ ವಲಯಕ್ಕೆ ಹಣವನ್ನು ಒದಗಿಸುವುದರಲ್ಲೂ ಕೂಡಾ ಈ ಸರ್ಕಾರಕ್ಕೆ ಆಗಿಲ್ಲ. ಇದು ನಾಲ್ಕನೆಯದು. ಮತ್ತೊಂದು ಪ್ರಮುಖವಾದ ಕಾರಣ ಎಂದರೆ, ನಮ್ಮ ರಾಜ್ಯದ ಎಲ್ಲಾ ತೆರಿಗೆಗಳ ಜೊತೆಗೆ, ನಮ್ಮ ಎಲ್ಲಾ ಸಂಪತ್ತು ಕ್ರೋಢೀಕರಣದ ಜೊತೆಗೆ, ನಮಗೆ ಬರುವಂತಹ ಮತ್ತೊಂದು ಮೂಲ ಕೇಂದ್ರ ಸರ್ಕಾರದಿಂದ ಬರುವಂತಹ ನಮ್ಮ ಪಾಲು; ನಮಗೆ ಬರಬೇಕಾದಂತಹ ಹಣ. ಬಹುಶಃ ಅದಕ್ಕೇ ಈ ಫೆಡರಲ್ ಸಿಸ್ಟಮ್ ಇರಬೇಕೇ ಬೇಡವೇ ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕು. ಈ ಸರ್ಕಾರಕ್ಕೆ ತನಗೆ ದಕ್ಕಬೇಕಾದ ಪಾಲನ್ನು ಒತ್ತಾಯ ಮಾಡಿ ತರುವ ಶಕ್ತಿ ಇಲ್ಲ. ಅದಕ್ಕೆ ಬೇಕಾದರೆ ಚರ್ಚೆ ಮಾಡೋಣ. ಯಾವ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಪರ್ಕ್ಯಾಪಿಟಾ ಇನ್ಕಮ್ ತೆಗೆದುಕೊಂಡು ವಿತರಣೆ ಮಾಡುತ್ತಾರೆ, ಎಷ್ಟು ಆಗಿದೆ, ಓದಲೇ ಎಡಿಟೋರಿಯಲ್ಸ್? ಟೈಮ್ ಕೊಡುವುದಾದರೆ ನಾಳೆ ಮತ್ತೆ ನಾನು ಮುಂದುವರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕಿಂತ ಹೊರತಾಗಿ ಯಾವ ಮೂಲದಿಂದ ತರಲು ಬರುತ್ತದೆಂದು ವಿವರಿಸಿ ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಹೇಳೋಣ. ನಾನು ಹೋಗುವುದು ಬೇಡ ಎಂದಿದ್ದೆ. ತಾವು ಹೋಗಿ ಎಂದರೆ ಹೋಗುತ್ತೇನೆ. ಡಾ: ಮನಮೋಹನ ಸಿಂಗ್ ಅವರು ಮಂಡಿಸಿದ 1993-94ರ ಬಡ್ಜೆಟ್ ಉದ್ಯಮಿಗಳ ಮನಮೆಚ್ಚಿಸುವಂತಿದೆ. ಅದಕ್ಕೇ ನಾನು ಹೇಳುತ್ತಿದ್ದೇನೆ, ಉದಾರ ನೀತಿಯಿಂದಾಗಿ ನನಗಾಗಲೀ, ನನ್ನ ಶೆಡ್ನಲ್ಲಿ ಇರುವವನಿಗಾಗಲೀ, ನನ್ನ ತೋಟದವನಿಗಾಗಲೀ ಏನೂ ಆಗಲಿಲ್ಲ. "ಕೈಗಾರಿಕೆಗಳಿಗೆ ಉತ್ಸಾಹ ತುಂಬುವಂತಿದೆ. ವಿದೇಶಿ ವಿನಿಮಯ ಲಭ್ಯತೆಯನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಾಗಿದೆ. ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗಿದೆ. ಎಲ್ಲಾ ಸರಿ. ಆದರೆ ಕರ್ನಾಟಕದ ಮಟ್ಟಿಗೆ ಈ ಬಡ್ಜೆಟ್ ಅಷ್ಟು ಉಪಾಯಕಾರಿಯಾಗಿಲ್ಲ ಇದನ್ನು ನಾನು ಹೇಳುತ್ತಿಲ್ಲ. ಪತ್ರಿಕೆಯ ಸಂಪಾದಕರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಅವರ ಅಭಿಪ್ರಾಯ.

ಶ್ರೀ ವೈ.ಕೆ. ರಾಮಯ್ಯ : ಅದೇ ನನ್ನ ಅಭಿಪ್ರಾಯ. ರಾಜ್ಯದಲ್ಲಿರುವಂತಹ ನಮ್ಮ ಆದಾಯದ ಜೊತೆಗೆ ಮತ್ತೊಂದು ನಮಗೆ ಕೂಡಿ ಬರುವ ಪಾಲು ಎಂದರೆ, ಕೇಂದ್ರದಿಂದ ಬರುವ ಸಹಾಯಧನ, ಇತರೆ ಹಣ. ಏಕೆ ಹೇಳುತ್ತಿದ್ದೇನೆ ಎಂದರೆ, ಈ ಹಣವನ್ನು ಕೂಡಾ ಒತ್ತಾಯ ಮಾಡಿ ತರುವಂತಹ ಶಕ್ತಿಯಲ್ಲಿ ಈ ಸರ್ಕಾರ ಇಲ್ಲ. ಈ ಮುಖ್ಯಮಂತ್ರಿಗಳು ಇಲ್ಲ, ಕಾರಣ ಬಹುಶಃ ತಿಂಗಳ ಬೆಳಕಿನಷ್ಟು, ಸೂರ್ಯನ ಬೆಳಕಿನಷ್ಟು ಸ್ಪಷ್ಟ. ಅದೇನೆಂದರೆ, ಈ ಮುಖ್ಯಮಂತ್ರಿಗಳು ಅವರು ಮಾಡಿದಂತಹ ಮುಖ್ಯಮಂತ್ರಿಗಳು ಅವರನ್ನು ವಿರೋಧ ಮಾಡಿಕೊಂಡು ಒತ್ತಾಯ ಮಾಡಿ ನನ್ನ ರಾಜ್ಯಕ್ಕೆ ಸಿಕ್ಕಬೇಕು, ಇಷ್ಟು ದಕ್ಕಬೇಕು ಎನ್ನತಕ್ಕ ದಾಷ್ಟತನವಾಗಲೀ, ಕೆಚ್ಚಾಗಲೀ ಇವರಲ್ಲಿ ಉಳಿದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂತಹ ಉದ್ಯಮಗಳು ಯಾವುವು? ಏಕೆಂದರೆ ತಮಗೆಲ್ಲಾ ಗೊತ್ತಿದೆ. ಹಿಂದೆ ತಾವು ಕೂಡ ಸರ್ಕಾರದಲ್ಲಿ ಇದ್ದಿರಿ. ಫೈನಾನ್ಸ್ ಕಮಿಷನ್ನಿಂದ ಅಲೋಕೇಷನ್ ಐಟಮ್ 5ರ ನಮ್ಮ ರೂಲ್ಸ್ ಪ್ರಕಾರ ಆಗಬೇಕು. ಅದನ್ನು ಒತ್ತಾಯ ಮಾಡಿ ಅಥವಾ ನಮ್ಮ ಪ್ರಭಾವ ಬೀರಿ ನಾವು ತಂದಿದ್ದೇವೆ, ನೀವು ತಂದಿಲ್ಲ ಎನ್ನುವುದಾದರೆ, ಅದು ಹೇಗೆ ಬರಬೇಕಾಗಿತ್ತು, ಯಾಕೆ ಬಂದಿಲ್ಲವೆಂದು ಹೇಳಿದರೆ ಕೊನೆಯ ಪಕ್ಷ ನಮಗಾದರೂ ಗೊತ್ತಾಗುತ್ತದೆ ಯಾವ್ಯಾವ ಸೆಕ್ಟರ್‌ಗಳಲ್ಲಿ ಯಾವ್ಯಾವ ಐಟಮ್‌ಗಳು ಎಂದು.

ಶ್ರೀ ವೈ.ಕೆ.ರಾಮಯ್ಯ : ನಾನು ಆಗಲೇ ಹೇಳಿದೆ, ನನಗೆ ಕಾಲಮಿತಿ ಇದೆಯೆಂದು ಒಂದು ನಿಮಿಷ ತಡಕೊಳ್ಳಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸರ್ಕಾರದಲ್ಲಿ ಹಿಂದೆ ಇದ್ದೀರಿ. ಸರ್ಕಾರ ನಡೆಸ್ತಾ ಇದ್ದಿರಿ. ಅವು ಯಾವ್ಯಾವ ಸೆಕ್ಟರ್‌ಗಳೆಂದು ನಾವು ಕೂಡ ತಿಳಿದುಕೊಳ್ಳೋಣ. ಏಕೆಂದರೆ ನಾವೂ ಕೂಡ ನಮ್ಮ ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇಕಾದರೆ ಒತ್ತಾಯ ಮಾಡಿ ಏನಾದರೂ ಮಾಡುವುದಕ್ಕೆ ಬರುವಂತಿದ್ದರೆ ನೋಡೋಣ.

ಶ್ರೀ ವೈ.ಕೆ. ರಾಮಯ್ಯ : ಈ ರಾಜ್ಯಕ್ಕೆ ಅದರಲ್ಲೂ ಕೂಡ ಅನ್ಯಾಯವಾಗಿದೆ ಎಂಬ ಮಾತನ್ನು ಹೇಳಿದೆ. ನನಗೆ ಅದಕ್ಕೆ ಎಲ್ಲಾ ಕಾಲಾವಕಾಶ ಇಲ್ಲದೇ ಇರುವುದರಿಂದ ಹೇಳುವುದಕ್ಕೆ ಆಗುತ್ತಿಲ್ಲ. ಸ್ವಾಮಿ, ಈ ರಾಷ್ಟ್ರದ 22 ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದ ಯೋಜನಾ ವೆಚ್ಚದ ಶೇಕಡಾವಾರು 5ನೇ ಪಂಚವಾರ್ಷಿಕ ಯೋಜನೆಯಲ್ಲಿ 5.5 ಅದು ತಪ್ಪಿದ್ದರೆ ನಾನು ತಿದ್ದಿಕೊಳ್ಳುತ್ತೇನೆ. 6ನೇ ಪಂಚವಾರ್ಷಿಕ ಯೋಜನೆಯಲ್ಲಿ 4.8 ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 85ರಿಂದ 90ರವರೆಗೆ 4.4 ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಕೊಟ್ಟಿರುವ 12,300 ಕೋಟಿ, ಅದರ ಪರ್ಸೆಂಟೇಜನ್ನು ಸ್ವಲ್ಪ ಲೆಕ್ಕಹಾಕಬೇಕಾಗುತ್ತದೆ. ಅದಕ್ಕೆ ಟೈಮ್ ತೆಗೆದುಕೊಳ್ಳುತ್ತದೆ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ 5, 6ನೇ ಪಂಚವಾರ್ಷಿಕ ಯೋಜನೆಯಲ್ಲಿ 4, 7ನೇ ಪಂಚವಾರ್ಷಿಕ ಯೋಜನೆಯಲ್ಲೂ 4. 8ನೇ ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ನಾವು ಅದಕ್ಕಿಂತ ಭಿನ್ನ ಆಗುತ್ತದೆ ಎಂದು ನಾನು ಭಾವಿಸಿಲ್ಲ. ನಾನು ವಿರೋಧ ಪಕ್ಷದ ಶಾಸಕನಾಗಿ ಇಲ್ಲಿ ಮಾತನಾಡುತ್ತಿಲ್ಲ, ಈ ರಾಜ್ಯದ ಒಬ್ಬ ಪ್ರಜೆಯಾಗಿ ಮಾತನಾಡುತ್ತಾ ಇದ್ದೇನೆ. ಕೇಂದ್ರಸರ್ಕಾರ ರಾಜ್ಯಗಳಿಗೆ ಸಂಪನ್ಮೂಲಗಳನ್ನು ಹಂಚುವಂಥ ಸಂದರ್ಭದಲ್ಲಿ 4-5 ಪರ್ಸೆಂಟ್‌ಗಿಂತ ಜಾಸ್ತಿ ನಮಗೆ ಕೊಡದೇ ಇರುವುದನ್ನು ನೋಡಿದಾಗ ವಿಧಿಯಿಲ್ಲದೇನೇ ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದಿರುವಂಥ ಸಂಪಾದಕರ ಮಾತನ್ನು ನಾನು ಒಪ್ಪಬೇಕಾಗುತ್ತದೆ, ನೀವು ಕೂಡ ಒಪ್ಪಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ.....

ಶ್ರೀ ವೈ.ಕೆ.ರಾಮಯ್ಯ : ನೀವು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದೇನಲ್ಲಾ, ಇನ್ನೇನು ಹೇಳಲಿ ?

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳುವಾಗ ಕಲೆಕ್ಟ್ ಆಗಿ ಹೇಳಿಬಿಟ್ಟರೆ ನಾವು ಕೇಳುವಂಥ ಪ್ರಶ್ನೆ ಬರುವುದಿಲ್ಲ. ಈಗ ತಾವೇನು ವಿವರಿಸಿದ್ದೀರಿ, ಅದರಲ್ಲೇನೂ ಭಿನ್ನಾಭಿಪ್ರಾಯ ಇಲ್ಲ. ನಮಗೆ ಫೈನಾನ್ಸ್ ಕಮಿಷನ್ನವರು ಏನು ಅಲೋಕೇಷನ್ ಮಾಡುತ್ತಾರೆ, ಆ ಅಲೋಕೇಷನ್ ಮೇಲೆ ಓವರ್ ಅಂಡ್ ಅಬೋವ್ ದೆಟ್ ಅಲೋಕೇಷನ್ ಯಾವ್ಯಾವ ಸೆಕ್ಟರ್‌ನಿಂದ ತರುವುದಕ್ಕೆ ಸಾಧ್ಯವಿದೆ, ಅದನ್ನು ತರಲಿಲ್ಲ ಎಂದು ನೀವು ಹೇಳಿದಿರಿ. ಯಾಕೆಂದರೆ ನಮ್ಮ ಮುಖ್ಯಮಂತ್ರಿಗಳು ಬೆಂಗಳೂರು ಯೂನಿವರ್ಸಿಟಿಯಿಂದ ಗ್ರಾಜ್ಯುಯೇಟ್ ಆದವರು ಬನಾರ್ಸ್ ಯೂನಿವರ್ಸಿಟಿಯಿಂದ ಗ್ರಾಜ್ಯುಯೇಟ್ ಆದವರು ಮುಖ್ಯಮಂತ್ರಿಗಳಾಗಿದ್ದರು. ಈಗ ಅವರೇನಾದರೂ ಓವರ್ ಅಂಡ್ ಅಬೋವ್ ಅಲೋಕೇಟೆಡ್ ರಿಸೋರ್ಸಸ್ ತಂದಿದ್ದಿದ್ದರೆ, ಅವರು ಮಾಡಿದ್ದನ್ನೂ ನಮಗೆ ಮಾಡುವುದಕ್ಕೆ ಆಗದೇ ಇದ್ದಿದ್ದರೆ ಏನಾದರೂ ಬಾಬು ಉಳಿದಿದ್ದರೆ ಹೇಳಿ. ನಾವು ಸ್ವಲ್ಪ ನೋಡೋಣ, ಬನಾರಸ್‌ಗೆ ಹೋಗಲಿಕ್ಕೆ ಆಗದಿದ್ದರೂ ಕೊನೆಗೆ ಡೆಲ್ಲಿಗಾದರೂ ಹೋಗಿ ಯೂನಿವರ್ಸಿಟಿ ಹತ್ತಿ ಏನಾದರೂ ಜಾಸ್ತಿ ತರುವುದಕ್ಕೆ ಪ್ರಯತ್ನ ಮಾಡೋಣ. ಅದಕ್ಕೇನಂತೆ ?

ಶ್ರೀ ಟಿ.ಎಂ. ಮಂಜುನಾಥ್ : ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ರಾಮಯ್ಯ ನವರು ಪಂಚವಾರ್ಷಿಕ ಯೋಜನೆ ಬಗ್ಗೆ ಪ್ರಸ್ತಾವನೆ ಮಾಡಿದರು. ಕೇಂದ್ರ ಸರ್ಕಾರದಿಂದ

ಬರತಕ್ಕಂಥ ಹಣ ಗಾಡ್ಗೀಳ್ ಫಾರ್ಮುಲಾ ಪ್ರಕಾರ ಇಡೀ ರಾಜ್ಯಗಳಿಗೆ ಅನ್ವಯಿಸುತ್ತದೆ. ನಮ್ಮ ಒಂದು ರಾಜ್ಯಕ್ಕೆ ಅಲ್ಲ ಮತ್ತು ನಮ್ಮ ರಾಜ್ಯ ಎಷ್ಟರ ಮಟ್ಟಿಗೆ ಹಿಂದುಳಿದ, ಮುಂದುಳಿದಿದೆ, ಪಾವರ್ಟಿ ಎಷ್ಟಿದೆ, ಮತ್ತು ಬೇರೆ ಬೇರೆ ಕಾರಣಗಳನ್ನು ರೂಪುಗಳನ್ನು ನೋಡಿ ಅದನ್ನು ಹಂಚುತ್ತಾರೆ. ಅದು ಮಾನ್ಯ ರಾಮಯ್ಯನವರಿಗೆ ಗೊತ್ತಿದೆ. ಈ ದಿಸೆಯಲ್ಲಿ ನಮ್ಮ ಸರ್ಕಾರ 90-91ರಿಂದ ಈಚೆಗೆ ಬಂದಮೇಲೆ ಸಂಪನ್ಮೂಲಗಳನ್ನು ಹೆಚ್ಚಿಗೆ ಕ್ರೋಢೀಕರಿಸಿ, ಇಡೀ ರಾಷ್ಟ್ರದಲ್ಲೇ ಅತ್ಯುತ್ತಮವಾಗಿರತಕ್ಕಂಥ ಸ್ಥಾನದಲ್ಲಿದ್ದೇವೆ ಎಂಬುದು ಅವರಿಗೆ ಗೊತ್ತಿದೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಮುಖ್ಯಮಂತ್ರಿಗಳು ತಡಬೇಕಾದಂಥಾದ್ದು, ಇನ್ಫ್ಲುಯನ್ಸ್ ಉಪಯೋಗಿಸಬೇಕಾದಂಥಾದ್ದು ಅಂತಹ ಕೆಲಮಿಟೀಸ್ ಆದಾಗ, ಫ್ಲಡ್ ಭೂಕಂಪ ಮುಂತಾದ್ದು ಆದಾಗ, ಮತ್ತು ಇನ್ನಿತರ ಸ್ಕೇರ್‌ಸಿಟೀಸ್ ಬಂದಾಗ ಒತ್ತಾಯ ಮಾಡಬಹುದೇ ವಿನಹ, ಅವರು ನ್ಯಾಯವಾದ ರೀತಿಯಲ್ಲಿ ಹಂಚಿದ್ದಾರೆ ಎಂಬತಕ್ಕಂಥ ಅಂಶವನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ನಮ್ಮ ಪ್ರೊಫೆಸರ್ ಅವರಿಗೆ ವಂದನೆಗಳು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 41 ಪರ್ಸೆಂಟ್. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ವಿಷಯ ಬಹುಶಃ ಒಂದು ಮಾತಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿ ಈ ರಾಜ್ಯಸರ್ಕಾರ ಕೇಂದ್ರಸರ್ಕಾರದ ಹಂಗಿಗೆ ಸಿಕ್ಕಿಕೊಂಡು ತನಗೆ ದಕ್ಕಬೇಕಾದಂಥ ಪಾಲನ್ನು ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ ಎನ್ನುವುದರ ಬಗ್ಗೆ ನಾನು ಬರೆದು ಕಳುಹಿಸುತ್ತೇನೆ. ಅದರ ಬಗ್ಗೆ ಚರ್ಚೆ ಮಾಡೋಣ. ನಾನು ಆಗಲೇ ಹೇಳಿದ್ದೇನೆ. ಮನಮೋಹನ್‌ಸಿಂಗ್‌ರಷ್ಟು ಅಲ್ಲದೇ ಇದ್ದರೂ ಕೂಡ, ನಿಮ್ಮ ಮುಖ್ಯಮಂತ್ರಿಗಳಷ್ಟು ಅಲ್ಲದೇ ಇದ್ದರೂ ಕೂಡ, ಸರಕು ನನ್ನ ಹತ್ತಿರ ಸುಮಾರಾಗಿದೆ. ಅದಕ್ಕೆ ಕಾಲವನ್ನು ಬೇರೆ ದಿವಸ ನಿಗದಿ ಮಾಡಿ.

ಶ್ರೀ ಟಿ. ಎಂ. ಮಂಜುನಾಥ್ : ಮಾನ್ಯ ರಾಮಯ್ಯನವರೇ, ಇನ್‌ಫ್ಲೇಷನ್ 16 ಪರ್ಸೆಂಟು ಇದ್ದದ್ದು ಹೋದವರ್ಷ ಅದು 5.6 ಪರ್ಸೆಂಟ್‌ಗೆ ಬಂದಿದೆ. ಈ ವರ್ಷ ಸ್ವಲ್ಪ ಜಾಸ್ತಿಯಾಗಿದೆ.

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷಣಿಯವರೇ, ಮನುಷ್ಯ ಮನುಷ್ಯನೇ. ಕಾಂಗ್ರೆಸ್ ಪಕ್ಷದಲ್ಲಿದ್ದರೂ ಮನುಷ್ಯನೇ, ದಳದ ಪಕ್ಷದಲ್ಲಿದ್ದರೂ ಮನುಷ್ಯನೇ, ಕಮ್ಯುನಿಸ್ಟ್ ಪಕ್ಷದಲ್ಲಿದ್ದರೂ ಮನುಷ್ಯನೇ. ಯಾರ ಹಂಗಿನಿಂದ ಅಧಿಕಾರಕ್ಕೆ ಬಂದಿರುತ್ತಾನೋ, ಅಂತಹ ವ್ಯಕ್ತಿ ಕೆಚ್ಚೆದೆಯಿಂದ ಹೋರಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬಂದು ನನ್ನ ಅಭಿಪ್ರಾಯ. ಅಷ್ಟು ಮಾತ್ರ ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಕಾಗೋಡು ತಿಮ್ಮಪ್ಪ : ಇದು ವ್ಯವಸ್ಥೆ ಏನಿದೆ, ಅದರ ಮೇಲೆ ಬರುತ್ತಾರೆ. ಹಂಗಿನಲ್ಲಿ ಬಂದಿದ್ದಾರೆ ಎಂದು ಹೇಳಿದರೆ, ಅದೇನು ಜೀತದಾಳೇ ಹಂಗಿನಿಂದ ಬರುವುದಕ್ಕೆ?

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ವಿಫಲತೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಮತ್ತೊಂದು ಪ್ರಯತ್ನವನ್ನು ಮಾಡಬಹುದಿತ್ತು. ಅದು ಮಿತವ್ಯಯ. ಅದು ಸಾಧ್ಯವಾಗಲಿಲ್ಲ. ಇನ್ನು ಮುಂದೆ ಬರುವಂಥ ಯಾವುದೇ ಸರ್ಕಾರ ಮಿತವ್ಯಯವನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. 1992-93ರಲ್ಲಿ ಇವರ ಯೋಜನೇತರ ವೆಚ್ಚಗಳು 65 ಪರ್ಸೆಂಟ್. ಈ ವರ್ಷ ಅದಕ್ಕೆ 5 ಪರ್ಸೆಂಟ್ ಇನ್‌ಫ್ಲೇಷನ್ ಜಾಸ್ತಿಯಾಗಿದೆ ಅಂತ ನೀವೇ ಹೇಳುತ್ತೀರಿ. ನಾನು ಅದಕ್ಕೆ 5 ಪರ್ಸೆಂಟ್ ಮಾತ್ರ ಸೇರಿಸುತ್ತೇನೆ. ಒಟ್ಟಿಕ್ಕೆ 5 ಪರ್ಸೆಂಟ್ ಸೇರಿಸಿದರೆ 70 ಪರ್ಸೆಂಟ್ ಆಯಿತು. ಈ ವರ್ಷ 70 ಪರ್ಸೆಂಟ್ ಯೋಜನೇತರ ವೆಚ್ಚಗಳು. 1325 ಕೋಟಿಯಲ್ಲಿ 70 ಭಾಗ ಯೋಜನೇತರ ವೆಚ್ಚವನ್ನು ಕಳೆದರೆ ಯೋಜನಾ ಕಾರ್ಯಗಳಿಗೆ ನಿಮ್ಮಲ್ಲಿ

ಉಳಿಯುವಂಥ ಹಣ 1010 ಕೋಟಿಗಳು ಮಾತ್ರ. ಯೋಜನಾ ಮಂತ್ರಿಗಳು ಇದನ್ನು ಒಪ್ಪುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಹಾಗಲ್ಲ. ಯೋಜನೆಗೋಸ್ಕರವೇ 3020 ಕೋಟಿ. ಯೋಜನೇತರಗಳಿಗೆ ಬೇರೆ ಇದೆ. ಅದನ್ನು ಮಿಕ್ಸ್ ಮಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ : ದಯಮಾಡಿ ಕುಳಿತುಕೊಳ್ಳಿ. ನೀವು ಹೇಳುತ್ತೀರಿ. ಎಂದು ನಾನು ರೆಡಿಮಾಡಿಕೊಂಡು ಬಂದಿದ್ದೇನೆ. ಇದು ನಮ್ಮ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಾಡಿದ ಆಯವ್ಯಯ ಭಾಷಣದ ಮುದ್ರಣವಾದ ಅಥೆಂಟಿಕೇಟೆಡ್ ಡಾಕ್ಯುಮೆಂಟ್ ಪ್ಯಾರಾ 16. ವೇತನ, ನಿವೃತ್ತಿವೇತನ, ಸಾಲ ಮರುಪಾವತಿ, ಬಡ್ಡಿ ಸಂದಾಯ ಹೊರೆ ಹಾಗೂ ಸಹಾಯಧನಗಳ ವೆಚ್ಚದ ಸಂಕ್ಷಿಪ್ತ ವಿವರ ಹೀಗಿದೆ

ಒಟ್ಟು ವೆಚ್ಚದಲ್ಲಿ ಶೇಕಡಾ 53ರಷ್ಟನ್ನು ಈ ಬಾಬುಗಳಿಗೆ ವೆಚ್ಚಮಾಡುವುದನ್ನು ಕಾಣಬಹುದು.

ಇದಾದ ಮೇಲೆ 46.70 ಇಷ್ಟರಲ್ಲಿ ಸಾಮಾನ್ಯ ನಿರ್ವಹಣೆ, ಅಭಿವೃದ್ಧಿಯೇತರ ವೆಚ್ಚಗಳ ಹಣ, ಅಂದರೆ ಸಂಬಳ ಸಾರಿಗೆ, ಟೆಲಿಫೋನ್, ಸಾಯಿಬಾಬಾರವರಿಗೆ ಕಾಣಿಕೆ ಕೊಡುವುದು. ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಅತ್ಯಂತ ಅಗತ್ಯವಾದ ಬಂಡವಾಳ ಹೂಡುವಿಕೆಗೆ ಉಳಿದಿರುವ ಹಣ ತುಂಬ ಕಡಿಮೆ. ಇದು ನಿಮ್ಮ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಈ ಸದನದಲ್ಲಿ ಒಪ್ಪಿಕೊಂಡಿರುವುದು. ಅದನ್ನೇ ನಾನು ಹೇಳುವುದಕ್ಕೆ ಹೊರಟಿರುವುದು.

ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು ಕಳೆದ ಮೇಲೆ ನಿಮ್ಮಲ್ಲಿ ಉಳಿಯುವುದು1010 ಕೋಟಿ ಮಾತ್ರ ಪ್ಲಾನ್ ಎಕ್ಸ್‌ಪೆಂಡಿಚರ್ ಎಂದು ನಾನು ಹೇಳುವುದಕ್ಕೆ ಬಂದಿರುವುದು. ಇದು ನನ್ನ ಅಂಕಿ ಅಂಶಗಳು ಅಲ್ಲ. ಇವನ್ನೆಲ್ಲಾ ನಾನೆಲ್ಲಿ ಹುಟ್ಟುಹಾಕಲಿ? ನಿಮ್ಮದನ್ನೇ ನಾನು ಹೇಳುತ್ತಿದ್ದೇನೆ. ಈ ರಾಜ್ಯದ ಯೋಜನಾ ವೆಚ್ಚದಲ್ಲಿ ಶೇಕಡಾ 70ರಷ್ಟು ಯೋಜನತೇತರ ವೆಚ್ಚಗಳಿಗೆ ವ್ಯಯ ಮಾಡಬೇಕಾಗುತ್ತದೆ. ಒಪ್ಪುವರು ಒಪ್ಪಬಹುದು. ಬಿಡುವವರು ಬಿಡಬಹುದು. ಒಪ್ಪಿದರೆ ನಿಮ್ಮ ಪುಸ್ತಕವೇ ಸರಿಯಾಗಿಲ್ಲ ಎಂದು ಹೇಳುತ್ತೇನೆ, ಕೇಳಿ. ಅದರಲ್ಲೂ ಒಪ್ಪುವುದಿಲ್ಲವೆಂದರೆ, ಇಲ್ಲಿ ನಿಮ್ಮ ಆರ್ಥಿಕ ಸಮೀಕ್ಷೆ ಇದೆ, ಅದನ್ನು ಓದುತ್ತೇನೆ.

4.45 ಪಿಎಂ

1010 ಕೋಟಿ ಇವರ ಯೋಜನೆಯ ವೆಚ್ಚಗಳಿಗೆ ಹಣ ಉಳಿದುಕೊಂಡಿತು. ಇವರು ಹೇಳುತ್ತಾರೆ. 900 ಕೋಟಿ. ನೀರಾವರಿಗೆ ಕೊಡುತ್ತೇವೆಂದು ಹೇಳುತ್ತಾರೆ. 600 ಕೋಟಿ ವಿದ್ಯುಚ್ಛಕ್ತಿಗೆ ಕೊಡುತ್ತೇವೆಂದು ಹೇಳುತ್ತಾರೆ, ಒಂದು ಕೋಟಿ ರೂಪಾಯಿಗಳನ್ನು ಬೋರ್ ವೆಲ್ಗೆ ಕೊಡುತ್ತೇವೆಂದು ತುಮಕೂರಿನಲ್ಲಿ ಹೇಳಿಬಂದರು. ಯೋಜನೇತರ ವೆಚ್ಚಗಳನ್ನು ಕಳೆದ ಮೇಲೆ ಇವರಿಗೆ ಉಳಿಯುವುದು 1010 ಕೋಟಿಯಾದರೆ, ಈ ಕೋಟಿಗಳಿಗೆ ಏನಾದರೂ ಸೊನ್ನೆ ಇದೆಯೆಂದು ತಿಳಿದುಕೊಂಡಿದ್ದರೆ, ಎಷ್ಟು ಸೊನ್ನೆ ಎಂದು ಇವರು ತಿಳಿದುಕೊಂಡಿದ್ದಾರೆ. ಅದಕ್ಕಾಗಿಯೇ ನಾನು ಹೇಳುತ್ತಾ ಇರುವುದು, ಈ ಸರ್ಕಾರ, ಈ ಯೋಜನೆಗಳ ಗಾತ್ರವನ್ನು ಕಡಿತ ಮಾಡಲೇಬೇಕು ಎಂದು ನಾನು ಏಕೆ ಹೇಳುತ್ತೇನೆಂದರೆ, ಯೋಜನೇತರ ವೆಚ್ಚಗಳನ್ನು ಕಳೆದ ಮೇಲೆ, ಅಭಿವೃದ್ಧಿ ಕೆಲಸಗಳಿಗಾಗಿ ಉಳಿಯುವಂಥ ಹಣ, ಮುಖ್ಯಮಂತ್ರಿಗಳ ಪ್ರಕಾರ ತುಂಬಾ ಕಡಿಮೆ. ನೀವು ಮುಖ್ಯಮಂತ್ರಿಗಳ ಭಾಷಣಕ್ಕೇ ಕತ್ತು ಅಲ್ಲಾಡಿಸಿದರೆ ನಾನೇನು ಮಾಡಲಿ? ಇದು ನನ್ನ ಭಾಷಣವಲ್ಲ. ಯೋಜನೇತರ ವೆಚ್ಚಗಳಿಗೆ ಹಣವನ್ನು ಕಳೆದ ಮೇಲೆ ಯೋಜನೆಗಳ ವೆಚ್ಚಗಳಿಗೆ ಬಂಡವಾಳ ಹೂಡಿಕೆಗಾಗಿ ಉಳಿಯುವ ಹಣ ತುಂಬಾ

ಕಡಿಮೆ. 1993-94ರ ಈ ವರ್ಷದ ಬಜೆಟ್ ಭಾಷಣ. ಇದನ್ನು ತಾವು ಸ್ವಲ್ಪ ಓದಿ. ಈ ವರ್ಷಕ್ಕೆ ಎಂದು ಹೇಳಿದ್ದಾರೆ. ನಮಗೆ ಅಷ್ಟೇ ಗೊತ್ತಾಗುವುದು.

ಶ್ರೀ ಟಿ.ಎಂ. ಮಂಜುನಾಥ್ : ಅದು 1993ರ ಮಾರ್ಚಿಯಲ್ಲಿ ಹೇಳಿರತಕ್ಕಂತಾದ್ದು.

ಶ್ರೀ ವೈ.ಕೆ. ರಾಮಯ್ಯ : ಈ ಕಾರಣಕ್ಕಾಗಿಯೇ ಯೋಜನಾ ವೆಚ್ಚವನ್ನು ಕಡಿಮೆ ಏಕೆ ಮಾಡಬೇಕಾಗಿತ್ತು ಎಂದು ನನ್ನ ಪ್ರತಿಪಾದನೆ. ಈ ಎಲ್ಲಾ ಕಾರಣಗಳಿಗಾಗಿ ವಿಧಿ ಇಲ್ಲದೇ ಯೋಜನಾ ವೆಚ್ಚವನ್ನು ಕಡಿಮೆ ಮಾಡಿತು. ಈ ಯೋಜನಾ ವೆಚ್ಚವನ್ನು ಕಡಿಮೆ ಮಾಡದೇ ಇರುವುದಕ್ಕೆ ಬೇರೆ ಮತ್ತೊಂದು ಮಾರ್ಗ ಇದೆ. ಆ ಮಾರ್ಗ ಯಾವುದೆಂದರೆ, ಆಡಳಿತದಲ್ಲಿ ಬಿಗಿ ತಂದು, ಸೋರುವಿಕೆಯನ್ನು ಕಡಿಮೆ ಮಾಡಬೇಕು. If he can plug the loopholes by strict administration, he can bring the financial discipline. However, he was not done it.

ಅದನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಒಂದು ಮಾತನ್ನು ಹೇಳಿದರು. ಆ ಮಾತೇನೆಂದರೆ, ಅದನ್ನು ಓದತ್ತೇನೆ. ಅವರ ಕಡೆಯಿಂದ ಅದನ್ನೂ ಕೂಡ ಮಾಡುವುದಕ್ಕಾಗಲಿಲ್ಲ. ಹಣ ದುರುಪಯೋಗದ ಮೇಲ್ತಡೆಗೆ ಉಗ್ರ ಕ್ರಮ 13-3-93ರಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಹೇಳಿದಂಥ ಹೇಳಿಕೆ. ನೀರಾವರಿ ಇಲಾಖೆಯಲ್ಲಿ ಕಂಟ್ರಾಕ್ಟರುಗಳು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದ ಹಣ ದುರುಪಯೋಗದ ಮೇಳ ನಡೆಯುತ್ತಿರುವುದು, ತಡೆಯಲು ಉಗ್ರ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಎಚ್ಚರಿಸಿದ್ದಾರೆ. ಕೆಲಸವನ್ನೇ ಕೈಗೊಳ್ಳದೇ, ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿ. ದುರಸ್ತಿ ಇತ್ಯಾದಿ ಕಾರಣಗಳ ಪಟ್ಟಿ ಮಾಡಿ, ಕೋಟಿಗಟ್ಟಲೆ ಹಣ ಲಪಟಾಯಿಸುವುದು, ನೀರಾವರಿ ಯೋಜನೆಗಳಲ್ಲಿ ನಡೆಯುತ್ತಿದೆ. ಎಂದು ತಿಳಿದು ಬಂದಿದೆ ಎಂದು ಅವರು ಹೇಳಿಲ್ಲ. ನಡೆಯುತ್ತಿದೆ. As a lawyer, I should distinguish it. ಈ ರೀತಿ 1.2 ಕೋಟಿ ದುರುಪಯೋಗ ಪಡಿಸಿಕೊಂಡಿರುವ ದೂರಿನ ಒಂದು ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಂತೆ ನಿನ್ನೆ ತಾನೆ ತಾವು ಆಜ್ಞೆ ಮಾಡಿರುವುದಾಗಿ ಅವರು ತಿಳಿಸಿದರು. ಅಲ್ಲಿಗೇ ನಿಲ್ಲಲಿಲ್ಲ, ಕಾವೇರಿ ಮುಗಿಯುವುದು ಯಾವಾಗ? ನೀರಾವರಿ ಯೋಜನೆಗಳಲ್ಲಿ ಈ ರೀತಿ ಹಣ ಸೋರಿಕೆ ಮುಂದುವರಿದರೆ, ನಮ್ಮ ರಾಜ್ಯದ ಕೃಷ್ಣಾ ಹಾಗೂ ಕಾವೇರಿ ಯೋಜನೆಗಳು ಮುಗಿಯುವುದೆಂದು? ಕೆಲವು ವಿಶಿಷ್ಟ ಹಿತಾಸಕ್ತಿಗಳು ರಾಜ್ಯದ ಹಿತಕ್ಕೆ ಪೂರಕವಾಗಿ ಕೆಲಸ ಮಾಡುತ್ತಿವೆ ಎಂದು ಕೂಡ ಮೊಯ್ಲಿಯವರು ಪ್ರಸ್ತಾಪ ಮಾಡಿದರು.

ಟೆಂಡರ್ ಕಂಟ್ರಾಕ್ಟರರನ್ನು ದರ ಹೆಚ್ಚಿಸುವ ಉದ್ದೇಶಪೂರ್ವಕವಾಗಿ ನಿರ್ಮಾಣ ಕಾರ್ಯವನ್ನು ಒಂದಲ್ಲ ಒಂದು ಕಾರಣದಿಂದ ವಿಳಂಬಗೊಳಿಸಿದರು. ವಿವಾದಗಳನ್ನು ಪಂಚಾಯತಿಗೆ ಒಪ್ಪಿಸುವುದು ಇತ್ಯಾದಿ ತಂತ್ರಗಳಲ್ಲಿ ಕಂಟ್ರಾತಕ್ದಾರರುಗಳೊಡನೆ ಶಾಮೀಲಾಗುವ ಇಂಜನೀಯರುಗಳು ಹಾಗೂ ಅಧಿಕಾರಿಗಳ ವಿರುದ್ಧ ಉಗ್ರ ಕ್ರಮಗಳನ್ನುಕೈಗೊಳ್ಳುವುದಾಗಿ ಎಚ್ಚರಿಸಿದರು. ಅಂದ್ರೆ ನೀರಾವರಿ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ ಅಪವ್ಯಯ ನಡೆಯುತ್ತಾ ಇದೆ, ಹಣದ ದುರುಪಯೋಗ ನಡೆಯುತ್ತಾ ಇದೆ, ಹಣದ ಮೇಳ ನಡೆಯುತ್ತಾ ಇದೆ. ಇದನ್ನು ತಡೆಯುವ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ. ಎನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿ ಒಂದು ವರ್ಷ ಆಯಿತು.

1.2 ಕೋಟಿ ರೂಪಾಯಿಗಳು ಅವ್ಯವಹಾರ ಆಗಿರುವುದು ನನ್ನ ಗಮನಕ್ಕೆ ಬಂದಿದೆ. ಹಣ ದುರುಪಯೋಗದ ಈ ಮೇಳವನ್ನು ತಡೆಯಲು ನಾನು ಉಗ್ರಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಅದು ಏನಾಯಿತು ಸ್ವಾಮಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಏನಾಯಿತು ಹೇಳುತ್ತಾರೇನು ಏನಾಯಿತು ಈ ಮೇಳವನ್ನು

ತಡೆಯುವ ಕ್ರಮ. ಮೊನ್ನೆ ನಮ್ಮ ಯೋಜನಾ ಮಂತ್ರಿಗಳ ಸಮಕ್ಷಮದಲ್ಲಿ ಯಾರಾದರೂ ನೀರಾವರಿ ಇಲಾಖೆಯಲ್ಲಿ ಹಣ ತಿಂದವರು ಸಿಕ್ಕಿದರೆ ನಾಗರಹಾವು ಕಚ್ಚಿದಂತೆ ಕಚ್ಚಿಬಿಡುತ್ತೇನೆ ನಾನು ಎಂದು ಹೇಳಿದರು. ಅದು ಕೈ ತೋರಿಸಿಕೊಂಡು ಹೇಳಿದರು. ನಾಗರಹಾವು ಬುಸುಗುಟ್ಟಿಕೊಂಡು ಕಚ್ಚಿದಂತೆ ಕಚ್ಚಿಬಿಡುತ್ತೇನೆಂದು ಹೇಳಿದರು. ಇವತ್ತಿನವರೆಗೂ ವೀರಪ್ಪಮೊಯ್ಲಿಯವರು ಕಚ್ಚಿ ಸತ್ತಂಥ ನಿದರ್ಶನಗಳು ಒಂದೂ ನಮ್ಮ ಪೇಪರ್ ನಲ್ಲಿ ವರದಿ ಆಗಲಿಲ್ಲ. ಅದೇನೋ ನಾನು ಭೈರೇಗೌಡರು ಇಬ್ಬರೂ ಕುಳಿತುಕೊಂಡು ಸಸ್ಪೆಂಡ್ ಮಾಡಿಸಿದೆವು ಅವರು ಮತ್ತೆ ಈಗ ರೀ ಇನ್‌ಸ್ಟಿಯೇಟ್ ಆದರು ಹಣ ದುರುಪಯೋಗದ ಮೇಳದಲ್ಲಿ ಭಾಗವಹಿಸಿ ಕೋಟ್ಯಾಂತರ ರೂಪಾಯಿಗಳನ್ನು ನುಂಗಿರತಕ್ಕಂಥ ಖದೀಮರನ್ನು ವೀರಪ್ಪಮೊಯ್ಲಿಯವರಂತಹ ನಾಗರಹಾವು ಕಚ್ಚಿ ಸತ್ತಂಥ ನಿದರ್ಶನಗಳು ಪತ್ರಿಕೆಗಳಲ್ಲಿ ಇಲ್ಲಿಯವರೆಗೂ ವರದಿ ಆಗಿಲ್ಲ. ಆ ಮೇಳ ನಡೆದುಕೊಂಡೇ ಹೋಗುತ್ತಿದೆ. ವಿಧಿ ಇಲ್ಲದೆ ಮುಖ್ಯಮಂತ್ರಿಗಳು ಹೊಂದಾಣಿಕೆ ಮಾಡಿಕೊಂಡು ಹೋಗುತ್ತಲೇ ಇದ್ದಾರೆ. ಇಲ್ಲದಿದ್ದರೆ ಕಿತ್ತು ಹೊಗೆಯುತ್ತಿದ್ದರು ಅವರನ್ನು ಅದರ ಫಲವೇ ಈ 12 ಸೂತ್ರಗಳು.

ಚೇರ್ಮನ್ : ಮಾನ್ಯ ರಾಮಯ್ಯನವರೇ, ನಿಮಗೆ ಇನ್ನು ಎಷ್ಟು ಹೊತ್ತು ಬೇಕಾಗಬಹುದು. ಏಕೆಂದರೆ ತಾವು ಈಗಾಗಲೇ ಒಂದು ಗಂಟೆ ಮಾತನಾಡಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ : ಈ ನೀರಾವರಿ ವಿಷಯವನ್ನು ಪ್ರಸ್ತಾಪ ಮಾಡಿ ಮುಗಿಸುತ್ತೇನೆ. ನಾನು ಅನಾವಶ್ಯಕವಾಗಿ ಏನನ್ನು ಮಾತನಾಡುತ್ತಿಲ್ಲ ಎಂದು ಭಾವಿಸಿದ್ದೇನೆ. ಯೋಜನಾ ವೆಚ್ಚವನ್ನು ಸರಿದೂಗಿಸಿಕೊಂಡು ಹೋಗಬೇಕಾಗಿದ್ದರೆ ಈ ಅಪವ್ಯಯವನ್ನು ಕಡಿಮೆ ಮಾಡಿದಿದ್ದರೆ ಸಾಧ್ಯ ಇತ್ತು. ಅಪವ್ಯಯವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ವೀರಪ್ಪಮೊಯ್ಲಿಯವರು ಅಷ್ಟೇ ಅಲ್ಲ, ಅವರ ಸ್ಥಾನದಲ್ಲಿ ಈಗ ಇರುವಂಥಹ ಪರಿಸ್ಥಿತಿಯಲ್ಲಿ ನಾನು ಕುಳಿತುಕೊಂಡಿದ್ದರೂ ಸಾಧ್ಯವಾಗುತ್ತಿರಲಿಲ್ಲ ಅತ್ಯಂತ ಕೆಟ್ಟ ವ್ಯವಸ್ಥೆಯನ್ನು ಸೃಷ್ಟಿ ಮಾಡಿರುವುದಲ್ಲಿ ನಾವು ಎಲ್ಲರೂ ಭಾಗಿಗಳಾಗಿದ್ದೇವೆ. ಇಲ್ಲದಂತಹ ಯಾರೂ ಸರಿ ಮಾಡುವುದಕ್ಕೆ ಆಗದೇ ಇರುವಂತಹ ಯಾರಿಂದಲೂ ಅದನ್ನು ಹಿಂದಕ್ಕೆ ತರಲು ಸಾಧ್ಯ ಇಲ್ಲದಂತಹ ಒಂದು ಕೆಟ್ಟ ವ್ಯವಸ್ಥೆಯನ್ನು ಸೃಷ್ಟಿ ಮಾಡಿ ಅದರಲ್ಲಿ ಸಿಕ್ಕಿಹಾಕಿಕೊಂಡು ನಾವು ನೀವು ಮೊಯ್ಲಿಯವರು ಈ ರಾಜ್ಯದ ಜನ ಎಲ್ಲರೂ ಬಿದ್ದುಬಿಟ್ಟಿದ್ದೇವೆ. ಇದರಿಂದಾಗಿ ಅಪವ್ಯಯದ ಮೂಲಗಳನ್ನು ಹಿಡಿದು ಅದನ್ನು ತಡೆಗಟ್ಟುವಂತಹ ಶಕ್ತಿ ವೀರಪ್ಪಮೊಯ್ಲಿಯವರಿಗಾಗಲಿ ಮತ್ತೊಬ್ಬರಿಗಾಗಲಿ ಆಡಳಿತ ಪಕ್ಷದಲ್ಲಿ ಇವತ್ತು ಉಳಿದುಕೊಂಡಿಲ್ಲ. ಅದರಿಂದ ಈ ಎಲ್ಲಾ ಕಾರಣಗಳಿಗಾಗಿ ಯೋಜನಾ ಗಾತ್ರವನ್ನು ಕಡಿಮೆ ಮಾಡಲೇ ಬೇಕಾಗುತ್ತೇ. ನಾನು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ಇವರ ಹುನ್ನಾರದಿಂದ ಅಂಕಿಅಂಶಗಳ ಮಾಯಾಜಾಲದಲ್ಲಿ 93-94ನೇ ಸಾಲಿನಲ್ಲಿ ಈ ರಾಜ್ಯದ ಜನರನ್ನು ಸ್ವರ್ಗಲೋಕಕ್ಕೆ ಎತ್ತಿಕೊಂಡು ಹೋಗಿ ಆದರ್ಶದ ಬಿಸಿಲುಗುದುರೆಯ ಬೆನ್ನಿನ ಮೇಲಿನಿಂದ ಸಮುದ್ರದ ಮೇಲೋ ಬೆಂಕಿಯ ಮೇಲೋ ನಮ್ಮನ್ನು ಕೆಡವಿ ಹಾಕುತ್ತಾರೆ ಎಂದು ನಾನು ಹೇಳಬೇಕಾಗುತ್ತದೆ. ಇದು ಇವರು ಯೋಜನಾ ಗಾತ್ರದ ವೆಚ್ಚವನ್ನು ಕಡಿಮೆ ಮಾಡಲೇಬೇಕು ಎನ್ನುವುದಕ್ಕೆ ನನ್ನ ಪ್ರತಿಪಾಧನೆ. ಅತಿ ಮುಖ್ಯವಾಗಿ ಈ ರಾಜ್ಯಪಾಲರ ಭಾಷಣ ನಾನು ಮೊದಲೇ ಹೇಳಿದ ಹಾಗೆ ಶ್ರಾದ್ಧ ಮಾಡಿದ ಹಾಗೆ. ಇದರಲ್ಲಿ ಮತ್ತೊಂದು ವಿಷಯ ಪ್ರಸ್ತಾಪವಾಗಬೇಕಾಗಿತ್ತು. ಅದು ಏನೆಂದರೆ ಈ ರಾಜ್ಯದ ನೀರಾವರಿ ಬಗ್ಗೆ. ಏಕೆ ನಾನು ಪ್ರತಿ ವರ್ಷ ನಾವು ನೀರಾವರಿ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲವೇ? ಅಂತಹ ವಿಶೇಷವಾದಂತಹ ಪರಿಸ್ಥಿತಿ ಏನಿತ್ತು. ಅಂತ ನೀವು ಹೇಳುವುದಾರೆ ಕರ್ನಾಟಕದ ಎರಡು ಪ್ರಮುಖ ಕಣ್ಣುಗಳಾದ ಕೃಷ್ಣಾ ಮತ್ತು ಕಾವೇರಿ. ನನ್ನ ದೃಷ್ಟಿಯಿಂದ ಇವು ಎರಡೂ ಕಾವೇರಿ ಮಾತೆಯ ಎರಡು ಕಣ್ಣುಗಳು. ಈ ಮಾತೆಯ ಎರಡು ಕಣ್ಣಿನಿಂದ ಆನಂದ ಭಾಷ್ಪ ಸುರಿದು ಭೂಮಿ ತೋಯ್ದು ಆ ತೋಯ್ದ ಭೂಮಿಯಿಂದ ಸಮೃದ್ಧವಾದಂತಹ ಬೆಳೆ ಬಂದು ರಾಜ್ಯದ ಜನತೆ ಸಂವೃದ್ಧಿಯ ಬದುಕನ್ನು ಬದುಕುತ್ತಾರೆ.

ಎಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ದುರಾದೃಷ್ಟವಶಾತ್ ಈ ಕರ್ನಾಟಕ ತಾಯಿಯ ಎರಡು ಕಣ್ಣುಗಳಿಂದ ಆನಂದದ ಭಾಷ್ಪ ಸುರಿಸುವ ಬದಲು ಕಣ್ಣೀರು ಸುರಿಸುವಂತಹ ವಿಶೇಷ ಪರಿಸ್ಥಿತಿ ಒದಗಿ ಬಂದಿದೆ. ನಿಮ್ಮ ಗಮನಕ್ಕೆ ಇದು ಬರಲಿಲ್ಲವೇನು? ಯಾವ ತಾಯಿಯು ಕಣ್ಣಿನಿಂದ ಆನಂದ ಭಾಷ್ಪಗಳು ಸುರಿದು ಭೂಮಿ ತೋಯ್ದು ಬೆಳೆ ಬರಬೇಕಾಗಿತ್ತೋ ಆ ತಾಯಿಯ ಕಣ್ಣಿನಿಂದ ರಕ್ತದ ಕೋಡಿ ಹರಿಯುತ್ತಾ ಇರುವುದು ನಿಮ್ಮ ಗಮನಕ್ಕೆ ಬರಲಿಲ್ಲವೇನು? ಈ ವಿಷಯಕ್ಕೆ ನೀವು ಕೊಟ್ಟಿರುವಂತಹ ಆದ್ಯತೆ 40 ನೇ ಪ್ಯಾರಾ. ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ನೀವು ಕೊಟ್ಟಿರುವಂತಹ ಆಧ್ಯತೆ 40ನೇ ಪ್ಯಾರಾದಲ್ಲಿ ಅದೂ ಎಷ್ಟು ಎರಡು ಪದ. ಕಟುವಾದ ಪದಗಳನ್ನು ಉಪಯೋಗಿಸುವಷ್ಟು ಶಕ್ತಿ ಕೂಡ ಇವತ್ತು ನಮಗೆ ಉಳಿದಿಲ್ಲ. ನೀವು ಆದ್ಯತೆ ಕೊಟ್ಟಿರುವುದು

55ನೇ ಪ್ಯಾರದಲ್ಲಿ ಅದೂ ಬೇಕೋ ಬೇಡವೋ. ಕಾಟಾಚಾರಕ್ಕೆ ಅದೂ ಮರೆತುಬಿಟ್ಟಿದ್ದರು ಎಂದು ಕಾಣುತ್ತದೆ ಕೊನೆಗೆ ಯಾರೋ ಹೇಳಿರಬೇಕು ಕೃಷ್ಣಾ ಮತ್ತು ಕಾವೇರಿ ಬಗ್ಗೆ ಬಿಟ್ಟುಬಿಟ್ಟಿದ್ದೀರಲ್ಲಾ, ನಾಲ್ಕು ಮಾತು ಸೇರಿಸಿ ಎಂದು. ಅದಕ್ಕೋಸ್ಕರ ಹೇಳಿರಬೇಕು. ನಾಲ್ಕು ಲೈನು ಇಲ್ಲ. ಸನ್ಮಾನ್ಯ ಅಧ್ಯಕ್ಷಣೀಯವರೇ,ಇದನ್ನು ಮಾತ್ರ ಓದುತ್ತೇನೆ. "ನಾವು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಕಾರ್ಯವನ್ನು ಮುಂದುವರಿಸುತ್ತೇವೆ. ರಾಜ್ಯದ ನೀರಿನ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಅದನ್ನು ಖಾತರಿಪಡಿಸಿಕೊಳ್ಳುವುದಕ್ಕೆ ಕ್ರಿ.ಶ. 2000 ಇಸವಿ ಒಳಗೆ ಪೂರ್ಣಗೊಳಿಸುವ ನಮ್ಮ ನಿರ್ಧಾರ ಅಚಲವಾಗಿದೆ. ಅಂತೆಯೇ ಕಾವೇರಿ ನೀರಿನ ನಮ್ಮ ನ್ಯಾಯಯುತವಾದ ಪಾಲು ದೊರಕಿಸುವಂತೆ ಖಚಿತಪಡಿಸಿಕೊಳ್ಳುವುದು." ಯಾವ ವಿಷಯ ಅಗ್ರಸ್ಥಾನ ಪಡೆಯಬೇಕಾಗಿತ್ತೋ....

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ರಾಮಯ್ಯನವರೇ, ಅದಕ್ಕೆ ಆದ್ಯತೆ ಕೊಟ್ಟಿದೆ. ಏತಕ್ಕೆ ಹೇಳಿದ್ದೇವೆಂದರೆ ಆ ವಿಚಾರ ಈಗ ಟ್ರಿಬ್ಯುನಲ್ ಮುಂದೆ ಇರುವುದರಿಂದ ಹೆಚ್ಚು ಇಲ್ಲಿ ಪ್ರಸ್ತಾವನೇ ಮಾಡುತ್ತಾ ಇರುವುದರಿಂದ ನಮಗೆ ಎಲ್ಲಿ ತೊಂದರೆಯಾಗುತ್ತದೆಯೋ ಎನ್ನುವ ಒಂದೇ ಒಂದು ವಿಶೇಷವಾದ ಸಂದರ್ಭದಲ್ಲಿ ಮಾಡಿದ್ದೇವೆಯೇ ವಿನಹಃ ಬೇರೆ ಯಾವ ತಪ್ಪು ಕಲ್ಪನೆ ಮಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ : ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು. ಕುಣಿಯಲಾರದ ಸೂಳೆಗೆ ನೆಲ ಡೊಂಕು. ಯಾವ ವಿಷಯಕ್ಕೆ ಅಗ್ರಸ್ಥಾನ ದೊರೆಯಬೇಕಾಗಿತ್ತೋ ಯಾವ ವಿಷಯಕ್ಕೆ ಆದ್ಯತೆ ದೊರೆಯಬೇಕಾಗಿತ್ತೋ ಅಂತಹ ವಿಶೇಷವಾದ ವ್ಯವಸ್ಥೆಗೆ ಆ ವಿಶೇಷವಾದ ವಿಷಯಕ್ಕೆ 55ನೇ ಪ್ಯಾರಾದಲ್ಲಿ ಅದೂ ಬೇಕೋ ಬೇಡವೋ ಎನ್ನುವ ಪರಿಸ್ಥಿತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ಹೇಳಿದ್ದು ಈ ರಾಜ್ಯಪಾಲರ ಭಾಷಣದಲ್ಲಿ ಎಲ್ಲವೂ ಇದೆ ಯಾವುದು ಬೇಕೋ ಅದು ಇಲ್ಲ. ಎರಡೂ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ವಿಶೇಷವಾದ ಪರಿಸ್ಥಿತಿ ಇದೆ ಎಂದು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿದ್ದೇನೆ. ಕೃಷ್ಣಾ ನದಿಯ ನೀರಿನ ಪಾಲನ್ನು ಬಳಸಿಕೊಳ್ಳುವಂತಹ ಕೆಲಸವನ್ನು ನಾವು ಎರಡು ಸಾವಿರ ಇಸವಿ ಒಳಗೆ ಮಾಡಲೇಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಷಯ ಕುರಿತು ಪ್ರಸ್ತಾಪ ಮಾಡುವುದಕ್ಕೆ ವಿರೋಧಪಕ್ಷದ ನಾಯಕರ ಸಭೆ ಕರೆದರು. ಅಲ್ಲಿ ಒಂದು ನೇರವಾದ ಪ್ರಶ್ನೆಯನ್ನು ಇಲ್ಲಿ ಯಾರಾದರೂ ಕಾನೂನು ಪಂಡಿತರು ಇರಬಹುದು. ಚೀಟಿ ಬರೆದು ಕಳುಹಿಸಿ ಏನು ಹೇಳುತ್ತಾರೋ ಕೇಳೋಣ. ಎರಡು ಸಾವಿರ ಇಸವಿ ಒಳಗೆ ಕೃಷ್ಣಾ ನದಿ ನೀರಿನ ಪಾಲನ್ನು ನಾವು ಉಪಯೋಗಿಸಿಕೊಳ್ಳದಿದ್ದರೆ ಏನಾಗುತ್ತದೆ? What are the consequences if you do not utilise the water as per Bachawat

Award before 2000 AD? This is a simple pertinent question I pose to the Hon.Chief Minister.

ಮುಖ್ಯಮಂತ್ರಿಗಳು ಹೇಳುತ್ತಾರೆ ಏನೂ ಆಗುವುದಿಲ್ಲ ಎಂದು. ನಾವು ರಿವ್ಯೂ ಮಾಡಬಹುದು ರಿವೈನ್ ಮಾಡಬಹುದು ಏನೇನೋ ಪದಗಳನ್ನು ಹೇಳಿದರು. ಅದು ನನಗೆ ಅರ್ಥವಾಗಲೇ ಇಲ್ಲ. ದುರಾದೃಷ್ಟವಶಾತ್ ಈ ರಾಜ್ಯದ ಸ್ವಲ್ಪ ನಿಯತ್ತಿನ ಮನುಷ್ಯರು ಅಡ್ವೋಕೇಟ್ ಜನರಲ್ ಆದಂತಹ ಬಿ.ವಿ. ಆಚಾರ್ಯರವರು ಅಲ್ಲಿ ಕುಳಿತುಕೊಂಡಿದ್ದರು. I turned the table and asked him the same question, "If the Karnataka do not make use of water before 2000 AD what will happen'.

ಅವರು ಅತ್ಯಂತ ಪ್ರಾಮಾಣಿಕವಾದ ಉತ್ತರ ಕೊಟ್ಟರು. ಸಹಜವಾಗಿ ಕೂಡ ಇತ್ತು. ನಾನು ಮೆಚ್ಚಿಕೊಂಡೆ. ಕರ್ನಾಟಕ ತನ್ನಪಾಲಿನ ಹಕ್ಕನ್ನು ಕಳೆದುಕೊಳ್ಳುತ್ತದೆ. The Karnataka will lose its right to utlise the water. Its right will be extinguished.

ಏನು ಮಾಡುತ್ತೀರಿ? 4 ಜಿಲ್ಲೆಯ ಜನರನ್ನು ಯಾವ ಕೂಪಕ್ಕೆ ತೆಗೆದುಕೊಂಡು ಹೋಗಿ ತಳ್ಳುತ್ತೀರಾ? 2 ಸಾವಿರ ಇಸವಿ ಒಳಗೆ ಹಣ ಖರ್ಚು ಮಾಡಿ ನಮ್ಮ ಪಾಲಿನ ನೀರನ್ನು ಭೂಮಿಗೆ ತಿರುಗಿಸುವಂತಹ ಪುಣ್ಯದ ಕೆಲಸವನ್ನು ನೀವು ಮಾಡದೇ ಇದ್ದರೆ ಎಂತಹ ಪಾಪದ ಕೂಪಕ್ಕೆ ನಾವೆಲ್ಲಾ ಹೋಗುತ್ತೇವೆ. ಈ ಜನಾಂಗದ ಜನರು. 2 ಸಾವಿರ ವರ್ಷದ ಒಳಗಾಗಿ ನಾವು ಉಪಯೋಗಿಸಿಕೊಳ್ಳಬೇಕಾದಂಥ ನೀರನ್ನು ಕುಡಿಯುವ ನೀರನ್ನು ತೆಗೆದುಕೊಂಡು ಹೋಗುವ ನೆಪದಲ್ಲಿ ತೆಲುಗು ಗಂಗಾ ಯೋಜನೆಯಲ್ಲಿ 15 ಸಾವಿರ ಕ್ಯೂಸೆಕ್ಸ್ ಕಾಲುವೆಯನ್ನು 50 ಸಾವಿರ ಕ್ಯೂಸೆಕ್ಸ್ ಕಾಲುವೆಯಾಗಿ ಮಾಡಿಕೊಂಡು ಅವರು ತೆಗೆದುಕೊಂಡು ಹೋಗುತ್ತಿದ್ದಾರೆ.

ತೆಲುಗು ಗಂಗಾ ಯೋಜನೆ ಇರುವುದು ಕೇವಲ 15 ಸಾವಿರ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗಲು ಮಾತ್ರ. 50 ಸಾವಿರ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗುವಂಥ ಕೆಲಸವನ್ನು ಅವರು ಮಾಡುತ್ತಾ ಇದ್ದಾರೆ. ಕರ್ನಾಟಕವನ್ನು ಆಳಿದಂಥ ನಾವು, ಅಂದರೆ ನನ್ನನ್ನೂ ಸಹ ಸೇರಿಸಿಕೊಂಡು ಹೇಳುತ್ತಾ ಇದ್ದೇನೆ, 2000 ನೇ ಇಸವಿಯಲ್ಲಿ ಕೃಷ್ಣಾ ನದಿಯಿಂದ ಬರತಕ್ಕಂಥ ನೀರಿನ ಪಾಲನ್ನು ಉಪಯೋಗಿಸಿಕೊಳ್ಳಲು ಆಗದೇ ಇರುವಂಥ ಪರಿಸ್ಥಿತಿಯಲ್ಲಿ ನಾವುಗಳು ಇದ್ದೇವೆ. ಆದಕಾರಣ ಇದಕ್ಕೆ ವಿಶೇಷವಾದಂಥ ಪರಿಸ್ಥಿತಿ ಎಂದು ನಾನು ಕರೆದಿದ್ದೇನೆ. ಇದರ ಬಗ್ಗೆ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಆದ್ಯತೆಯು ಇಲ್ಲ, ಪ್ರಸ್ತಾವನೆಯೂ ಇಲ್ಲ, ಪ್ರಾಮುಖ್ಯತೆಯೂ ಇಲ್ಲ. ಇನ್ನು ಕಾವೇರಿಯ ಕಥೆ. ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ನೀಡಿರುವ ಮಧ್ಯಂತರ ತೀರ್ಪು ಏನಾದರೂ ಖಾಯಂ ತೀರ್ಪು ಆದರೆ 205 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟುಕೊಡಲೇ ಬೇಕೆನ್ನುವ ತೀರ್ಪು ಒಂದು ವೇಳೆ ಖಾಯಂ ತೀರ್ಪು ಆದರೆ ಬಹುಶಃ ಮಂಜುನಾಥ್‌ರವರು, ನಾವು, ನೀವು, ಯಾರೂ ಕ್ಷೇತ್ರಗಳಲ್ಲಿ ಓಡಾಡಲು ಸಾಧ್ಯವಾಗುವುದಿಲ್ಲ. ಕಾವೇರಿ ಕೊಳ್ಳದಲ್ಲಿರತಕ್ಕಂಥ ನಮ್ಮಂಥ ಶಾಸಕರುಗಳಿಗೆಲ್ಲಾ ಕಲ್ಲು ಹೊಡೆಯುತ್ತಾರೆ. ಶಾಶ್ವತವಾಗಿ 205 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟುಕೊಡುವುದಾದರೆ, ನಾವು ನೀವುಗಳೆಲ್ಲರೂ ಶ್ರಮಪಟ್ಟು ಮಾಡುತ್ತಿರುವಂಥ ಕಾಲುವೆಗಳನ್ನು ಮುಚ್ಚಬೇಕಾಗುತ್ತದೆ. ಬಾಗೂರು ನವಿಲೆ ಟನಲ್ಲು ಬ್ಲಾಸ್ಟ್ ಮಾಡಬೇಕಾಗುತ್ತದೆ.

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯಕ್ಕೆ ಕಾವೇರಿನದಿಯಿಂದ ಬರತಕ್ಕಂಥ ನೀರು ನಮಗೆ ಬರುವ ಹಾಗೆ, ನಮಗೆ ಅನ್ಯಾಯವಾಗದ ಹಾಗೆ ನಾವು ನೋಡಿಕೊಳ್ಳುತ್ತೇವೆ. ಟ್ರಿಬ್ಯುನಲ್‌ನ್ನು ನಾವು ಒಪ್ಪಿಲ್ಲ ಎಂದು ಮಾನ್ಯ

ಮುಖ್ಯಮಂತ್ರಿಯವರು ಹೇಳಿದ್ದಾರೆ. ಹಾಗೆಯೇ ಅದಕ್ಕಾಗಿ ಹೆಚ್ಚಿನ ಹಣವನ್ನು ಈಗಾಗಲೇ ತಮಗೆ ವೇದ್ಯವಾಗಿರುವ ಹಾಗೆ ಹಿಂದೆ ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಾ ಇದ್ದರು, ಈ ವರ್ಷಗಳಲ್ಲಿ ಎಷ್ಟು ತ್ವರಿತವಾಗಿ ಕೆಲಸಗಳು ಆಗುತ್ತಿವೆ ಎಂಬುದು ಕೂಡ ತಮಗೆ ಗೊತ್ತಿದೆ. ಹೀಗೆ ಗೊತ್ತಿದ್ದೂ ಕೂಡ ತಾವುಗಳು ಹೀಗೆ ವಾದವನ್ನು ಮಾಡುತ್ತಿದ್ದೀರಿ. ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕು, ನಮ್ಮ ರೈತರಿಗೆ ನೀರು ಕೊಡಬೇಕೆನ್ನುವ ಕಳಕಳಿ ನಮ್ಮ ಸರಕಾರಕ್ಕೆ ಇದೆ. ನಮ್ಮ ಸರಕಾರವು ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತಾ ಇದೆ. ತಾವುಗಳು ಹೇಳಿರತಕ್ಕಂಥಾದ್ದಕ್ಕೆ ಬೇಜಾರು ಮಾಡುವಂತಾದ್ದಿಲ್ಲ. ನಿಮಗೆ ಎಷ್ಟು ಉತ್ಸಾಹ ಇದೆಯೋ ಅಷ್ಟೇ ಉತ್ಸಾಹದಲ್ಲಿ ಸರಕಾರವೂ ಕೂಡ ಕೆಲಸ ಮಾಡುತ್ತಾ ಇದೆ.

ಶ್ರೀ ವೈ.ಕೆ. ರಾಮಯ್ಯ : ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳಿಗಾಗಿ ಈ ಸರಕಾರ ಮಾಡಿರುವಂಥ ಎಲ್ಲಾ ಒಳ್ಳೆಯ ಕೆಲಸಗಳಿಗೆ ನಾನು ವಿನಯಪೂರ್ವಕವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಈಗ ಸರಕಾರದವರು ಮಾಡದೇ ಇರುವಂಥ ಕೆಲಸಗಳ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ನೀವು ಹಣ ಕೊಟ್ಟಿರುವುದಕ್ಕೆ ನಿಮಗೆ ಅಭಿನಂದನೆಗಳು. ನೀವು ಶ್ರಮಪಟ್ಟಿರುವುದಕ್ಕೆ ನಿಮಗೆ ಅಭಿನಂದನೆಗಳು. ಆದರೆ ಯಾವ ಪ್ರಾಶಸ್ತ್ಯವು ಅದಕ್ಕೆ ದೊರೆಯಬೇಕಾಗಿತ್ತೋ ಆ ಪ್ರಾಶಸ್ತ್ಯ ಅದಕ್ಕೆ ದೊರೆಯಲಿಲ್ಲ. ಯಾವ ಆದ್ಯತೆಯು ಅದಕ್ಕೆ ದೊರೆಯಬೇಕಾಗಿತ್ತೋ ಆ ಆದ್ಯತೆಯು ಅದಕ್ಕೆ ದೊರೆಯಲಿಲ್ಲ. ಈ ಆಡಳಿತ ಪಕ್ಷದ ಕಿತ್ತಾಟದಿಂದಾಗಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಅಪಚಾರವೆಸಗಿದ್ದಾರೆ. ಇದು ಕಾಕತಾಳಿಯವೇ ಅಥವಾ ರೈತರ ದುರಾದೃಷ್ಟವೇ ಎಂಬುದು ನಮಗೆ ಗೊತ್ತಾಗುವುದಿಲ್ಲ. ಮಾನ್ಯ ದೇವರಾಜ್ ಅರಸರ ಕಾಲದಲ್ಲಿ ನೀರಾವರಿ ಮಂತ್ರಿಗಳು ಮಾನ್ಯ ನಂಜೇಗೌಡರು. ಅವರೂ ಭಿನ್ನಮತೀಯರಾಗಿದ್ದರು. ಇಂತಹ ಭಿನ್ನಮತದ ಹಣೇಬರಹವು ನಮಗೆ ಬರಬೇಕೇ? ಇನ್ನಾವುದೇ ಕ್ಷೇತ್ರಕ್ಕೆ ಬೇಡವೇ? ನಮ್ಮ ಸರಕಾರದ ಆಡಳಿತ ನಡೆಯುವಾಗಲೂ ಕೂಡ ಭಿನ್ನಮತೀಯ ನಾಯಕರು ನೀರಾವರಿ ಸಚಿವರು ದೇವೇಗೌಡರೇ ಆದರು. ಇದೆಲ್ಲಾ ಮುಗಿದು ಒಳ್ಳೆಯ ಕಾಲ ಬರುತ್ತದೆ ಎಂದು ಎದುರು ನೋಡುವಾಗ ನಿಮ್ಮ ಸರಕಾರ ಬಂತು. ಅದರಲ್ಲಿಯೂ ಭಿನ್ನಮತೀಯ ನಾಯಕರೇ ನೀರಾವರಿ ಸಚಿವರಾದರು.

ಶ್ರೀ ಟಿ.ಎಂ.ಮಂಜುನಾಥ್ : ನಮ್ಮಲ್ಲಿ ಭಿನ್ನಮತ ಇದ್ದುದು ಎಲ್ಲಾ ಸರಿಯಾಗಿ ಒಮ್ಮತ ಬಂದಿದೆ. ಅದರ ಬಗ್ಗೆ ನಿಮಗೆ ಸಂಕೋಚ ಬೇಕಾಗಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಹೀಗೆ ಎಲ್ಲಾ ಕಾಲಕ್ಕೂ ಎಲ್ಲಾ ಸರಕಾರದಲ್ಲಿಯೂ ನಮ್ಮ ನೀರಾವರಿ ಮಂತ್ರಿಗಳೇ ಭಿನ್ನಮತೀಯ ನಾಯಕರುಗಳಾದುದರಿಂದ ಮುಖ್ಯಮಂತ್ರಿಗಳ ಅಸಹಕಾರ ನೀರಾವರಿ ಯೋಜನೆಗಳಿಗೆ ಹೊಡೆತ ಬಿತ್ತು. ಇದನ್ನು ನಾನು ತಮಾಷೆಯಾಗಿ, ಲಘುವಾಗಿ ಹೇಳುತ್ತಾ ಇಲ್ಲ. ಚರಿತ್ರೆಯಲ್ಲಿ ನಡೆದಿರುವ ಘಟನೆಗಳು, ಬಂದಿರುವಂಥ ಸಂದರ್ಭ ಸನ್ನಿವೇಶಗಳು, ನಮಗೆ ಹೇಗೆ ಪ್ರತಿಕೂಲವಾಗಿವೆ ಎಂಬುದನ್ನು ನೋಡಬೇಕಾಗಿದೆ. ತಮಿಳುನಾಡಿನ ಜಯಲಲಿತಾರವರಷ್ಟೇ ನಮಗೆ ಪ್ರತಿಕೂಲವಾಗಿಲ್ಲ, ಸರಕಾರ, ಸನ್ನಿವೇಶ, ಸಂದರ್ಭಗಳು, ಹೀಗೆ ಎಲ್ಲವೂ ನಮಗೆ ಪ್ರತಿಕೂಲವಾಗಿದೆ. ನಮ್ಮ ಹಾಲಿ ನೀರಾವರಿ ಮಂತ್ರಿಗಳು ಆಯವ್ಯಯದ ಭಾಷಣ ಮಾಡುವಾಗ ಒಂದು ಮಾತನ್ನು ಹೇಳಿದರು. ಎಲ್.ಓ.ಸಿ. ಎನ್ನುವಂಥ ಪದ್ಧತಿ ಇದೆಯಲ್ಲಾ, ಇದು ಆಯವ್ಯಯಕ್ಕೆ ಬಗೆದ ಅಪಚಾರ. There is no sanctity for the Budget unless the system of LOC is removed.

ನೀರಾವರಿ ಮಂತ್ರಿಗಳು ಇಲ್ಲಿ ನಿಂತು ಹೇಳಿದ್ದರು. ಇದೇ ಸದನದಲ್ಲಿ ಹೇಳಿದ್ದರು. Unless the LOC system is removed, there is no sanctity for the Budget ಅಂದರೆ ಈ ಹಣದ ಭರವಸೆಯನ್ನು ಕೊಡುವಂಥ L.O.C. ಪತ್ರವನ್ನು ಕೊಡುವಂಥ ವ್ಯವಸ್ಥೆ ಇದೆಯಲ್ಲಾ ಇದು ಆಯವ್ಯಯಕ್ಕೆ ಬಗೆದಂಥ ಅಪಚಾರ. ಆದರೆ ಆ

ವ್ಯವಸ್ಥೆಯನ್ನು ಏತಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಂಡಿದ್ದಾರೆ ಎಂಬುದು ಮಾನ್ಯ ಎಸ್.ಎಂ. ಕೃಷ್ಣರವರಿಗೆ ಈಗ ಗೊತ್ತಾಗಿರಬೇಕು. ನಾನು ಇಲ್ಲಿ ಅವಾಸ್ತವಿಕವಾದುದು ಯಾವುದನ್ನೂ ಹೇಳುತ್ತಾ ಇಲ್ಲ. ಇರುವುದನ್ನು ಮಾತ್ರ ಹೇಳುತ್ತಾ ಇದ್ದೇನೆ. ಅದರ ಅನುಭವದ ಫಲವಾಗಿಯೇ ಮಾನ್ಯ ನೀರಾವರಿ ಮಂತ್ರಿಗಳು ಈ ರಾಜ್ಯದ ಜನತೆಗೆ ಒಂದು ಹೇಳಿಕೆಯನ್ನು ಕೊಟ್ಟರು. ಈ ಅನುಭವದ ಹಿನ್ನಲೆಯಲ್ಲಿ, ಅದು ಅವರಿಗೆ ತುಂಬಾ ಕೆಟ್ಟ ಅನುಭವ ಎಂದು ಕಾಣುತ್ತದೆ ಪಾಪ.... LOC system.

ಒಂದು ಅಪಚಾರ ಎಂದು ಹೇಳಿದಂಥ ನೀರಾವರಿ ಸಚಿವರಿಗೆ ಅದರ ಅರಿವು ಆದುದು ಯಾವಾಗ ಅಂದರೆ, ಸೆಪ್ಟೆಂಬರ್ 17ನೇ ತಾರೀಖಿನಂದು ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. "ಕಾಮಗಾರಿ ಗುತ್ತಿಗೆದಾರರಿಗೆ ಕೊಡತಕ್ಕಂಥ ಬಾಕಿ ಹಣದ ಮೊತ್ತ ಆತಂಕ ಪಡುವ ರೀತಿಯಲ್ಲಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹಣಕಾಸಿನ ಖಾತೆಯನ್ನು ವಹಿಸಿಕೊಂಡಿರುವ ಮುಖ್ಯಮಂತ್ರಿ ವೀರಪ್ಪಮೊಯಿಲಿಯವರ ಜೊತೆ ಆದಷ್ಟು ಬೇಗ ಮಾತುಕತೆ ನಡೆಸಲು ಅವಕಾಶ ಕಲ್ಪಿಸಿಕೊಡುವುದಾಗಿ ಉಪಮುಖ್ಯಮಂತ್ರಿಯವರು ತಿಳಿಸಿದರು. ಬಾಕಿ ಹಣ ಉಳಿಸಿಕೊಂಡಿರುವುದುರ ಬಗ್ಗೆ ಮೇಲಿಂದ ಮೇಲೆ ಪ್ರಶ್ನೆಗಳು ಬಂದಾಗ ಅವರು, ಅರ್ಥ ಸಚಿವರ ಬಾಗಿಲನ್ನು ತಟ್ಟಲೆ? ಅದನ್ನು ನೀವು ನಿರೀಕ್ಷಿಸುವುದು ಸರಿಯಲ್ಲ. ನಾನು ಸಚಿವ ಸಂಪುಟದ ಸಭೆಗೆ ಹೋಗಿ ಕಿವಿಯಲ್ಲಿ ಮಾತನಾಡಲೇ ಅಥವಾ ಬಂಡಾಯ ಏಳಲೇ?" -ಬಂಡಾಯ ಎದ್ದರು. ಅಷ್ಟೇ ಅಲ್ಲ. "ಬಾಕಿ ಹಣ 83 ಕೋಟಿ ರೂಪಾಯಿಗಳು ಉಳಿದಿದ್ದು, ಈಗ ಅದು 100ಕೋಟಿ ರೂಪಾಯಿಗಳಿಗೆ ಹೆಚ್ಚಾಗಿದೆ." - ಅಂದರೆ ಅವರು ಸೆಪ್ಟೆಂಬರ್ ತಿಂಗಳಲ್ಲಿ ಇದನ್ನು ಹೇಳಿದರು. ಈ ರಾಜ್ಯ ಸರಕಾರ ಬಿಡುಗಡೆ ಮಾಡಬೇಕಾಗಿದ್ದಂಥ ಹಣ 802 ಕೋಟಿಗಳು. ಅದರಲ್ಲಿ ಬಿಡುಗಡೆಯಾಗಿರುವ ಹಣ ಕೇವಲ 200 ಕೋಟಿಗಳು. ಇದು ನಾನು ಹೇಳಿದ ಹೇಳಿಕೆಯಲ್ಲ, ಅಥವಾ ನಮ್ಮ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಉಪನಾಯಕರಾದಂಥ ಸಿಂಧ್ಯರವರು ಹೇಳಿದಂಥಾದ್ದು ಕೂಡ ಅಲ್ಲ. ಈ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ, ಸರಕಾರದ ಎರಡನೇ ಸ್ಥಾನದಲ್ಲಿ ಕುಳಿತಿರುವ ನೀರಾವರಿ ಸಚಿವರು ಹೇಳಿರುವ ಮಾತು. 800 ಕೋಟಿ ರೂಪಾಯಿ ಬಿಡುಗಡೆಯಾಗಲಿರುವ ಕಡೆಯಲ್ಲಿ ಕೇವಲ 200ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆಯಾಗಿವೆ ಎಂಬ ಈ ಮಾತನ್ನು ಹೇಳುವಾಗ, ಈ ರಾಜ್ಯದ ಜನತೆಗೆ ಮತ್ತು ಈ ಸದನದ ಸದಸ್ಯರಿಗೆ ಅರಿವು ಆಗುತ್ತದೆ. ಎಷ್ಟು ಆದ್ಯತೆಯನ್ನು ನೀವು ಕೊಟ್ಟಿದ್ದೀರಿ ಎಂದು ಗೊತ್ತಾಗುತ್ತದೆ. Water will find its own level but men will find its highest level at a different time.

ಆದರೆ ಮಾನ್ಯ ಕೃಷ್ಣರವರು ನಿನ್ನೆ ವಿಧಾನಪರಿಷತ್ತಿನಲ್ಲಿ ಹೇಳುತ್ತಾರೆ ಏನು..? ಅವರು ಇಲ್ಲಿ ಈಗ ಇಲ್ಲ. ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು.ಹಣದ ಕೊರತೆಯಿಂದಾಗಿ ರಾಜ್ಯದ ನೀರಾವರಿ ಯೋಜನೆಗಳು ಕುಂಠಿತವಾಗಿವೆ. 140 ಕೋಟಿ ರೂಪಾಯಿಗಳ ಬಿಲ್ಲು ಇವೊತ್ತಿಗೂ ಕೂಡ ಪೆಂಡಿಂಗ್ ಇದೆ. ನಾನು ಪುನಃ ಈ ಸರಕಾರಕ್ಕೆ ಹೇಳುತ್ತಾ ಇದ್ದೇನೆ. ಯಾವುದಾದರೂ ಕಾಲದಲ್ಲಿ ಸನ್ಮಾನ್ಯ ಹುಚ್ಚಮಾಸ್ತಿಗೌಡರು ಬಹಳ ವರ್ಷಗಳಿಂದ ಸರಕಾರವನ್ನು ನೋಡಿರುವಂಥವರು ಸರಕಾರದಲ್ಲಿ ಇರುವಂಥವರು. ನೀವುಗಳು ಹಿರಿಯರು. ಹಾಗೆಯೇ ಮಾನ್ಯ ರಾಮಸ್ವಾಮಿಯವರು ಕೂಡ ಇದ್ದಾರೆ. ಅವರೂ ಹೇಳಲಿ. ನಿಮ್ಮ ರಾಜಕೀಯ ಜೀವನದಲ್ಲಿ ಯಾವುದಾದರೂ ಸಂದರ್ಭದಲ್ಲಿ ನೀರಾವರಿಗಾಗಿ 140 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ ಇದ್ದಂಥ ಸರಕಾರ ಸಂದರ್ಭ, ಸನ್ನಿವೇಶ, ನಿಮ್ಮ ಗಮನದಲ್ಲಿದೆಯೇ ಎಂಬುದನ್ನು ಹೇಳಿ.

140 ಕೋಟಿ ರೂಪಾಯಿ ನೀರಾವರಿ ಕೆಲಸ. ಮಾಡಿದವರಿಗೆ ಕೊಡಬೇಕಾದಂತಹ ಬಿಲ್ ಪೆಂಡಿಂಗ್ ಇದ್ದುದು ರಾಜಕೀಯ ಜೀವನದ ಇತಿಹಾಸದಲ್ಲಿ ಯಾವತ್ತಾದರೂ ಇತ್ತೇ?

ಡಾ॥ ಎನ್.ಬಿ. ನಂಜಪ್ಪ : ರಾಮಯ್ಯನವರೇ, ನಿಮ್ಮ ಪೀರಿಯಡ್ನಲ್ಲಿ 1050 ಕೋಟಿ ರೂಪಾಯಿ ಇತ್ತು.

Sri. Y.K. Ramaiah : If that is so, I will not enter this House. I don't enter this House. I swear. ಈ ರಾಜ್ಯದ ಚರಿತ್ರೆಯಲ್ಲಿ ನೀರಾವರಿ ಯೋಜನೆಗಳ ಕೆಲಸಕ್ಕಾಗಿ ಉಳಿದಿರುವ ಬಿಲ್ 140 ಕೋಟಿ ರೂಪಾಯಿ ಇರುವ ಯಾವುದೇ ಮತ್ತೊಂದು ಸಂದರ್ಭ ಇರುವುದಾದರೆ, ನನ್ನ ಗಮನಕ್ಕೆ ತರುವುದಾದರೆ ನಾನು ಈ ಸದನದಲ್ಲಿ ಜೀವನದಲ್ಲಿ ಮತ್ತೊಂದು ಸಾರಿ ಹೆಜ್ಜೆ ಇಡುವುದಿಲ್ಲ. ಇದು ನಿಮ್ಮ ಆದ್ಯತೆಯೇ ನೀರಾವರಿಗೆ, ಇದು ನಿಮ್ಮಪ್ರಾಶಸ್ತ್ಯವೇ ನೀರಾವರಿಗೆ ಹೇಳಿ. ನೀವು ಹೇಳುವುದೆಲ್ಲಾ ಹೇಳಿ ಬಿಡಿ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ಕಾಗೋಡುರವರೇ, ಈಗ ಒಂದೂವರೆ ಗಂಟೆ ಆಯಿತು.

ಶ್ರೀ ಕಾಗೋಡು ತಿಮ್ಮಪ್ಪ : ರಾಮಯ್ಯನವರ ಭಾಷಣ ಕೇಳುವುದಕ್ಕೆ ನಾವೆಲ್ಲಾ ಏಕೆ ಇಷ್ಟು ಕುತೂಹಲದಿಂದ ಇರುವುದೆಂದರೆ ಅವರಿಗೆ ಅನುಭವ ಇದೆ. ನೀರಾವರಿ ಬಗ್ಗೆ ಅವರಿಗೆ ಇರುವಷ್ಟು ಅನುಭವ ನಮಗೆ ಇಲ್ಲ. ಆದ್ದರಿಂದ ಅವರ ಕಾಲದಲ್ಲಿ...

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇನ್ನು ಹತ್ತು ಬಿಲ್ಗಳು ಇವೆ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿ ನಿರ್ಣಯ ಆಗಿದೆ. ನಮ್ಮ ಸ್ನೇಹಿತರನ್ನು ಕೋರಿದ್ದೇವೆ. ಐದು ಗಂಟೆಯ ಮೇಲೆ ವಿಧೇಯಕಗಳನ್ನು ತೆಗೆದುಕೊಳ್ಳಬೇಕೆಂದು. ಆದ್ದರಿಂದ ದಯವಿಟ್ಟು ಇವತ್ತು ವಿಧೇಯಕಗಳನ್ನು ತೆಗೆದುಕೊಳ್ಳುವುದಕ್ಕೆ ತಮ್ಮ ಅಪ್ಪಣೆ ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾಳೆ ತೆಗೆದುಕೊಳ್ಳೋಣ. ಮಾನ್ಯ ಚಂದ್ರೇಗೌಡರು ಬಂದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪ್ರತಿದಿವಸ ಇದೇ ರೀತಿ ಆಗುತ್ತಿದೆ; ಬಿಲ್ಲುಗಳನ್ನು ಮೇಲ್ಮನೆಗೆ ಕಳುಹಿಸುವ ಹಾಗೆ ಇಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರಿಗೆ ಒಂದು ಸಲಹೆ ಕೊಡುತ್ತೇನೆ. ತಾವು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು. ರಾಜ್ಯಪಾಲರ ಭಾಷಣ ಮಾಡಲೇಬೇಕು ಎಂದು ಯಾವ ನಿಯಮವೂ ಇಲ್ಲ; ಸಂವಿಧಾನದಲ್ಲಿ. ಎಲ್ಲಿದೆ? ನಾವು ವೃಥಾ ಕಾಲಹರಣ ಮಾಡುತ್ತಿದ್ದೇವೆ. ರಾಜ್ಯಪಾಲರ ಭಾಷಣ ಮಾಡಿಸುವುದು, ಹತ್ತು ದಿವಸ ಅದರ ಮೇಲೆ ಮಾತನಾಡುವುದು ಮತ್ತು ಬಜೆಟ್ನಲ್ಲಿ ಅದೇ ತವಡು ಕುಟ್ಟುವುದು. ಹೌದು ಅದು ತಾನೇ ಮಾಡುತ್ತಿರುವುದು. ಇದಕ್ಕೆ ಯಾವುದೇ ಕಾನೂನು ಇಲ್ಲ. ರಾಜ್ಯಪಾಲರ ಭಾಷಣ ಮಾಡಲೇಬೇಕೆಂದು ಹಾಗೂ ಅದರ ಮೇಲೆ ಚರ್ಚೆ ಮಾಡಬೇಕು ಎಂಬ ಕಾನೂನು ಎಲ್ಲಿದೆ? ಎಲ್ಲೂ ಇಲ್ಲ. ಅದನ್ನು ಏಕೆ ತಾವು ರದ್ದು ಮಾಡಬಾರದು? ಸುಮ್ಮನೇ ಬಜೆಟ್ ಅಧಿವೇಶನ ಕರೆಯಿರಿ. ಮೊದಲನೆಯ ದಿವಸ ಐದು ನಿಮಿಷ ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಿ. ಅನಂತರ ಬಜೆಟ್ ಮಂಡನೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳುತ್ತಿರುವುದು....

ಪ್ರೊ. ನಂಜುಂಡಸ್ವಾಮಿ : ನೀವು ತೆಗೆದುಕೊಂಡರೋ ಅವರು ತೆಗೆದುಕೊಂಡರೋ ನನಗೆ ಗೊತ್ತಿಲ್ಲ. ನೀವು ಇಬ್ಬರೂ ನನಗೆ ಸಂಬಂಧ ಇಲ್ಲ. ನಿಮ್ಮಿಬ್ಬರನ್ನೂ ಸಮಾನವಾದ ಸ್ಥಾನದಲ್ಲಿಟ್ಟವನು ನಾನು. ಆ ಕಾರಣ ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದೇನೆ. ಸುಮ್ಮನೆ ಕಾಲಹರಣ ಏಕೆ ಮಾಡುತ್ತಿದ್ದೀರಿ ಹತ್ತು ದಿವಸ? ಇದನ್ನು ಸ್ವಲ್ಪ ಆಲೋಚನೆ ಮಾಡಿ. ಮುಂದಿನ ಅಧಿವೇಶನದಿಂದಾದರೂ ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬಹುದು.

ಶ್ರೀ ವೈ.ಕೆ. ರಾಮಯ್ಯ : ಸಂಸದೀಯ ವ್ಯವಹಾರಗಳ ಸಚಿವರಿಂದ ನೀರಾವರಿ ಬಗ್ಗೆ ಆಸಕ್ತಿಯನ್ನು ನಿರೀಕ್ಷೆ ಮಾಡುವಷ್ಟು ದಡ್ಡನಲ್ಲ ನಾನು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ಹೇಳಿರುವಂತಹ ವಿಷಯ ಪ್ರತಿ ಒಬ್ಬರಿಗೂ ಆಸಕ್ತಿ ಅಷ್ಟೇ ಅಲ್ಲ ಶ್ರದ್ಧೆ ಇರತಕ್ಕ ಅಂಶ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ ನೀವು ಮೈಮರೆತರೆ. ನಿಮ್ಮ ಕ್ಷೇತ್ರಕ್ಕೂ ನೀವು ಹೋಗುವುದು ಕಷ್ಟವಾಗುತ್ತದೆ. ನನಗೆ ಟೈಮ್ ಕೊಡದೇ ಹೋದರೆ ನಿಮ್ಮ ಕ್ಷೇತ್ರದಲ್ಲೂ ನೋಡುತ್ತಿದ್ದಾರೆ. ಕೃಷ್ಣಾ ಕಾವೇರಿ ಬಗ್ಗೆ ರಾಮಯ್ಯನವರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ ಎಂದು. ಅದು ನಿಮಗೂ ಕೂಡ ಪ್ರಭಾವ ಬೀರುತ್ತದೆ. ನಿಮಗೂ ಕೂಡ ಜನ ಕೇಳುತ್ತಾರೆ. ನಾನು ಅತ್ಯಂತ ವಿನಯದಿಂದ ಈ ಸರ್ಕಾರವನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ತಿಮ್ಮಪ್ಪನವರೇ, ನೀವು ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ನನ್ನ ಸ್ನೇಹಿತರು. ಅವರಿಂದ ಒಂದು ನೇರವಾದ ವಿಷಯ ಅಪೇಕ್ಷೆ ಪಡುತ್ತೇನೆ. ಅದೇನೆಂದರೆ ಈಗ ನೀರಾವರಿ ಬಾಬಿನಲ್ಲಿ ಬಾಕಿ ಇದೆ, ಬಿಲ್ ಪೆಂಡಿಂಗ್ ಇದೆ ಎಂದು ಕೇಳಿ ಕೇಳಿ ಸಾಕಾಗಿದೆ. ಕಬಿನಿಯಲ್ಲಿ ನೀರು ನಿಂತಿದೆ.

ಹೇಮಾವತಿಯಲ್ಲಿ ನೀರು ನಿಂತಿದೆ. ಹಾರಂಗಿಯಲ್ಲಿ ನೀರು ನಿಂತಿದೆ. ಈ ನಿಂತ ನೀರನ್ನು ಪೂರಾ ಉಪಯೋಗ ಮಾಡುವುದಕ್ಕೆ ಏನಾದರೂ ಉಪಾಯ ಇದ್ದರೆ ಹೇಳಿ. ಅದನ್ನು ನಾವು ಸರ್ಕಾರಕ್ಕೆ ಏನಾದರೂ ಬಿಟ್ಟಿದ್ದರೆ ಹೇಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಸ್ನೇಹಿತರಿಗೆ ನೀರಾವರಿ ಬಗ್ಗೆ ಸ್ವಲ್ಪ ಓದಿಕೊಳ್ಳುವುದಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಓದಿಕೊಂಡರೆ ನನ್ನ ಎದೆಯಲ್ಲಿರುವ 100ರಷ್ಟು ಬೆಂಕಿ ನಿಮಗೆ ಹತ್ತಿಕೊಳ್ಳುತ್ತದೆ. 12 ದಶಲಕ್ಷ ಎಕರೆಗೆ ಆಗುವಷ್ಟು ನೀರು ಈ ರಾಜ್ಯದ ಅಣೆಕಟ್ಟಿನಲ್ಲಿ ತುಂಬಿದ್ದಾರೆ. 12 ದಶಲಕ್ಷ ಎಕರೆಗೆ ಆಗುವಷ್ಟು ನೀರು ಹೇಮಾವತಿ, ಕಬಿನಿ ಹಾರಂಗಿ ನಾರಾಯಣಪುರ, ಘಟಪ್ರಭ, ಮಲಪ್ರಭದಲ್ಲಿ ತುಂಬಿದೆ.

5.15 ಪಿ.ಎಂ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಪ್ರೊ : ನಂಜುಂಡಸ್ವಾಮಿಯವರು ಒಂದು ವಿಷಯವನ್ನು ಎತ್ತಿದರು, ಎಲ್ಲಿ ಹೇಳಿದೆ, ರಾಜ್ಯಪಾಲರು ಭಾಷಣ ಮಾಡಬೇಕು, ಅದರ ಬಗ್ಗೆ ಚರ್ಚೆ ಮಾಡಬೇಕು ಎಂದು ಕೇಳಿದರು. ಆ ಸಂದರ್ಭದಲ್ಲಿ ನಾನು ನಮ್ಮ ಸಂವಿಧಾನದ 176ನೇ ವಿಧಿಯ ಪ್ರಕಾರ ವಿಧಾನಸಭೆಯ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ ಮತ್ತು ಪ್ರತಿವರ್ಷದ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ ರಾಜ್ಯಪಾಲರು ವಿಧಾನಸಭೆಯನ್ನು ಅಥವಾ ರಾಜ್ಯವಿಧಾನಪರಿಷತ್ತನ್ನು ಹೊಂದಿರುವ ಸಂದರ್ಭದಲ್ಲಿ ಒಟ್ಟಿಗೆ ಸಭೆ ಸೇರಿರುವ ಉಭಯ ಸದನಗಳನ್ನು ಸಂಬೋಧಿಸತಕ್ಕದ್ದು ಮತ್ತು ವಿಧಾನಮಂಡಲವನ್ನು ಕರೆದಿರುವುದರ ಕಾರಣಗಳನ್ನು ಅದಕ್ಕೆ ತಿಳಿಸತಕ್ಕದ್ದು

(2) ಅಂಥ ಸಂಬೋಧನೆಯಲ್ಲಿ ಉಲ್ಲೇಖಿಸಿದ ವಿಷಯಗಳ ಚರ್ಚೆಗಾಗಿ ಕಾಲವನ್ನು ಹಂಚಿಕೊಡುವ ಬಗ್ಗೆ ಸದನದ ಅಥವಾ ಎರಡರಲ್ಲಿ ಒಂದು ಸದನದ ಪ್ರಕ್ರಿಯೆಯನ್ನು ವಿನಿಮಯಗೊಳಿಸುವಂಥ ನಿಯಮಗಳ ಮೂಲಕ ಉಪಬಂಧ ಮಾಡತಕ್ಕದ್ದು" ಎಂದು ನಮ್ಮ ಸಂವಿಧಾನದಲ್ಲಿದೆ. ಅದೇ ರೀತಿಯಲ್ಲಿ ನಾವು ನಿಯಯವನ್ನು ರಚಿಸಿಕೊಂಡಿದ್ದೇವೆ. ನಿಯಮ19:"ರಾಜ್ಯಪಾಲರು ಮಾಡುವ ಭಾಷಣ ಮತ್ತು ನೀಡುವ ಸಂದೇಶ-ರಾಜ್ಯಪಾಲರು ವಿಧಾನಮಂಡಲಗಳನ್ನು ಉದ್ದೇಶಿಸಿ ಮಾಡುತ್ತಾರೆಂದು ಕಾರ್ಯದರ್ಶಿಯವರು ಸದನಕ್ಕೆ

ತಿಳಿಸತಕ್ಕದ್ದು ಹಾಗೂ ಅದರ ಒಂದು ಪ್ರತಿಯನ್ನು ಸದನದ ಮುಂದೆ ಮಂಡಿಸತಕ್ಕದ್ದು. ರಾಜ್ಯಪಾಲರು ಭಾಷಣ ಮಾಡಿದ ದಿನ ಭಾಷಣ ಮಾಡಿದ ಸದನವು ಸ್ವಲ್ಪ ಕಾಲ ಅಧಿವೇಶನದಲ್ಲಿದ್ದು ಕೆಲವೊಂದು ಔಪಚಾರಿಕ ಕಾರ್ಯಗಳ ಬಗ್ಗೆ ಚರ್ಚೆ ನಡೆಸತಕ್ಕದ್ದು. ಯಾವ ರೀತಿ ಚರ್ಚೆ ಮಾಡಬೇಕು, ಕಾಲ ಏತಕ್ಕೆ ನಿಗಧಿ ಮಾಡಬೇಕು ಎಂದು ನಿಯಮಗಳು ಕೂಡ ಇವೆ. ಆದ್ದರಿಂದ ಈ ಸಭೆಯಲ್ಲಿ ರಾಜ್ಯಪಾಲರ ಭಾಷಣ, ಅದರ ಮೇಲೆಚರ್ಚೆ ಸಂವಿಧಾನಾತ್ಮಕವಾಗಿ ಇರತಕ್ಕಂಥ ಒಂದು ಅವಕಾಶ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಕೇಳಿರತಕ್ಕಂಥದ್ದು ಎರಡಕ್ಕೂ ಒಂದೇ ದಿವಸ ಏತಕ್ಕೆ ಮಾಡಬಾರದು ಎಂದು.

ಅಧ್ಯಕ್ಷರು : ತಮಗೆ ಮಾತನಾಡುವುದಕ್ಕೆ ಅವಕಾಶ ಇದೆ. ಮುಂದೆ ಮಾತನಾಡಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಎರಡಕ್ಕೂ ಒಂದೇ ದಿವಸ ಏತಕ್ಕೆ ಮಾಡಬಾರದು ಎಂದು ಏನೂ ಅಲ್ಲಿ ಇಲ್ಲ..

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ದಯಮಾಡಿ ಇದೊಂದು ಪ್ರಲಾಪ ಎಂದು ಪರಿಗಣನೆ ಮಾಡಬಾರದು. ಅವರು ಹೇಳಿರುವುದರಿಂದ ಇದನ್ನು ಕೋಟ್ ಮಾಡಬೇಕು. ನಾನು ತೆಗೆದೆ, ಅದು ಸಿಕ್ಕಿದೆ. ನಿಮ್ಮ ಪ್ರಶ್ನೆಗೆ ಉತ್ತರ. ಈ ರಾಜ್ಯದಲ್ಲಿರುವಂಥ ಪೊಟೆನ್ಷಿಯಾಲಿಟಿ 21, 82, 326 ಎಕರೆ. ಈಗ ನಾವು ಮಾಡಿಕೊಂಡಿರುವುದು 9, 37, 390 ಎಕರೆ . ಸನ್ಮಾನ್ಯ ತಿಮ್ಮಪ್ಪನವರೇ, 12, 44, 936 ಎಕರೆಗೆ ನೀರು ಇದೆ. ಕಾಲುವೆ ಇಲ್ಲ. ಇದನ್ನು ಸ್ವಲ್ಪ ಅರ್ಥಮಾಡಿಕೊಂಡರೆ ಎಷ್ಟು ನೋವಾಗುತ್ತದೆ ಎಂದು ನಾನು ಅಂದು ಕೊಳ್ಳಬಲ್ಲೆ. ನೀರಿದೆ, ಕಾಲುವೆ ಇಲ್ಲ. ನಾರಾಯಣಪುರ ಡ್ಯಾಮ್ನಲ್ಲಿದೆ. ಹೇಮಾವತಿಯಲ್ಲಿದೆ, ಹಾರಂಗಿಯಲ್ಲಿದೆ, ಘಟಪ್ರಭಾದಲ್ಲಿದೆ, ಮಲಪ್ರಭಾದಲ್ಲಿದೆ, ಕೋಡಿ ಕಟ್ಟಿದ್ದೇವೆ, ತೂಬು ಕಟ್ಟಿದ್ದೇವೆ, ಏರಿ ಕಟ್ಟಿದ್ದೇವೆ. ಕಾಲುವೆ ತೆಗೆದು ನೀರನ್ನು ಬಿಟ್ಟುಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ತಿಮ್ಮಪ್ಪನವರೇ, ಇದಕ್ಕೆ ನಾನು ಯಾರನ್ನು ಕಾರಣಕರ್ತರು ಎಂದು ಹೇಳುವುದಿಲ್ಲ. ಇದಕ್ಕೆ ಇರುವುದು ಒಂದೇ ಒಂದು. ನೀವು ಇದಕ್ಕೆ ದಾರಿ ಹೇಳುತ್ತೀರಾ? ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ತಾಂತ್ರಿಕವಾದಂಥ ಯಾವ ತೊಂದರೆಯೂ ಇಲ್ಲ. ಈಗ ಇರತಕ್ಕಂಥ only constraint is money. ಹಣವನ್ನು ಒದಗಿಸಿಕೊಟ್ಟರೆ ಈ 12 ಲಕ್ಷ ಎಕರೆಗಾದರೂ ನೀರನ್ನು ಬಿಟ್ಟುಕೊಳ್ಳುವಂಥ ಪರಿಸ್ಥಿತಿಗೆ ನಾವು ಬೇಗ ತಲುಪಬಹುದು. ನಿಮಗೆ ಇವತ್ತಿನಿಂದಲಾದರೂ ಸ್ವಲ್ಪ ನೀರಾವರಿ ಬಗ್ಗೆ ಆಸಕ್ತಿ ವಹಿಸಿಕೊಳ್ಳಿ ಎಂದು ಹೇಳಿ ಇನ್ನೊಂದು ಮಾತನ್ನು ಹೇಳುತ್ತೇನೆ. ಸ್ವಲ್ಪ ತಲೆಗೆ ಹಿಡಿಯಲಿ. ನೀರಾವರಿಯನ್ನು ಆದ್ಯತಾ ವಲಯ ಎಂದು ನಾವೆಲ್ಲರೂ ಹೇಳಿಕೊಳ್ಳಬಹುದು. ಈ ಆದ್ಯತಾ ವಲಯದಲ್ಲಿ ನಮ್ಮ ಸಾಧನೆಯೇನು?

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಬಜೆಟ್ನಲ್ಲಿ ಹೈಯಸ್ಟ್ ಪ್ರೈಯಾರಿಟಿಯನ್ನು ಅಲೋಕೇಷನ್ ಯಾವುದಕ್ಕೆ ಕೊಡುತ್ತಾರೆ ಎಂದು ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಈ ಆದ್ಯತಾ ವಲಯದಲ್ಲಿ ನಮ್ಮ ಸಾಧನೆಯೇನು? ನಾನು ಆ ಪಕ್ಷದ ಸರ್ಕಾರ, ಈ ಸರ್ಕಾರ ಎಂದು ಹೇಳುವಂಥ ಸಣ್ಣತನಕ್ಕೆ ಹೋಗುವುದಿಲ್ಲ. ನಾವೆಲ್ಲರೂ ಸೇರಿಕೊಂಡು ಈ ಆದ್ಯತಾ ವಲಯದಲ್ಲಿ ಒಂದು ದಶಕದಲ್ಲಿ ಮಾಡಿರುವ ಸಾಧನೆಯೇನು? ರಾಷ್ಟ್ರದಲ್ಲಿ ಶೇಕಡ ನೀರಾವರಿ ಇರುವುದು 35. ರಾಷ್ಟ್ರದ ಪರ್ಸೆಂಟೇಜ್ 35. ಈ ರಾಜ್ಯದ್ದು ಇವತ್ತಿಗೆ 13 ಪರ್ಸೆಂಟ್.

1985ರಲ್ಲಿ 12.27 ಪರ್ಸೆಂಟ್. 1994ರಲ್ಲಿ 14.36 ಪರ್ಸೆಂಟು. ಇದು ನಿಮ್ಮ ದೊಡ್ಡ ಸಾಧನೆ. ಒಂದು ಪರ್ಸೆಂಟು. ಈ ರಾಜ್ಯದ ಆದ್ಯತಾ ವಲಯವೆಂದು

ಕೂಗಿಕೊಳ್ಳುವ ಈ ಕ್ಷೇತ್ರದಲ್ಲಿ ಒಂದು ದಶಕದ ನಮ್ಮ ಸಾಧನೆ ಒಂದೇ ಒಂದು ಪರ್ಸೆಂಟ್. ನೀರಾವರಿ ಬಗ್ಗೆ ನಿಮಗೆ ಏಕೆ ಉದ್ವೇಗ. ನೀರಾವರಿ ಬಗ್ಗೆ ಏಕೆ ಹುಚ್ಚು ಹಿಡಿಯುತ್ತದೆ ಎಂದರೆ ಹಿಡಿಯದೆ ಏನು ಮಾಡಬೇಕು. ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇಷ್ಟೊಂದು ಪ್ರಾಶಸ್ತ್ಯ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಇಷ್ಟೆಲ್ಲಾ ಆದರೂ ಕೂಡ ಈ ರಾಜ್ಯದಲ್ಲಿ ನಾವು ಸಾಧನೆ ಮಾಡಿರುವುದು ಹತ್ತು ವರ್ಷದಲ್ಲಿ ಒಂದೇ ಒಂದು ಪರ್ಸೆಂಟ್. The increase in the creation of the potentiality in irrigation in Karnataka in a decade is only one per cent. ರಕ್ತ ಕುದಿಯುವುದಿಲ್ಲ ನಿಮಗೆ?

ಶ್ರೀ ಕಾಗೋಡು ತಿಮ್ಮಪ್ಪ :ಅದಕ್ಕೆ ನೀವೂ ಕಾರಣರು.

ಶ್ರೀ ವೈ.ಕೆ. ರಾಮಯ್ಯ : ನಾವೆಲ್ಲಾ ಸೇರಿ ಎಂದು ಹೇಳುತ್ತಿದ್ದೇನೆ. ನನ್ನನ್ನೂ ಸೇರಿಕೊಂಡು ಹೇಳುತ್ತಿದ್ದೇನೆ. ದಯಮಾಡಿ ಕ್ಷಮಿಸಬೇಕು, ಉದ್ವೇಗದ ಕೈಯಲ್ಲಿ ಬುದ್ಧಿ ಕೊಡುವುದು ಯಾವಾಗಲೂ ಒಳ್ಳೆಯದಲ್ಲ, ತಮ್ಮ ಕ್ಷಮೆ ಕೇಳಿಕೊಳ್ಳುತ್ತೇನೆ. ನಾನು ಇಲ್ಲಿ ಉದ್ವೇಗದಿಂದ ಅವರಿಗೆ ಉತ್ತರ ಕೊಡಲಿಲ್ಲ. ನಾನು ಏಕೆ ಈ ಮಾತನ್ನು ಹೇಳಬೇಕಾಯಿತು ಎಂದರೆ ಯಾವ ನೀರಾವರಿ ಸಚಿವರು ಸರ್ಕಾರದಿಂದ ಹಣ ಬರುತ್ತಾ ಇಲ್ಲ, ನಾನೇನು ಬಂಡಾಯ ಏಳಲಾ? ನಾನು ಹೋಗಿ ಆರ್ಥಿಕ ಮಂತ್ರಿಗಳ ಮನೆ ಬಾಗಿಲು ತಟ್ಟಲಾ ಎಂದು ಹೇಳಿಕೆ ಕೊಟ್ಟವರು, ಮೊನ್ನೆ ಆಗಲೇ ಅವರ ಧ್ವನಿನೇ ಇದ್ದಕ್ಕಿದ್ದ ಹಾಗೆ ಬದಲಾವಣೆ ಆಗಿ ಹೋಯಿತು. ರಾಜಕೀಯ ಕಾರಣಕ್ಕಾಗಿ ಸ್ವಾರ್ಥಕ್ಕಾಗಿ ಅಥವಾ ಬೇರೆ ಯಾವುದೋ ಒಂದು ಪ್ರಲೋಭನೆಗೆ ಒಬ್ಬ ವ್ಯಕ್ತಿ ಇಷ್ಟೊಂದು ಬದಲಾವಣೆ ಆಗಬಲ್ಲ ಎಂದು ನಾನು ನಿರೀಕ್ಷೆ ಮಾಡುವುದಿಲ್ಲ. ಈಗ ಅವರು ಹೇಳುತ್ತಾರೆ, ನೀರಾವರಿಗೆ ಹಿನ್ನಡೆ ಆಗಿಲ್ಲ ಎಂದು. ಕೃಷ್ಣಾ ಕಾವೇರಿಗೆ ಹಣದ ಕೊರತೆ ಇಲ್ಲ ಎಂದು ಈಗ ಅವರು ಹೇಳುತ್ತಾರೆ. ಅವರು ಇಲ್ಲಿ ಎದುರುಗಡೆ ಇಲ್ಲ, ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಕೃಷ್ಣ ಅವರು ಒಬ್ಬ ರೈತನ ಮಗ, ಒಬ್ಬ ಮಂತ್ರಿಯಾಗಿ ಋಣ ತೀರಿಸುವುದಷ್ಟೇ ಅಲ್ಲ ಒಬ್ಬ ಮಣ್ಣಿನ ಮಗನಾಗಿ ಒಬ್ಬ ರೈತನ ಮಗನಾಗಿ ಈ 12 ಲಕ್ಷ ಎಕರೆಗೆ ಬೇಕಾಗುವಂಥ ನೀರು ಕಟ್ಟೆಯಲ್ಲಿ ತುಂಬಿರುವಂತಹ ಪರಿಸ್ಥಿತಿ ಇದೆಯಲ್ಲಾ ಇಂತಹ ಪಾಪದ ಸೃಷ್ಟಿಯನ್ನು ಮಾಡಿರುವ ನಾವು ಎಲ್ಲರಿಗೂ ಕಾಣುತ್ತೇವೆ. ಇದನ್ನು ನಿವಾರಣೆ ಮಾಡಲಿಕ್ಕೆ ಇನ್ನು ಮೇಲಾದರೂ ಪ್ರಾಮಾಣಿಕವಾದ ಪ್ರಯತ್ನ ಮಾಡಲಿ. ಹೇಮಾವತಿ ಕಾಲುವೆ ಒಂದೇ ಒಂದು ಹತ್ತು ತಿಂಗಳಿಂದ ಪೆಂಡಿಂಗ್ ಬಿದ್ದಿದೆ ಐದು ಕೋಟಿ ರೂಪಾಯಿ ಎಸ್ಟಿಮೇಟ್. ಇವರು ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗುವುದಿಲ್ಲ, ಅದು ಅಪ್ರೂವ್ ಆಗುವುದಿಲ್ಲ. "Deepening of the cut and cover or re-modelling of the CD works.' ಇದೊಂದು ಉದಾಹರಣೆ ಮಾತ್ರ ಕೊಡುತ್ತಿದ್ದೇನೆ. ಇವರು ಕ್ಯಾಬಿನೆಟ್ಗೆ ಹೋಗುವ ಹಾಗೆ ಇಲ್ಲ, ಅದು ಅಪ್ರೂವ್ ಆಗುವ ಹಾಗೆ ಇಲ್ಲ, ನಮಗೆ ನೀರು ಬರುವ ಹಾಗೆ ಇಲ್ಲ. ಆದ್ದರಿಂದ ನನ್ನ ದೃಷ್ಟಿಯಿಂದ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಯಾವುದು ಇರಬೇಕಾಗಿತ್ತೋ ಅದು ಇಲ್ಲ ಎಂದು ಹೇಳಿದ್ದು. ಪ್ರಪ್ರಥಮವಾಗಿ ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ಕುಂಠಿತ ಆಗಲಿಕ್ಕೆ ಕಾರಣ ಕರ್ತವಾಗಿರುವಂತಹ ಈ ರಾಜ್ಯದ ಆರ್ಥಿಕ ದಿವಾಳಿತನದ ಪರಿಸ್ಥಿತಿಯ ಚಿತ್ರಣದಿಂದಾಗಿ ವಿಶೇಷ ಪರಿಸ್ಥಿತಿ ಇರುವಂತಹ ಕೃಷ್ಣಾ ಕಾವೇರಿ ನೀರಿನ ಬಳಕೆಯ ಪ್ರಸ್ತಾಪ ಇಲ್ಲ. ಈ ಎರಡೂ ಪ್ರಾಮುಖ್ಯ ವಿಷಯಗಳನ್ನು ಹೊರತಾಗಿರುವ ಈ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸಲು ನಾನು ಸಿದ್ಧನಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಏನೋ ಕಾನೂನು ಮಂತ್ರಿಗಳ ಹೇಳುತ್ತಿದ್ದರು. ಬಿಸಿನೆಸ್ ಅಡ್ವೈಸರಿ ಕಮಿಟಿ ವಿಷಯ.

ಅಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಪ್ರಸ್ತಾವವನ ಶುರು ಮಾಡಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಅವರು ವಿಧೇಯಕಗಳನ್ನು ತೆಗೆದುಕೊಳ್ಳುವುದಾದರೆ, ನನ್ನದೇನೂ ಅಭ್ಯಂತರ ಇಲ್ಲ, ನಾನು ನಾಳೆ ಮಾತನಾಡುತ್ತೇನೆ

ಅಧ್ಯಕ್ಷರು : ತಾವು ಮಾತನಾಡಿ.

+ ಪ್ರೊ : ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಏನು ರಿಚ್ಯುಯಲ್ ತರಹ ನಡೆಯುತ್ತಿದೆ, ರಾಜ್ಯಪಾಲರ ಭಾಷಣ, ಅದರ ಮೇಲೆ ವಂದನಾ ನಿರ್ಣಯ ಮತ್ತು ಅದರ ಮೇಲೆ ಚರ್ಚೆ ಅದನ್ನು ಹೇಗಾದರೂ ಮಾಡಿ ಹೆಚ್ಚಿಗೆ ಕಾಲಹರಣ ಮಾಡದ ರೀತಿ ಚರ್ಚೆ ಮಾಡಿ ಮುಗಿಸುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಅದು ವಿಶೇಷವಾಗಿ ಈ ಮೂರು ವರ್ಷಗಳಿಂದ ಈಚೆಗೆ ಇದರ ಅವಶ್ಯಕತೆ ನನಗೆ ಕಂಡು ಬರುತ್ತಾ ಇಲ್ಲ.

ಇನ್ನು ಮುಂದೆ ಇದರ ಅವಶ್ಯಕತೆಯಂತೂ ಇರುವುದಿಲ್ಲ. ಅದಕ್ಕೆ ಕಾರಣವಿಷ್ಟೆ: ಇದನ್ನು ಓದಿದಂಥ ಯಾರೇ ಆದರೂ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಬಹುದು ಅಥವಾ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಬಹುದು. ಅವರಿಗೆ ನಗು ಬರಿಸುವಂತಹ ಒಂದು ದಾಖಲೆ ಇಲ್ಲಿದೆ. ಇದರಲ್ಲಿ ಏನೇನೂ ಅರ್ಥವಿಲ್ಲದ ವಾಕ್ಯಗಳನ್ನು ಸೇರಿಸಿ, ಈ ಸರ್ಕಾರದ ನೀತಿಯನ್ನು ಸದನದ ಮುಂದೆ ಮಂಡಿಸುವಂಥ ಒಂದು ಪ್ರಯತ್ನವಾಗಿದೆ. ಇದನ್ನು ನಾನು ಓದಿದ ಕೂಡಲೇ ಅಥವಾ ಕೇಳಿದ ಕೂಡಲೇ ಈ ಸರ್ಕಾರಕ್ಕೆ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಕೂಡ ಇಲ್ಲವೆನ್ನುವಂಥ ಅಭಿಪ್ರಾಯಕ್ಕೆ ಬರಬೇಕಾಗಿದೆ. ಇಲ್ಲವೆ, ಈ ಸದನದಲ್ಲಿರುವವರಿಗೆ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರದಲ್ಲಿ ಕನಿಷ್ಠ ಜ್ಞಾನ ಕೂಡ ಇಲ್ಲವೆಂದು ತಿಳಿದುಕೊಂಡು ಸರ್ಕಾರ ಇಂತಹ ದಾಖಲೆ ಮಂಡಿಸಿದೆಯೆಂದು ತಿಳಿದುಕೊಳ್ಳಬೇಕಾಗುತ್ತದೆ. One of the two things. Either we have to think that this Government does not have elementary knowledge of politics and economics or We have to think that this Government thinks that this House does not have the elementary knowledge of politics and economics.

Dr. N.B. Nanjappa : I strongly object to these words. Let it be anybody. They should not talk like that.

ಹಾಗಾದರೆ ಪ್ರೊ. ನಂಜುಂಡಸ್ವಾಮಿಯವರು ಸದನದಲ್ಲಿರುವ ಎಲ್ಲರಿಗಿಂತಲೂ ಬುದ್ಧಿವಂತರೇ? ಮಾತನಾಡುವುದಕ್ಕೂ ಒಂದು ನ್ಯಾಯ, ನೀತಿ ಉಂಟು. He has got a very good fluent English and a knowledge about English. He may be even knowing lot of things.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಸದಸ್ಯರಾದ ಡಾ|| ನಂಜಪ್ಪನವರ ಬಗ್ಗೆ ಒಂದು ರೂಲಿಂಗ್ ಕೊಡಬೇಕಾಗುತ್ತದೆ. ಅವರು ಏನು ಮಾತನಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

Dr. N.B. Nanjappa : It is not like that. I give all respect but that does not mean you can use whatever you think.

ಪ್ರೊ॥ ಎಂ. ಡಿ ನಂಜುಂಡಸ್ವಾಮಿ : ನಾನು ಏನು ಹೇಳಬೇಕೋ ಅದನ್ನೇ ಹೇಳುತ್ತಿದ್ದೇನೆ.

ಡಾ॥ ಎನ್. ಬಿ. ನಂಜಪ್ಪ : ಇದೆಲ್ಲಾ ಬೇಡ ಎಂದು ನೀವು ಹೇಳುತ್ತಿದ್ದೀರಿ, ಹಾಗಾದರೆ ಇನ್ನೇನುಮಾಡಬೇಕು? ಇದೆಲ್ಲಾ ಮಾಡಬೇಕಾದ್ದಿಲ್ಲ, ಇದೆಲ್ಲಾ ರಿಚ್ಯುಯಲ್ ಎಂದು ಹೇಳುತ್ತಿದ್ದೀರಿ. ಯಾರೋ ಒಬ್ಬರು 'ಶ್ರಾದ್ಧ' ಎಂದರು. ಅಸೆಂಬ್ಲಿಯಲ್ಲಿ ಶ್ರಾದ್ಧ ಮಾಡುತ್ತಾರೆಯೇ? ಏನು ನಿಯಮಗಳಿವೆ. ಅದರಂತೆ ನಡೆದುಕೊಂಡು ಬರಲಾಗುತ್ತಿದೆ. ಅದರ ಪ್ರಕಾರ ಹೋಗಬೇಕು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನಾವು ಹೇಳುತ್ತೇವೆ, ನೇಮಕವಾದ ರಾಜ್ಯಪಾಲರ ಹುದ್ದೆ ರದ್ದಾಗಬೇಕೆಂದು. ಎಲ್ಲಿಯವರೆಗೆ ನೇಮಕವಾದ ರಾಜ್ಯಪಾಲರು ಇರುತ್ತಾರೋ, ಅಲ್ಲಿಯವರೆಗೆ ಅವರು ಕೇಂದ್ರದ ಏಜೆಂಟರಾಗಿ ಕೆಲಸ ಮಾಡುತ್ತಾರೆಂದು ಹತ್ತಾರು ವರ್ಷಗಳಿಂದ ಸಂವಿಧಾನ ಬರೆದಾಗಿನಿಂದ ನಾವು ಹೇಳುತ್ತಿದ್ದೇವೆ. ಆಯ್ಕೆಯಾದ ರಾಜ್ಯಪಾಲರು ಬರಬೇಕು. ಇದೆಲ್ಲಾ ಇವರಿಗೆ ಅರ್ಥವಾಗುವುದಿಲ್ಲ.

Dr. N.B. Nanjappa : You cannot go on criticising.

Prof. M.D. Nanjundaswamy : The Elementary knowledge of democracy demands that there should be an elected Governor.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಸರ್ಕಾರವನ್ನು ಇನ್ನು ಯಾವ್ಯಾವ ಭಾಷೆಯಲ್ಲಿ ಬಯ್ಯಬೇಕೆಂಬ ಬಗ್ಗೆ ತಾವು ನಿರೂಪಣೆ ಮಾಡಿ, ಮತ್ತು ಡಾ: ನಂಜಪ್ಪನವರು ಒಂದು ಪುಸ್ತಕ ಬರೆದು ಇಂತಿಂಥ ಭಾಷೆಯಲ್ಲಿ ಸರ್ಕಾರವನ್ನು ಬಯ್ಯಬೇಕೆಂದು ಹೇಳಿದರೆ ಆ ಪದಗಳನ್ನು ಉಪಯೋಗಿಸೋಣ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಪ್ರಜಾಪ್ರಭುತ್ವ ಎಂದರೆ ಏನೆಂದು ನಾನು ಹೇಳುತ್ತಿದ್ದೇನೆ ಅಷ್ಟೆ.

Dr. N.B. Nanjappa : on the Floor of the House, you should have your own limitations and dignity and decorum.

ಶ್ರೀ ವಾಟಾಳ್ ನಾಗರಾಜ್ : ಇದು ಮಿಲಿಟರಿ ಪ್ರಭುತ್ವವಲ್ಲ, ಪ್ರಜಾಪ್ರಭುತ್ವ. ಮಾನ್ಯ ಸದಸ್ಯರಾದ ಡಾ: ನಂಜಪ್ಪನವರು ಮಿಲಿಟರಿ ಪ್ರಭುತ್ವಕ್ಕೆ ಸರಿಯೇ ಹೊರತು ಪ್ರಜಾಪ್ರಭುತ್ವಕ್ಕೆ ಸರಿ ಅಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಯಾಗಿದೆ. (ಈ ಹಂತದಲ್ಲಿ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುವುದಕ್ಕೆ ಎದ್ದು ನಿಂತಾಗ) ಏಕೆ ತಿಮ್ಮಪ್ಪನವರೇ, ನೀವು ಈಗಾಗಲೇ 3-4 ಬಾರಿ ಸದನದ ವಾತಾವರಣವನ್ನು ಕೆಡಿಸಿರುವುದು ಸರಿಯಲ್ಲ.

ಅಧ್ಯಕ್ಷರು : ತಾವು ನನ್ನ ಕಡೆ ನೋಡಿ ಮಾತನಾಡಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನಾನು ತಮ್ಮ ಮೂಲಕ ಹೇಳುತ್ತೇನೆ. ಇದರ ಬಗ್ಗೆ ಚರ್ಚೆಯಾಗಿದೆ. ಈ ಭಾಷಣ ನಮ್ಮ ಸಚಿವಸಂಪುಟದ ಒಪ್ಪಿಗೆ ಪಡೆದ ನಂತರ ಕೊಡುವಂಥ ಭಾಷಣ. ಅದರಲ್ಲಿಯೇ ಅಡಗಿರುವುದು. ಒಬ್ಬ ನೇಮಕ ಆದ ರಾಜ್ಯಪಾಲ, ಅವನ ಅಧಿಕಾರವ್ಯಾಪ್ತಿ ಎಷ್ಟಿದೆ ಎನ್ನುವುದು ಈ ಒಂದು ಕ್ರಮದಲ್ಲೇ ಅಡಗಿರುವುದು. ಆಯ್ಕೆಯಾದ ರಾಜ್ಯಪಾಲ ಆಗಿದ್ದರೆ ಸಂಪುಟದ ಒಪ್ಪಿಗೆ ಬೇಕಾಗಲ್ಲ. ಆ ಕಾರಣಕ್ಕಾಗಿಯೇ ಆಯ್ಕೇಯಾದ ರಾಜ್ಯಪಾಲ ಬೇಕು ನಾವು ಸಂವಿಧಾನ ಬರೆದಾಗಿನಿಂದಲೂ ನಾವು ಒತ್ತಾಯ ಮಾಡುತ್ತಿದ್ದೇವೆ. ಈಗಲೂ ಅಳವಡಿಸಿಕೊಳ್ಳುವುದು ಏನೂ ದೊಡ್ಡ ವಿಷಯವಲ್ಲ, ಅಳವಡಿಸಿಕೊಳ್ಳಬಹುದು. not in a Presidential form

of Government, but in the existing Parliamentary democracy itself.

ಆಗ ಇದಕ್ಕೆ ಕಿಮ್ಮತ್ತು ಬರುತ್ತದೆ. ಅಲ್ಲಿಯವರೆಗೆ ಇದಕ್ಕೇನು ಕಿಮ್ಮತ್ತು ಇರುವುದಿಲ್ಲ. ಅದಕ್ಕೇ ನಾನು ಹೇಳಿದ್ದು ಇದು ಸುಮ್ಮನೆ ಮಾಡಿದ ಕೆಲಸವನ್ನೇ ಮಾಡುವುದು. My Government ಎಂದು ಅವರು ಬರೆದಿರಬಹುದು. But this is a document placed before this House by the Cabinet.

ಮತ್ತೊಂದು ಡಾಕ್ಯುಮೆಂಟನ್ನು ಇಡುತ್ತೀರಿ ಇನ್ನೊಂದು ಸ್ವಲ್ಪ ದಿವಸ ಬಿಟ್ಟು, ಎರಡರ ಮೇಲೂ ಈಗ ಒಂದು ಸಾರಿ ಚರ್ಚೆ, ಆಗ ಒಂದು ಸಾರಿ ಚರ್ಚೆ, ಅದೇನೇ ಇರಲಿ, ನಾನು ಹೇಳತ್ತಿದ್ದೆ. ಇಲ್ಲ, ಇದನ್ನು ಓದಿದವರಿಗೆ ಅನಿಸುವುದು, ಈ ಸರ್ಕಾರಕ್ಕೆ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲ ಎನ್ನುವ ಭಾವನೆ ಬಂದೇ ಬರುತ್ತದೆ. ಇಲ್ಲ, ಇದನ್ನು ಸದನದ ಮುಂದೆ ಇಡುವಂಥ ಧೈರ್ಯ ಮಾಡಿರುವ ಸರ್ಕಾರಕ್ಕೆ ಇಲ್ಲಿರುವವರಿಗೆ ಯಾರಿಗೂ ರಾಜ್ಯಶಾಸ್ತ್ರ, ಅರ್ಥಶಾಸ್ತ್ರದ ಬಗ್ಗೆ ಕನಿಷ್ಟ ಜ್ಞಾನ ಇಲ್ಲ ಎನ್ನುವ ಭಾವನೆ ಇದೆ ಎನ್ನುವಂಥ ಅರ್ಥ ನಾವು ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಕಾರಣವಿಷ್ಟೆ. ಬಹಳ ವಿವರವಾಗಿ ಕಾರ್ಯಕ್ರಮಗಳನ್ನು ಹಾಕಿದ್ದಾರೆ. 17ನೇ ಪ್ಯಾರಾದಿಂದ ಶುರುವಾಗುತ್ತದೆ ಇವರ ಕಾರ್ಯಕ್ರಮ. ಅಲ್ಪಸಂಖ್ಯಾತರಿಂದ ಪ್ರಾರಂಭ. "ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೊಂದು ದೊಡ್ಡ ನ್ಯಾಯೋಚಿತ ಕಾರ್ಯಕ್ರಮ". "ಹಿಂದುಳಿದ ವರ್ಗಗಳ ಯೋಗಕ್ಷೇಮದ ಗುರಿ ಸಾಧನೆ", "ಮಹಿಳಾ ಸಮೃದ್ಧಿ ಯೋಜನೆ", "ಮಹಿಳೆಯರ ಅಭಿವೃದ್ಧಿಗಾಗಿ ಸಮಗ್ರ ಯೋಜನೆ" "ಮಕ್ಕಳ ಅಭಿವೃದ್ಧಿಗೆ ಸಮಗ್ರ ಹಾಗೂ ಬಹುವಲಯ ಯೋಜನೆ", ಆ ನಂತರ ಕೊನೆಗೆ "ರಾಜ್ಯದಲ್ಲಿ ವಿವಿಧ ವಿಷಯಗಳ ಪದವೀಧರರಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯ ಬಗ್ಗೆ ಕಳಕಳಿ", ಅದರ ಜೊತೆಗೆ ಬರೆಯುತ್ತಾರೆ, 9ನೇ ಪುಟದಲ್ಲಿ ಬರೆಯುತ್ತಾರೆ. ಕನ್ನಡದ ಆವೃತ್ತಿ.

> "ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ರವರು ಆರಂಭಿಸಿರುವ ಹೊಸ ಉದಾರ ಆರ್ಥಿಕ ನೀತಿಗಳು ವಿಭಿನ್ನ ಕ್ಷೇತ್ರಗಳಲ್ಲಿರುವ ಖಾಸಗಿ ಉದ್ಯಮಗಳು, ಸ್ವಂತ ಉದ್ಯೋಗ ಮುಂತಾದವುಗಳಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿವೆ."

ಇನ್ನೊಂದುಕಡೆ ಹೇಳುತ್ತಾರೆ. 'ಹೊಸ ಉದಾರ ನೀತಿಗಳನ್ನು ಅಕ್ಷರಶಃ ನಮ್ಮ ಸರ್ಕಾರ ಒಪ್ಪಿದೆ" ಇನ್ನೊಂದು ಕಡೆ ಹೇಳುತ್ತಾರೆ 17ನೇ ಪುಟದಲ್ಲಿ.

> "ಕೇಂದ್ರ ಸರ್ಕಾರವು ಘೋಷಿಸಿದ, ಆರ್ಥಿಕ, ಕೈಗಾರಿಕಾ ಮತ್ತು ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮುಖ ಮೂಲಭೂತ ಸುಧಾರಣಾ ನೀತಿಗಳಿಗನುಸಾರವಾಗಿ ಕರ್ನಾಟಕ ಸರ್ಕಾರವು, 1993ರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಮತ್ತು ಕೆಲವು ಉತ್ತೇಜಕ ಹಾಗೂ ರಿಯಾಯಿತಿ ಕ್ರಮಗಳನ್ನು ಘೋಷಿಸಿತು" ಎಂದು ಹೇಳುತ್ತಾರೆ.

ಅಂದರೆ the New Structural Adjustment Policies. ಮಾಜಿ ಹಣಕಾಸು ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ನನಗೆ ಬಹಳ ಸಂತೋಷವಾಗುತ್ತಿದೆ. ಅವರಾದರೂ ಇದ್ದಾರಲ್ಲಾ ಕೇಳುವುದಕ್ಕೆ ಎಂದು. ಸನ್ಮಾನ್ಯ ಘೋರ್ಪಡೆಯವರು ಇಲ್ಲಿ ಕುಳಿತಿದ್ದಾಗ ನನಗೆ ಸ್ವಲ್ಪ ಸಮಾಧಾನ ಇತ್ತು. ಮಾಜಿ ಹಣಕಾಸು ಮಂತ್ರಿಗಳಾದರೂ ಇದ್ದಾರಲ್ಲಾ, ಹಾಲಿಯವರು ಇಲ್ಲದಿದ್ದರೂ ಎಂದು. ಏಕೆಂದರೆ ನಾನು ಮಾತನಾಡುತ್ತಿರುವುದು ಸಂಪೂರ್ಣ ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟಿದ್ದು. ರಾಜ್ಯಭಾರ ಮಾಡುವುದಕ್ಕೆ ಸಂಬಂಧಪಟ್ಟಿದ್ದು. ಇದು

ಸಾಧ್ಯವೇ? ಹೊಸ ಉದಾರ ನೀತಿ ಮತ್ತೆ ಸ್ಟ್ರಕ್ಚರಲ್ ಅಡ್ಜಸ್ಟ್ಮೆಂಟ್ ಪ್ರೋಗ್ರಾಮ್ಸ್. ಇದನ್ನು ಎರಡನ್ನೂ ಇಟ್ಟುಕೊಂಡು ಇವರು ಹೇಳಿರುವಂಥ ಅಲ್ಪ ಸಂಖ್ಯಾತರ ಕಲ್ಯಾಣ, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿಯ ಕಲ್ಯಾಣ, ಮಹಿಳೆಯರಿಗೆ ಸಮಗ್ರ ಯೋಜನೆ, ಮಕ್ಕಳ ಕಲ್ಯಾಣ ಬೇರೆ ಬೇರೆ ಎಲ್ಲಾ ಕ್ಷೇತ್ರದಲ್ಲಿರುವ ಪದವೀಧರೇ ನಿರುದ್ಯೋಗಿಗಳಿಗೆ ಉದ್ಯೋಗ, ಇದನ್ನೆಲ್ಲಾ ಸಾಧನೆ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೀರಿ.

ವಿಶ್ವಬ್ಯಾಂಕ್ Structural Adjustment Programme ಎಂದು ಏನು ಹೇಳುತ್ತದೆ. ಅದರಲ್ಲಿ ನಾವು ನಮ್ಮ ಅರ್ಥ ವ್ಯವಸ್ಥೆಯಲ್ಲಿ ಏನೇನು ಅಳವಡಿಸಿಕೊಳ್ಳಬೇಕು ಎಂದು ಹೇಳಿರುವುದು ನನ್ನ ಹತ್ತಿರ ಇದೆ. ಆದರೆ ನಾನು ಎಲ್ಲವನ್ನೂ ಓದುವುದಿಲ್ಲ. ಯಾವುದು ಈ ಭಾಷಣಕ್ಕೆ ಸಂಬಂಧಿಸಿದಂತೆ ಸುಸಂಬಂಧವಾಗಿದೆಯೋ ಅಷ್ಟನ್ನು ಮಾತ್ರ ಓದುತ್ತೇನೆ. ಮೊದಲನೆಯದು "World Bank conditions for the reorganisation of economic policy.

ಎರಡನೆಯದು, ಅದರ ಪಕ್ಕದಲ್ಲೇ ನಾನು ಓದೋದು. "Conditions accepted by the Government of India shown in the Budget of 1991-92, 1992-93, 1993-94.'StructuralAdjustmentprogrammeಕೇಂದ್ರ ಸರ್ಕಾರ ಏನು ಅಳವಡಿಸಿಕೊಂಡಿದೆ, ಅದರ ಪರಿಣಾಮ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಯೋಜನಾ ಸ್ವರೂಪದ ಮೇಲೆ ಎಷ್ಟು ಪರಿಣಾಮ ಮಾಡಿದೆ ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ರಾಜ್ಯಪಾಲರ ಭಾಷಣವನ್ನು ಓದಿದರೆ ಇದರಲ್ಲಿ ಏನೇನೂ ಅರ್ಥವಿಲ್ಲ.

(ಗೊಂದಲ)

ಅವಸರ ಮಾಡಬೇಡಿ. ಇದೊಂದು ಜೆರಾಕ್ಸ್ ಕಾಪಿಯನ್ನು ಮಾಡಿ ಕಳುಹಿಸಿಕೊಡುತ್ತೇನೆ. ಅವರಿಗೆ ಆಸಕ್ತಿ ಇಲ್ಲ. ಕೇಳುತ್ತಿದ್ದಾರೆ, ಆದರೆ ನನ್ನ ಹತ್ತಿರ ಬಂದು ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಅವರಿಗೆ ತಮ್ಮ ಮೇಲೆ ಅಷ್ಟು ಪ್ರೀತಿ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ : ನಾನು ಬಂದು ಕೇಳಿದ್ದೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಸರ್ಕಾರವನ್ನು ಕೈಯಲ್ಲಿ ಇಟ್ಟುಕೊಂಡು.....

ಶ್ರೀ ಬಿ.ಹೆಚ್. ಬನ್ನಿಕೋಡ್ : ಅದು ನೀವು ಏನು ಜನರಿಗೆ ಕೊಡುತ್ತೀರಿ, ಎಂದು ಮಾಡುತ್ತೀರಿ ಅದನ್ನು ಅವರು ಮಾಡಿದ್ದಾರೆ ಅಷ್ಟೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಈ ಸಭೆಯಲ್ಲಿ ಹೇಳಬೇಕೋ ಬೇಡವೋ ಆದರೆ ಅಧ್ಯಕ್ಷರೇ, ತಾವು ಅಪ್ಪಣೆ ಕೊಟ್ಟರೆ, ಹೇಳುತ್ತೇನೆ. ಕಳೆದ ವರ್ಷದ ಅಧಿವೇಶನದಲ್ಲಿ ಡಂಕಲ್ ಡ್ರಾಫ್ಟ್ ಪ್ರತಿಗಳನ್ನು ಎಲ್ಲಾ ಸದಸ್ಯರಿಗೂ ಹಂಚಬೇಕೆಂದು ನಾನು ಒತ್ತಾಯ ಮಾಡಿದ ಮೇಲೆ ಕೃಷಿ ಮಂತ್ರಿಗಳು ಹಂಚಿದ್ದಾರೆ. ಆದರೆ ನನಗೆ ಗೊತ್ತಿರುವ ಪ್ರಕಾರ, ನನ್ನದು, ತಪ್ಪಿದ್ದರೆ ಅವರು ಕರೆಕ್ಟ್ ಮಾಡಬಹುದು. ಆ ಪ್ರತಿಯನ್ನು ಕೇಂದ್ರಸರ್ಕಾರದಿಂದ ಅವರು ತರಿಸಿಕೊಳ್ಳಲಿಲ್ಲ. ಇಲ್ಲಿ ಕಾರ್ಗಿಲ್ ಕಂಪನಿಯಿಂದ ತರಿಸಿಕೊಂಡರು. ಇಂಥ ಸರ್ಕಾರ ಇದು! ವಿಶ್ವಬ್ಯಾಂಕ್ ಕಂಡೀಷನಾಲಿಟಿ ಏನು ಎನ್ನುವುದನ್ನು ನಾನು ನಿಮಗೆ ಕೊಡಬೇಕಾ? ಸರ್ಕಾರ ನಿಮ್ಮ ಕೈಯಲ್ಲಿದೆ. ನೀವು ತರಿಸಿಕೊಳ್ಳಬೇಕು. ಇಷ್ಟು ಹೊತ್ತಿಗೆ ನೀವು ತಿಳಿದುಕೊಂಡಿರಬೇಕು. ಅದನ್ನು ತಿಳಿದುಕೊಂಡಿದ್ದರೆ, ಈ ಒಂದು ಭಾಷಣ ಹೊರಗಡೆ ಬರುತ್ತಿರಲಿಲ್ಲ. ಅದು ತಿಳಿದುಕೊಂಡಿದ್ದರೆ ಇದು ಸಾಧ್ಯವಿಲ್ಲವೆನ್ನುವುದು ನಿಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.

First Conditionality of the world Bank:

"Directives to amend Trade Rules by abolition of import protection to Indian Industries; import restrictions be totally removed."

ಇದು ವಿಶ್ವ ಬ್ಯಾಂಕ್ ಹೇಳಿದ್ದು. ನಮ್ಮ ಸರ್ಕಾರ 1991ನೇ ಬಡ್ಜೆಟ್ನಲ್ಲಿ ಕೇಂದ್ರ ಸರ್ಕಾರ ಪ್ರಕಟಣೆ ಮಾಡಿದ್ದು.

"In the New Trade Policy declaration of July 4, 1991, Imports were simplified through the EXIM scripts; import facilities and all supplementary licences were abolished.

In the Export-Import Policy in 1992-97, imports were simplified. Licencesing system and restrictions were removed and trade was made free."

Second conditionality;

"The Monopoly of Government's agencies importing canalised goods be cancelled. and they be asked to deal with the imports of samll scale sectors only."

ಸರ್ಕಾರದವರು ಏನು ಮಾಡಬೇಕು ಎನ್ನುವುದನ್ನು ವಿಶ್ವಬ್ಯಾಂಕ್ನವರು ಹೇಳಿದರು. ಅದಕ್ಕೆ ಸರ್ಕಾರ ಮಾಡಿದ್ದು ಇದು:

The Government has done is,

"The Monopoly of agencies like State Trading Corporation, Minerals and Metals trading Corporation, were cancelled on October 6, 1991 and they were brought to the level of private trading Houses."

The State Trading Corporation was brought to the level of private trading house except some exsential goods like Petroleum, Foodgrains, edible oils, and fertilisers, all other items were unlisted. In the New Import Policy, Only eight items were listed. On 17th September, 1992, DAP (Di Ammonium Phosphate) Fortiliser and on 21st September, Vitamin A and its paramix items were unlisted. ಮುಂದಿನ ಕಂಡೀಷಾನಾಲಿಟಿ, ಮೂರನೆಯದು:

"Directives to put customs duty upto 30% only on an average on capital goods and intermediate goods."

ನಮ್ಮ ಸರ್ಕಾರ ಮಾಡಿದ್ದು :

"In 1992-93, all capital goods used in coal mining Petroleum, energy and refineries, 30% customs duty was imposed.

In 1992-93, on planning imports and on general machinery, customs duty was reduced from 85% to 55%, while on electronic goods, it was fixed at 50%. On other capital goods, customs duty was reduced to 10%. The provision of concessional customs duty on intermediate goods was made."

ಈ ಸುಧಾರಣೆಗಳನ್ನು ನಮ್ಮ ಕೇಂದ್ರ ಸರ್ಕಾರ ಮಾಡಿದ್ದು.

Fourth Conditionality :

"For the import of export-oriented machineries, rebate on import duty be given. This rebate can be given in a period of 3 to 5 years."

ಇದು ವಿಶ್ವಬ್ಯಾಂಕ್ ಹೇಳಿದ್ದು; ನಮ್ಮ ಸರ್ಕಾರ ಮಾಡಿದ್ದು

"Import of export promotional capital goods was given concession."

Fifth conditionality : ಇದು ಬಹಳ ಮುಖ್ಯವಾದುದು:

"Industrial Policy be changed and restrictions put on industries be removed."

ವಿಶ್ವಬ್ಯಾಂಕ್ ಹೇಳೋದು ನಮ್ಮ ಸರ್ಕಾರಕ್ಕೆ; ನಮ್ಮ ಸರ್ಕಾರ ಮಾಡೋದು :

"In the new Industrial Policy Declaration in July 1991, licencing procedure was changed. Obtaining licences for 18 industries was only made necessary. Foreign companies can now make cent percent investment in Indian Industries.

Under the New National Mining Policy declared on March 5, 1993, several industries reserved for the public sector will be given to private sector under the new declared Policy."

Sixth conditionality : ವಿಶ್ವ ಬ್ಯಾಂಕ್ ಹೇಳೋದು

"The Public sector be reorganised and units running at a loss be closed down."

ನಮ್ಮ ಸರ್ಕಾರ ಮಾಡಿದ್ದು :

"Restructuring of the public sector was announced in the New Industrial Policy and it was decided to refer the cases of sick industries to the Board of Industrial and Financial Reconstruction."

Seventh conditionality :

"Surplus staff in industries be retrenched. For this an exit-policy be adopted. A fund be created to compensate the affected workers."

ಇದೂ ಬಹಳ ಮುಖ್ಯವಾದುದ್ದೇ :

"In 1991-92 Budget, it was decided to retire additional workers under the Golden Handshake Plan. and voluntary retirement scheme. In 1991-92, For those employees affected by the Exit Policy, a new...."

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಸಭಾಧ್ಯಕ್ಷರೇ, ತಮ್ಮ ಮುಖೇನ ನಾನು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ಕೇಳುವುದು ಇಷ್ಟೆ. ಇವತ್ತು ನಾವು ರಾಜ್ಯಪಾಲರ ಭಾಷಣದಲ್ಲಿ ಇರತಕ್ಕಂತಹ, ಕರ್ನಾಟಕಕ್ಕೆ ಸಂಬಂಧ ಪಟ್ಟಂತೆ ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈಗ ನಾವು ನ್ಯೂ ಎಕಾನಾಮಿಕ್ ಪಾಲಿಸಿ, ವರ್ಲ್ಡ್ ಬ್ಯಾಂಕ್ ಕಂಡೀಷನಾಲೀಟೀಸ್ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅದರ ಪರಿಣಾಮ ಏನಾದರೂ ನಮ್ಮ ಕಾರ್ಯಕ್ರಮದ ಮೇಲೆ ಆಗುತ್ತಿದ್ದರೆ ಅದನ್ನು ಹೇಳಬಹುದು.

ಪ್ರೊ.ಎಂ.ಡಿ. ನಂಜುಂಡಸ್ವಾಮಿ : ನೇರವಾದ ಸಂಬಂಧ ಉಂಟು ಎಂದು ನಾನು ಹೇಳುತ್ತೇನೆ. ಮೊದಲನೇ ಪಂಚವಾರ್ಷಿಕ ಯೋಜನೆಗೂ 7ನೇ ಪಂಚವಾರ್ಷಿಕ

ಯೋಜನೆಗೂ ಯಾವ್ಯಾವ ಕ್ಷೇತ್ರದಲ್ಲಿ ಏನೇನು ಆಗಿದೆ ಎಂದು. ಎಷ್ಟೆಷ್ಟು ಹಣ ಇತ್ಯಾದಿ. ನಾವು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಕೊಟ್ಟಿದ್ದೇವೆ. ಎಷ್ಟು ಪರ್ಸೆಂಟ್ ಕೊಟ್ಟಿದ್ದೇವೆ ಯಾವ ಕೆಲಸಕ್ಕೆ ಮತ್ತು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಅದೇ ಕ್ಷೇತ್ರಕ್ಕೆ ಎಷ್ಟೆಷ್ಟು ಕಡಿಮೆ ಮಾಡಿದ್ದೇವೆ. ಅದಕ್ಕೆ ಕಾರಣ ಏನು ಎನ್ನುವುದನ್ನು ಹೇಳುತ್ತೇನೆ. ಅನಂತರ ನೀವು ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಮಹಿಳೆಯರಿಗೆ, ಮಕ್ಕಳಿಗೆ ಸಮಾಜ ಕಾರ್ಯಕ್ರಮಗಳನ್ನು ಎಷ್ಟರ ಮಟ್ಟಿಗೆ ಹಾಕುತ್ತೀರಿ ಎನ್ನುವುದನ್ನು ಹೇಳುತ್ತೇನೆ.

5.45 ಪಿ.ಎಂ.

ನೇರವಾಗಿ ಸಂಬಂಧ ಇದೆ, ಕೊನೆಯದಾಗಿ, ವಿಶ್ವಬ್ಯಾಂಕ್ ಹೇಳಿದ್ದುದು,

"Share of Public Undertakings be sold.

"In 1991-92 shares worth 3.38 crores for 31 undertakings were sold. In 1992-93, it was earmarked to sell shares worth Rs. 3500 crores."

ನೀವು ಇಲ್ಲಿ ಹೇಳಿರುವುದು ಎಲ್ಲಾ ಸಂವಿಧಾನದಲ್ಲಿರುವ Directive Principles of the State Policyಗೆ ಸಂಬಂಧಪಟ್ಟಿದ್ದು ಅಲ್ಲ, ಅಲ್ಪಸಂಖ್ಯಾತರ ಕಲ್ಯಾಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಮಹಿಳೆಯರಿಗೆ ಸಮಗ್ರ ಯೋಜನೆ, ಮಕ್ಕಳ ಕಲ್ಯಾಣ, ಎಲ್ಲಾ ನಿರುದ್ಯೋಗಿ ಪದವೀಧರರಿಗೆ ಉದ್ಯೋಗ. ಇವೆಲ್ಲಾ ಸಂವಿಧಾನದಲ್ಲಿ Directive Principles of the State Policy ಯನ್ನು ತಾವು ಜಾರಿಗೆ ತರುವಂಥ ಪ್ರಯತ್ನಗಳ ಕಾರ್ಯಕ್ರಮ. ಈ ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಮ್ನಲ್ಲಿ, ನಾನು ಓದಿ ಹೇಳಿದ ಕೆಲವೇ ಬದಲಾವಣೆಗಳ ಪಟ್ಟಿಯನ್ನು ತಾವು ನೋಡಿದರೆ, ಎಷ್ಟರಮಟ್ಟಿಗೆ ಖಾಸಗೀಕರಣದಿಂದಾಗಿ means of production ಎಂದು ಏನು ಹೇಳುತ್ತೇವೆ, ಉತ್ಪಾದನಾ ಸಾಧನೆಗಳ ಮಾಲೀಕತ್ವ, ಎಷ್ಟರಮಟ್ಟಿಗೆ ಕೇಂದ್ರೀಕರಣ ಆಗುತ್ತದೆ; ಇದನ್ನು ಮಾಡಲಿಕ್ಕೆ ನಿಮಗೆ ಸಂವಿಧಾನ ಅವಕಾಶ ಕೊಟ್ಟಿದೆಯೇ? Directive Principles of the State Policy says that the means of Production should not get concentrated in the hands of a few. But it should be decentralised as far as possible so that the maximum number of people in this country get a decent standard of living. ಹೌದಾ, ನೀವು ಮಾಡುತ್ತಿರುವುದು, ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಮ್ಸ್ ಒಪ್ಪಿದ್ದೀರಿ. ಖಾಸಗೀಕರಣವನ್ನು ಮಾಡುತ್ತಾ ಇದ್ದೀರಿ. ಬರೀ ಕೇಂದ್ರ ಸರ್ಕಾರದವರು ಅಲ್ಲ ಖಾಸಗೀಕರಣ ಮಾಡುತ್ತಿರುವುದು. BIFRಗೆ ಬರೀ ಕೇಂದ್ರ ಸರ್ಕಾರದವರು ಅಲ್ಲ ಖಾಸಗಿ ಉದ್ಯಮಗಳನ್ನು ಕಳುಹಿಸಿಕೊಡುತ್ತಿರುವುದು. ಕರ್ನಾಟಕ ಸರ್ಕಾರವೂ ಕೂಡ ಮಾಡುತ್ತಿದೆ. ಚುನಾವಣೆ ವರ್ಷ ಎಂದು ಈ ವರ್ಷ ತಾವು ತಡೆದಿರಬಹುದು. ಇಲ್ಲದಿದ್ದರೆ ಸಾಬೂನು ಕಾರ್ಖಾನೆ ಮಾರಲಿಕ್ಕೆ ತಯಾರಾಗಿದ್ದೀರಿ. ನಾನು ಹೇಳುವುದು ಸುಳ್ಳೆ? ಗಂಗಾವತಿ ಕಾರ್ಖಾನೆ ಲಾಭ ಮಾಡುತ್ತಿದ್ದಂಥ ಕಾರ್ಖಾನೆಯನ್ನು BIFR ಗೆ ರೆಫರ್ ಮಾಡಿದೆ ಈ ಸರ್ಕಾರ. ಅದು ಲಾಭ ಮಾಡುತ್ತಿದ್ದಂಥ ಕಾರ್ಖಾನೆ. ನಾವು ಈಗ ಹೇಳುತ್ತಿದ್ದೇವೆ, ನಿಮ್ಮ ಕೈಯಲ್ಲಿ ನಡೆಸಲಿಕ್ಕೆ ಆಗದಿದ್ದರೆ ಬಿಡಿ, ನಾವು ಶೇರ್‌ಹೋಲ್ಡರ್ಸ್, ರೈತರು, ನಾವು ನಡೆಸುತ್ತೇವೆ. ನಮಗೆ ಗೊತ್ತಿದೆ. ತಮ್ಮ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿದ್ದೇವೆ ನಿಮ್ಮ ಕೈಯಲ್ಲಿ ನಡೆಸುವುದಕ್ಕೆ ಆಗುವುದಿಲ್ಲ ಎಂದರೆ ಗಂಗಾವತಿ ಸಕ್ಕರೆ ಕಾರ್ಖಾನೆಯನ್ನು ನಾವೇ ನಡೆಸುತ್ತೇವೆ. ಈ 27 ಕಾರ್ಖಾನೆಯನ್ನು ನಾವೇ ನಡೆಸುತ್ತೇವೆ. ಆರೋಗ್ಯವಾಗಿರತಕ್ಕ ಕಾರ್ಖಾನೆಯನ್ನು ಖಾಯಿಲೆ ಎಂದು ಮಾಡಿ, BIFRಗೆ ರೆಫರ್ ಮಾಡಿ ಕಡಿಮೆ ಬೆಲೆಗೆ ಖಾಸಗಿ ಬಂಡವಾಳಶಾಯಿಗೆ ಮಾರುವಂಥ ಒಂದು ಕಾರ್ಯಕ್ರಮ ನಡೆಯುತ್ತಿದೆ. ಜೊತೆಗೆ ನೀವು ಉದ್ಯೋಗ ಸೃಷ್ಟಿ ಮಾಡುತ್ತೀರಿ ಎಂದು. ಅದಕ್ಕೆ ಮೊದಲು ಸಭಾಧ್ಯಕ್ಷರೇ,

ಈ ಸ್ಟ್ರಕ್ಚರಲ್ ಅಡ್ಜಸ್ಟ್ಮೆಂಟ್ ಪ್ರೋಗ್ರಾಮ್ನಿಂದ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ನೀವೇನು ಸಾಮಾಜಿಕ ಕಲ್ಯಾಣ ಕಾರ್ಯಕ್ರಮ, ಗ್ರಾಮೀಣ ವಿಕಾಸ ಅಂತೆಲ್ಲಾ ಮಾತನಾಡುತ್ತಾ ಇದ್ದೀರಿ, ಅದರಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಶತ ಎಷ್ಟು ಹಣ ಕೊಡುತ್ತಿದ್ದು, 7ನೇ ಪಂಚವಾರ್ಷಿಕ ಯೋಜನೆಗೆ ಎಷ್ಟಕ್ಕೆ ಬಂದಿದ್ದೇವೆ ಎನ್ನುವುದು ಇಲ್ಲೇ ಇದೆ. ಇದು ಸರ್ಕಾರಿ ದಾಖಲೆಯಲ್ಲೇ ಇದೆ. Percentage of Plan Outlay in the First Plan and the Percentage of Plan Outlay in the First Plan for Rural Development and Agriculture:

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು 14.8 ಪರ್ಸೆಂಟ್ ಕೊಟ್ಟಿದ್ದೆವು. 7ನೇ ಪಂಚವಾರ್ಷಿಕ ಯೋಜನೆಯಲ್ಲಿ it has come down to 10.9%. ಮಾನ್ಯ ರಾಮಯ್ಯನವರು ನೀರಾವರಿ ಬಗ್ಗೆ ಮಾತನಾಡುತ್ತಿದ್ದರು.

ನೀರಾವರಿಗೆ ನಾವು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 22.2 ಪರ್ಸೆಂಟ್ ಕೊಟ್ಟಿದ್ದೆವು. 7ನೇ ಯೋಜನೆಯಲ್ಲಿ 9.4 ಪರ್ಸೆಂಟ್ಗೆ ಇಳಿಯಿತು. ಎಜುಕೇಷನ್‌ಗೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 7.6 ಪರ್ಸೆಂಟ್, 7ನೇ ಯೋಜನೆಯಲ್ಲಿ 3.5 ಪರ್ಸೆಂಟ್. ಅರ್ಧಕ್ಕಿಂತ ಕಡಿಮೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಟೋಟಲ್ ಪ್ಲಾನ್ ಔಟ್ಲೇನ್ 5 ಪರ್ಸೆಂಟ್. 7ನೇ ಯೋಜನೆಯಲ್ಲಿ 3.7 ಪರ್ಸೆಂಟ್. ಮಹಿಳೆಯರಿಗೆ ಸಮಗ್ರ ಕಾರ್ಯಕ್ರಮ, ಮಕ್ಕಳ ಕಲ್ಯಾಣ. In the first one year of the implementation of a structural adjustment programme in India, 6.6 million additional people were rendered jobless. I am quoting from Government of India figures. ಇಂಥ ಹಿನ್ನೆಲೆಯಲ್ಲಿ ನೀವು ಏನು ಕಾರ್ಯಕ್ರಮವನ್ನು ಈ ಪುಟಗಳಲ್ಲಿ ಹಾಕಿದ್ದೀರಿ ಇದರಲ್ಲಿ ಒಂದನ್ನೂ ಕೂಡ ನೀವು ಮಾಡುವುದಕ್ಕಾಗುವುದಿಲ್ಲ. ನೀವು ಎಲ್ಲಿಯವರೆಗೆ ವಿಶ್ವಬ್ಯಾಂಕ್ನ ಷರತ್ತುಗಳಿಗೆ ಒಪ್ಪಿಕೊಂಡು ಕೆಲಸಮಾಡುತ್ತೇವೆಂದು ಹೇಳುತ್ತೀರಿ ಅದುವರೆಗೂ ನೀವು ಇಲ್ಲಿ ಹೇಳಿರತಕ್ಕಂಥ ಒಂದೇ ಒಂದು ಕಾರ್ಯಕ್ರಮವನ್ನೂ ನೀವು ಮಾಡುವುದಕ್ಕಾಗುವುದಿಲ್ಲ. ಇದು ನಿಮ್ಮನ್ನು ನೀವೇ ಕೀಟಲೆ ಮಾಡಿಕೊಳ್ಳುವಂಥ ಕೆಲಸವಾಗಿದೆ - kidding yourselves; this government is kidding itself, and nothing more. ಹೊಸ ಆರ್ಥಿಕ ನೀತಿಯನ್ನು ಖಾಸಗೀಕರಣ ಮಾಡುವುದಕ್ಕೆ ನಮ್ಮ ಆಡಳಿತವನ್ನು ನಡೆಸುವವರಿಗೆ ಒಂದು ನೆಪ ಬೇಕಾಗಿತ್ತು. ಉದಾರೀಕರಣ ಅವರಿಗೆ ಒಂದು ಒಳ್ಳೆಯ ನೆಪ ಆಯಿತು. ಉದಾರೀಕರಣದ ನೆಪದಲ್ಲಿ ಜನರ ಆಸ್ತಿಪಾಸ್ತಿ ಏನಿದೆ ಅದನ್ನು ಖಾಸಗೀ ಬಂಡವಾಳ ಶಾಹಿಗಳ ಕೈಗೆ ಕೊಡುವಂಥ ಒಂದು ಕಾರ್ಯಕ್ರಮವಾಯಿತು. ಇದನ್ನೇ ಹೊಸ ಆರ್ಥಿಕ ನೀತಿ ಎಂದು ಹೇಳತಕ್ಕದ್ದು. ಕೇವಲ ಖಾಸಗೀ ಬಂಡವಾಳ ಶಾಹಿಗಳು ಮಾತ್ರವೇ ಅಲ್ಲ ಈ ದೇಶದಲ್ಲಿ ನಿರುದ್ಯೋಗವನ್ನು ಸೃಷ್ಟಿ ಮಾಡುವವರು ನಿಮ್ಮ ಸ್ಟ್ರಕ್ಚರಲ್ ಅಡ್ಜಸ್ಟ್ಮೆಂಟ್ ಪ್ರೋಗ್ರಾಂನಲ್ಲಿ ಬೇರೆ ದೇಶದ ಬಂಡವಾಳ ಶಾಹಿಗಳು ಇಲ್ಲಿ ಬಂದು ಪೂರ್ತಿ ಬಂಡವಾಳವನ್ನು ಹೂಡಬಹುದೆಂದು ಹೇಳುತ್ತಿದ್ದಾರೆ. ಕ್ಯಾಪಿಟಲ್ ಗೂಡ್ಸ್ನ ನಾವು ಎಕ್ಸೈಜ್ನು, ಕಸ್ಟಂಸನ್ನು ತೆಗೆದಿದ್ದೇವೆಂದು ಏನು ಹೇಳುತ್ತಿದ್ದೀರಿ ಅದರಿಂದ ಯಾವುದೇ ರೀತಿಯ ತಾಂತ್ರೀಕತೆಯನ್ನು ಈ ದೇಶದೊಳಗೆ ತರಬಹುದು. ಅವರು ಎಂಥ ತಾಂತ್ರೀಕತೆಯನ್ನು ತರುತ್ತಾರೆ? It will be only capital intensive automated computerised hitech industry. ನಾವು ಇಷ್ಟರಲ್ಲೇ 1000 ಮಿಲಿಯನ್ ಜನ ಆಗುತ್ತೇವೆ. ಈಗ ನೀವು ಉದಾರೀಕರಣದ ಬಾಗಿಲನ್ನು ತೆರೆಯುವ ಕಾರ್ಯಕ್ರಮವನ್ನು ಮಾಡಿದ್ದೀರಿ, ತನ್ಮೂಲಕ ವಿದೇಶೀ ಬಂಡವಾಳ ಶಾಹಿಗಳು ಬರುತ್ತಿದ್ದಾರೆ, ಅವರು ಮನುಷ್ಯರೇ ಬೇಕಿಲ್ಲದಂಥ ಯಂತ್ರಗಳನ್ನು ತರುತ್ತಾರೆ. ಅದರಿಂದ ಯಾವ ಪ್ರಮಾಣದ ನಿರುದ್ಯೋಗ ಸೃಷ್ಟಿಯಾಗುತ್ತದೆ ಎಂಬ ಪ್ರಜ್ಞೆ ಇಲ್ಲದೇ ಮಾಡಿರತಕ್ಕ ಭಾಷಣ ಇದು. ಎಲ್ಲಾ ಕ್ಷೇತ್ರದಲ್ಲೂ ನಿರುದ್ಯೋಗವನ್ನು ಸೃಷ್ಟಿ ಮಾಡುವಂಥ ಹೊಸ ಆರ್ಥಿಕ ನೀತಿ ಒಪ್ಪಿ ನೀವಿನ್ನೂ ಸಮಾಜಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಿದ್ದರೆ, ಈ

ಸದನದಲ್ಲಿರುವವರಿಗೆ ಅರ್ಥ ಶಾಸ್ತ್ರದ ಬಗ್ಗೆ, ರಾಜ್ಯಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲವೆಂದು ತಿಳಿದುಕೊಂಡು ಮಾಡಬೇಡಿ. ನೀವು ಅಂದರೆ ಈ ಸರ್ಕಾರ ಕನಿಷ್ಠ ಜ್ಞಾನ ಪಡೆಯುವಂಥ ಕೆಲಸ ಮಾಡಿ. It should try to get atleast elementary knowledge of politics and economics before it places such a document before this House.

6. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

5. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಈ ಕಾಯ್ದೆ 5.2.92ರಲ್ಲಿ ನೋಟಿಫಿಕೇಷನ್ ಆಗಿ ಈ ಕಾಯ್ದೆ 1.8.92ರಲ್ಲಿ ಜಾರಿಗೆ ಬಂದಿದೆ. ಜಾರಿಗೆ ಬಂದಮೇಲೆ ಆ ದಿನಾಂಕದಿಂದ 60 ದಿನಗಳ ಒಳಗೆ ಅಪ್ಲಿಕೇಷನ್ಸ್ ಹಾಕಬೇಕಾಗಿತ್ತು. ಯಾರೇ ಅಕ್ರಮವಾಗಿ 31.3.90ಕ್ಕೆ ಹಿಂದೆ ಮನೆ ಕಟ್ಟಿರತಕ್ಕವರು ಇದು ಜಾರಿಗೆ ಬಂದ 1.8.92ರಿಂದ 60 ದಿವಸಗಳಲ್ಲಿ ಅರ್ಜಿ ಹಾಕಬೇಕಾಗಿತ್ತು. ಅದು ಕಾರಣಾಂತರದಿಂದ ಮುಂದೆ ಹೋಗಿದ್ದರಿಂದ 2 ವರ್ಷ ಮುಂದು ಹಾಕಬೇಕೆಂದು